ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಮೇ 13 ಸೋಮವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 27 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಸಂತ್ರಸ್ತೆ ಅಪಹರಣ ಪ್ರಕರಣಕ್ಕೆ ಟ್ವಿಸ್ಟ್

ನಾನು ಕಿಡ್ನ್ಯಾಪ್ ಆಗಿಲ್ಲ

- ಸಂತ್ರಸ್ತೆ ವೀಡಿಯೋ ವೈರಲ್
- ಸಂಬಂಧಿಕರ ಮನೆಗೆ ನಾನೇ ಬಂದಿದ್ದೇನೆ
- ಮಗ ಗಾಬರಿಯಿಂದ ಪೊಲೀಸರಿಗೆ ಕಂಪ್ಲೆಂಟ್ ಕೊಟ್ಟಿದ್ದಾನೆ
- ರೇವಣ್ಣ ಕುಟುಂಬದವರಿಂದ ನನಗೆ ಯಾವುದೇ ತೊಂದರೆಯಾಗಿಲ್ಲ
- ಮೊಬೈಲ್‌ನಲ್ಲಿ ಬಂದಿರುವ ವೀಡಿಯೋಗೂ ನನಗೂ ಸಂಬಂಧವಿಲ್ಲ

ಬೆಂಗಳೂರು, ಮೇ 12– ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯದ ಸಂತ್ರಸ್ತೆಯ ಅಪಹರಣ ಪ್ರಕರಣಕ್ಕೆ ಟ್ವಿಸ್ಟ್ ದೊರೆತ್ತಿದ್ದು, ತನ್ನನ್ನು ಯಾರೂ ಕಿಡ್ನಾಪ್ ಮಾಡಿಲ್ಲ ಎಂದು ಸಂತ್ರಸ್ತೆ ಮಾತನಾಡಿರುವ ವೀಡಿಯೋ ವೈರಲ್ ಆಗಿದೆ.

ಈ ಸಂತ್ರಸ್ತೆಯನ್ನು ಏ.29ರಂದು ಶಾಸಕ ರೇವಣ್ಣ ಆಪ್ತ ಸತೀಶ್ ಬಾಬಣ್ಣ ಎಂಬಾತ ತಮ್ಮ ಮನೆಯಿಂದ ಕರೆದೊಯ್ದಿದ್ದು, ಪ್ರಜ್ವಲ್ ರೇವಣ್ಣ ವೀಡಿಯೋದಲ್ಲಿ ತನ್ನ ತಾಯಿ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ ದೃಶ್ಯಗಳಿವೆ ಎಂದು ಸಂಬಂಧಿಕರು ತಿಳಿಸಿದ್ದಾರೆ. ತಾಯಿ ಪ್ರಾಣಕ್ಕೆ ಅಪಾಯವಿದೆ, ಆಕೆಯನ್ನು ರಕ್ಷಿಸಬೇಕು ಎಂದು ಸಂತ್ರಸ್ತೆಯ ಪುತ್ರ ಮೇ 1ರಂದು ಕೆ.ಆರ್.ನಗರ ಠಾಣೆಗೆ ದೂರು ಸಲ್ಲಿಸಿದ್ದ.

ಈ ಪ್ರಕರಣದಲ್ಲಿ ಎಚ್.ಡಿ.ರೇವಣ್ಣ ಮತ್ತು ಸತೀಶ್ ಬಾಬಣ್ಣ ಬಂಧಿಸಲ್ಪಟ್ಟಿದ್ದಾರೆ. ಮೇ 4ರಂದು ಎಸ್‌ಐಟಿ ತಂಡ ರೇವಣ್ಣನವರ ಹಿಂದಿನ ಆಪ್ತ ಕಾರ್ಯದರ್ಶಿ ರಾಜಶೇಖರ್ ಎಂಬುವರ ತೋಟದ ಮನೆಯಲ್ಲಿ ಆಕೆಯನ್ನು ರಕ್ಷಿಸಿದ್ದಾಗಿ ಹೇಳಿಕೊಂಡಿತ್ತು.

ಎಚ್.ಡಿ.ರೇವಣ್ಣ ಅವರ ಜಾಮೀನು ಅರ್ಜಿ ವಿಚಾರಣೆ ನಾಳೆ (ಸೋಮವಾರ) ನಡೆಯಲಿದ್ದು, ಈ ನಡುವೆ ಸಂತ್ರಸ್ತೆಯ ವೀಡಿಯೋ ವೈರಲ್ ಆಗಿ ಪ್ರಕರಣಕ್ಕೆ ತಿರುವು ನೀಡಿದೆ. ವೀಡಿಯೋದಲ್ಲಿ ಮಾತನಾಡಿರುವ ಸಂತ್ರಸ್ತೆ, ನನ್ನನ್ನು ಯಾರೂ ಕಿಡ್ನಾಪ್ ಮಾಡಿಲ್ಲ. ನಾಲ್ಕು ದಿನ ಇದ್ದು ಬರೋಣ ಎಂದು ಸಂಬಂಧಿಕರ ಮನೆಗೆ ಬಂದಿದ್ದೇನೆ. ನನ್ನ ಮಗ ಗಾಬರಿಯಾಗಿ ಪೊಲೀಸರಿಗೆ ದೂರು ಕೊಟ್ಟಿದ್ದಾನೆ. ನನಗೆ ಭವಾನಿ ಅಕ್ಕ, ರೇವಣ್ಣ, ಪ್ರಜ್ವಲ್, ಬಾಬಣ್ಣ ಯಾರೂ ಯಾವುದೇ ತೊಂದರೆ ಕೊಟ್ಟಿಲ್ಲ. ನಾನು ಸಂಬಂಧಿಕರ ಮನೆಯಲ್ಲಿದ್ದೇನೆ. ಈಗ ಟಿವಿಯಲ್ಲಿ ಏನೇನೋ ಬರುತ್ತಿದೆ. ಮೊಬೈಲ್‌ನಲ್ಲಿ ಬಂದಿರುವ ವೀಡಿಯೋಗೂ ನನಗೂ ಸಂಬಂಧ ಇಲ್ಲ. ಎರಡು ದಿನ ಕಳೆದು ಬರುತ್ತೇನೆ. ನಮ್ಮ ಮನೆಗೆ ಪೊಲೀಸರನ್ನು ಕಳುಹಿಸಬೇಡಿ. ನಮ್ಮ ಮನೆಯವರಿಗೆ ತೊಂದರೆ ಕೊಡಬೇಡಿ. ಅವರಿಗೇನಾದರೂ ಆದರೆ ನೀವೇ ಹೊಣೆ ಎಂಬ ಒಕ್ಕಣೆ ಇರುವ 2 ನಿಮಿಷ 32 ಸೆಕೆಂಡ್ ವೀಡಿಯೋ ವೈರಲ್ ಆಗಿದ್ದು, ಮಹಿಳೆ ತನಗೆ ರೇವಣ್ಣ ಕುಟುಂಬದಿಂದ ಯಾವುದೇ ತೊಂದರೆ ಆಗಿಲ್ಲ ಎಂದು ಪದೇ ಪದೆ ಹೇಳಿದ್ದಾಳೆ. ಸಂತ್ರಸ್ತೆಯ ಈ ವೀಡಿಯೋವನ್ನು ನೋಡಿದಾಗ ಆಕೆ ಅಪಹರಣವೇ ಆಗಿಲ್ಲ ಎಂಬಂತೆ ಭಾಸವಾಗುತ್ತದೆ. ಹಾಲಿ ಈ ಮಹಿಳೆ ಎಸ್‌ಐಟಿ ರಕ್ಷಣೆಯಲ್ಲಿದ್ದಾಳೆ. ಈಕೆ ನ್ಯಾಯಾಧೀಶರ ಮುಂದೆ ಹೇಳಿಕೆಯನ್ನೂ ನೀಡಿದ್ದಾಳೆ ಎನ್ನಲಾಗಿದೆ. ಇಂದು ವೈರಲ್

● 8ನೇ ಪುಟಕ್ಕೆ

ಇಂದು ಶಾಸಕ ರೇವಣ್ಣ ಜಾಮೀನು ಅರ್ಜಿ ವಿಚಾರಣೆ



ಬೆಂಗಳೂರು, ಮೇ 12–ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಸಂತ್ರಸ್ತೆಯ ಅಪಹರಣ ಪ್ರಕರಣದಲ್ಲಿ ಬಂಧಿತರಾಗಿರುವ ಶಾಸಕ ಹೆಚ್.ಡಿ.ರೇವಣ್ಣ ಅವರ ಜಾಮೀನು ಅರ್ಜಿ ವಿಚಾರಣೆ ನಾಳೆ (ಸೋಮವಾರ) ನಡೆಯಲಿದೆ.

ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆಯನ್ನು ಏ.29ರಂದು ರೇವಣ್ಣ ಅವರ ಸೂಚನೆ ಮೇರೆಗೆ ಸತೀಶ್ ಬಾಬಣ್ಣ ಎಂಬಾತ ಅಪಹರಿಸಿದ್ದಾನೆ ಎಂದು ಕೆ.ಆರ್.ನಗರ ಠಾಣೆಯಲ್ಲಿ ಮೇ 1ರಂದು ಸಂತ್ರಸ್ತೆಯ ಪುತ್ರನಿಂದ ದೂರು ದಾಖಲಾಗಿತ್ತು. ಈ ಪ್ರಕರಣದಲ್ಲಿ ಮರು ದಿನವೇ ಸತೀಶ್ ಬಾಬಣ್ಣ ಎಂಬಾತನನ್ನು ಬಂಧಿಸಲಾಗಿತ್ತು. ಮೇ 4ರಂದು ರೇವಣ್ಣ ಅವರ ಹಿಂದಿನ ಆಪ್ತ ಸಹಾಯಕ ರಾಜಶೇಖರ್ ಎಂಬುವರ ತೋಟದ ಮನೆಯಿಂದ ಸಂತ್ರಸ್ತೆಯನ್ನು ರಕ್ಷಿಸಿದ್ದಾಗಿ ಎಸ್‌ಐಟಿ ತಿಳಿಸಿತ್ತು.

ರೇವಣ್ಣ ಅವರ ನಿರೀಕ್ಷಣಾ ಅರ್ಜಿ ವಿಚಾರಣೆ ಮುಂದೂಡಿದ

● 8ನೇ ಪುಟಕ್ಕೆ

ಪ್ರಜ್ವಲ್ ರೇವಣ್ಣ ಕರೆತರಲು ಎಸ್‌ಐಟಿ ವಿದೇಶಕ್ಕೆ ಹೋಗುವುದಿಲ್ಲ

ಬೆಂಗಳೂರು, ಮೇ 12– ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಅವರನ್ನು ವಾಪಸ್ ಕರೆತರಲು ವಿದೇಶಕ್ಕೆ ಹೋಗುವುದಿಲ್ಲ ಮತ್ತು ಇಂಟರ್‌ಪೋಲ್ ಪ್ರಜ್ವಲ್ ಕುರಿತಾದ ಮಾಹಿತಿ ಹಂಚಿಕೊಳ್ಳಲಿದೆ ಎಂದು ಗೃಹ ಸಚಿವ ಜಿ ಪರಮೇಶ್ವರ ಅವರು ಭಾನುವಾರ ಹೇಳಿದ್ದಾರೆ.

ಇದೊಂದು ಸೂಕ್ಷ್ಮವಾಗಿರುವ ಪ್ರಕರಣವಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಸಾರ್ವಜನಿಕ ಹೇಳಿಕೆಗಳನ್ನು ನೀಡುವುದು ಅಥವಾ ಮಾಹಿತಿಯನ್ನು ಹಂಚಿಕೊಳ್ಳುವ ಬಗ್ಗೆ ಅವರು ರಾಜಕೀಯ ಮುಖಂಡರಿಗೆ ಎಚ್ಚರಿಕೆ ನೀಡಿದರು.

ಕರ್ನಾಟಕದಲ್ಲಿ ಲೋಕಸಭೆ ಚುನಾವಣೆಯ ಮೊದಲ ಹಂತದ ಮತದಾನ ನಡೆದ ಒಂದು ದಿನದ ನಂತರ ಅಂದರೆ ಏಪ್ರಿಲ್ 27 ರಂದು ಪ್ರಜ್ವಲ್ ರೇವಣ್ಣ ವಿದೇಶಕ್ಕೆ ಹಾರಿದ್ದಾರೆ.



ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ತಂಡ ವಿದೇಶ ಪ್ರವಾಸ ಕೈಗೊಂಡಿರುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಅವರು, ಇಲ್ಲ, ಅಂತಹ ಯಾವುದೇ ಆಯ್ಕೆ ಇಲ್ಲ. ಬ್ಲೂ ಕಾರ್ನರ್ ನೋಟಿಸ್ ನೀಡಲಾಗಿದೆ ಮತ್ತು ಇಂಟರ್‌ಪೋಲ್ ಪ್ರಜ್ವಲ್ ಬಗ್ಗೆ ಮಾಹಿತಿಯನ್ನು ಹಂಚಿಕೊಳ್ಳುತ್ತದೆ. ಪ್ರಜ್ವಲ್ ಪತ್ತೆಯಾದ ಅಥವಾ ಗುರುತಿಸಲಾದ ಆಯಾ ದೇಶ ಇಂಟರ್‌ಪೋಲ್‌ಗೆ ಮಾಹಿತಿ ನೀಡುತ್ತಾರೆ ಮತ್ತು ನಂತರ ಸಿಬಿಐ ತಿಳಿದುಕೊಳ್ಳುತ್ತದೆ ಮತ್ತು

● 8ನೇ ಪುಟಕ್ಕೆ

ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಹಂಚಿಕೆ ಪ್ರಕರಣ

ಮಾಜಿ ಶಾಸಕ ಪ್ರೀತಂಗೌಡ ಆಪ್ತರ ಬಂಧನ

ಹಾಸನ, ಮೇ 12–ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯದ ಪೆನ್ ಡ್ರೈವ್ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಸನದ ಮಾಜಿ ಶಾಸಕ ಬಿಜೆಪಿಯ ಪ್ರೀತಂಗೌಡ ಅವರ ಇಬ್ಬರು ಆಪ್ತರನ್ನು ಎಸ್‌ಐಟಿ ತಂಡ ಬಂಧಿಸಿದೆ.





ಪ್ರೀತಂಗೌಡರ ಕಚೇರಿ ಸಿಬ್ಬಂದಿ ಹಾಸನ ತಾಲೂಕು ಯಲಗುಂದ ಗ್ರಾಮದ ಚೇತನ್ ಮತ್ತು ಪ್ರೀತಂಗೌಡ ಆಪ್ತ ಶ್ರವಣಬೆಳಗೊಳದ ಲಿಖಿತ್‌ಗೌಡ ಬಂಧಿತರಾಗಿದ್ದು, ಇವರಿಬ್ಬರನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಚೇತನ್ ಮತ್ತು ಲಿಖಿತ್‌ಗೌಡ ಅವರನ್ನು ಶನಿವಾರ ತಡರಾತ್ರಿ ಎಸ್‌ಐಟಿ ತಂಡ ಬಂಧಿಸಿ, ಎರಡು ಪ್ರತ್ಯೇಕ ತಂಡಗಳು ಶ್ರವಣಬೆಳಗೊಳದಲ್ಲಿರುವ ಲಿಖಿತ್‌ಗೌಡನ ಮನೆ ಹಾಗೂ ಯಲಗುಂದದ ಚೇತನ್ ಮನೆಯಲ್ಲಿ ಶೋಧ ನಡೆಸಿದರು. ನಂತರ ಅವರಿಬ್ಬರನ್ನು ಹಾಸನದ ಸೆನ್ ಠಾಣೆಯಲ್ಲಿ ವಿಚಾರಣೆ ನಡೆಸಿದ ನಂತರ ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಅವರನ್ನು ಮೇ 25ರವರೆಗೆ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಹೆಚ್ಚಿನ ವಿಚಾರಣೆಗಾಗಿ ಇವರನ್ನು ತಮಗೆ ಒಪ್ಪಿಸುವಂತೆ ಸೋಮವಾರ ಎಸ್‌ಐಟಿ ಅಧಿಕಾರಿಗಳು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸುವ ಸಾಧ್ಯತೆ ಇದೆ.

ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯದ ಪೆನ್‌ಡ್ರೈವ್ ಹಂಚಿಕೆ ಸಂಬಂಧ ಏ.23 ರಂದು ಪ್ರಜ್ವಲ್ ಕಾರು ಚಾಲಕ ಕಾರ್ತಿಕ್ ಗೌಡ, ಪುಟ್ಟಿ ಅಲಿಯಾಸ್ ಪುಟ್ಟರಾಜು ಮತ್ತು ನವೀನ್‌ಗೌಡ ವಿರುದ್ಧ ಹಾಸನ ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ಮೂವರು ಆರೋಪಿಗಳ ನಿರೀಕ್ಷಣಾ ಜಾಮೀನು ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿತ್ತು. ಇದೀಗ ಮಾಜಿ ಶಾಸಕ ಬಿಜೆಪಿಯ ಪ್ರೀತಂಗೌಡರ ಇಬ್ಬರು ಆಪ್ತರು ಬಂಧಿಸಲ್ಪಟ್ಟಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ವಿಧಾನಪರಿಷತ್ ಚುನಾವಣೆ

ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲೂ ಜೆಡಿಎಸ್ ಸ್ಪರ್ಧೆ

ಘೋಷಿಸಿದ್ದ ಅಭ್ಯರ್ಥಿ ಹಿಂಪಡೆದ ಬಿಜೆಪಿ

ಮೈಸೂರು, ಮೇ 12– ವಿಧಾನ ಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಬಿಜೆಪಿ ಘೋಷಿಸಿದ್ದ ಅಭ್ಯರ್ಥಿ ಈ.ಸಿ. ನಿಂಗರಾಜುಗೌಡ ಅವರನ್ನು ಹಿಂಪಡೆದಿದ್ದು, ಈ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟಿದೆ.

ವಿಧಾನಪರಿಷತ್‌ನ 6 ಕ್ಷೇತ್ರಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ನಡುವೆ ಮೈತ್ರಿ ಏರ್ಪಟ್ಟಿದ್ದು, ನಿನ್ನೆಯಷ್ಟೇ ಜೆಡಿಎಸ್‌ಗೆ ಬಿಜೆಪಿ ನೈರುತ್ಯ ಶಿಕ್ಷಣ ಕ್ಷೇತ್ರವನ್ನು ಬಿಟ್ಟು ಕೊಟ್ಟು ಉಳಿದಂತೆ ಈಶಾನ್ಯ ಪದವೀಧರರ ಕ್ಷೇತ್ರಕ್ಕೆ ಅಮರನಾಥ ಪಾಟೀಲ್, ನೈರುತ್ಯ ಪದವೀಧರರ ಕ್ಷೇತ್ರಕ್ಕೆ ಡಾ. ಧನಂಜಯ ಸುರ್ಜೆ, ಬೆಂಗಳೂರು ಪದವೀಧರರ ಕ್ಷೇತ್ರಕ್ಕೆ ಅ. ದೇವೇಗೌಡ, ಆಗ್ನೇಯ ಶಿಕ್ಷಕರ ಕ್ಷೇತ್ರಕ್ಕೆ ವೈ.ಎ. ನಾರಾಯಣಸ್ವಾಮಿ ಮತ್ತು ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಈ.ಸಿ. ನಿಂಗರಾಜುಗೌಡ ಅವರ ಹೆಸರುಗಳನ್ನು ಪ್ರಕಟಿಸಿತ್ತು. ಆದರೆ, ಇಂದು ಜೆಡಿಎಸ್ ರಾಜ್ಯಾಧ್ಯಕ್ಷರೂ ಆದ ಮಾಜಿ ಮುಖ್ಯಮಂತ್ರಿ

● 8ನೇ ಪುಟಕ್ಕೆ

ವಿಶ್ವಮಾನವ ವಿದ್ಯಾನಿಕೇತನ ಶಾಲೆಗೆ ಉತ್ತಮ ಫಲಿತಾಂಶ


ಜ್ಞಾನವಿ


ಲಿಖಿತ್


ಲಕ್ಷ್ಮಿ


ಯಶಸ್ವಿನಿ

ಮೈಸೂರು, ಮೇ 12– ಮೈಸೂರಿನ ರಾಮಕೃಷ್ಣನಗರದಲ್ಲಿರುವ ವಿಶ್ವಮಾನವ ವಿದ್ಯಾನಿಕೇತನ ಶಾಲೆಯಲ್ಲಿ 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.97 ಫಲಿತಾಂಶ ಬಂದಿದೆ. ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳಲ್ಲಿ ಜ್ಞಾನವಿ ಎಂಎಲ್ ವಿದ್ಯಾರ್ಥಿನಿ 625ಕ್ಕೆ 595 ಅಂಕಗಳನ್ನು ಪಡೆದು ಶೇಕಡ 95.2 ಫಲಿತಾಂಶ ಪಡೆದಿದ್ದಾಳೆ. ಅತ್ಯುನ್ನತ ಶ್ರೇಣಿ–04, ಪ್ರಥಮ ಶ್ರೇಣಿ–15, ದ್ವಿತೀಯ ಶ್ರೇಣಿ–07, ತೃತೀಯ ಶ್ರೇಣಿ–02 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.

ಎಂಆರ್‌ಪಿಎಲ್ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಸುದರ್ಶನ್ ನೇಮಕ



ಮೈಸೂರು, ಮೇ 12– ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (MRPL)ನ ಕಾರ್ಯ ನಿರ್ವಾಹಕ ನಿರ್ದೇಶಕರಾಗಿ (ರಿಫೈನರಿ) ಬಿ ಸುದರ್ಶನ್ ನೇಮಕಗೊಂಡಿದ್ದಾರೆ. ಅವರು ಈ ಹಿಂದೆ ಗ್ರೂಪ್ ಜನರಲ್ ಮ್ಯಾನೇಜರ್–ಮಾರ್ಕೆಟಿಂಗ್ ಪ್ರಾಜೆಕ್ಟ್ಸ್ ಕಚೇರಿಯನ್ನು ಹೊಂದಿದ್ದರು. MRPLನ ಬೆಂಗಳೂರು ಕಚೇರಿಯ ಮುಖ್ಯಸ್ಥರೂ ಆಗಿದ್ದರು.

ಮೈಸೂರಿನವರಾದ ಬಿ.ಸುದರ್ಶನ್ ಅವರು ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಹಳೆ ವಿದ್ಯಾರ್ಥಿ.



ಯುಪಿಎಸ್‌ಸಿ: ಚಂದ್ರಭೂಷಣ್‌ಗೆ 123ನೇ ರ‍್ಯಾಂಕ್

ಮೈಸೂರು, ಮೇ 12– ಇತ್ತೀಚೆಗೆ ನಡೆದ ಯುಪಿಎಸ್‌ಸಿ ಪರೀಕ್ಷೆಯ ಐಎಸ್‌ಎಫ್‌ನಲ್ಲಿ ಚಂದ್ರಭೂಷಣ್ 123ನೇ ರ‍್ಯಾಂಕ್ ಪಡೆದಿದ್ದಾರೆ. ಇವರು ಬಿಇ (ಸಿವಿಲ್) ಮತ್ತು ಎಂಬಿಎ (ಹೆಚ್‌ಆರ್) ಪದವೀಧರರಾಗಿದ್ದಾರೆ. ಹಾಗೂ ಕರ್ನಾಟಕ ಜಲಸಂಪನ್ಮೂಲ ಇಲಾಖೆಯಲ್ಲಿ ಸಹಾಯಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರು ಮೈಸೂರಿನ ವಿಜಯನಗರ ಎರಡನೇ ಹಂತದ ನಿವಾಸಿ ಡಾ.ಎಂ.ಎಸ್. ಯಶೋಧ ಮತ್ತು ಹೆಚ್.ಎಸ್.ನಾಗಭೂಷಣ ದಂಪತಿ ಪುತ್ರ.

ನಿಧನ




ರಂಗಮ್ಮ

ಮೈಸೂರು, ಮೇ 12– ಮೈಸೂರಿನ ಗಾಂಧಿನಗರದ ಶ್ರೀದುರ್ಗಾದೇವಿ ದೇವಸ್ಥಾನದ ರಸ್ತೆ ನಿವಾಸಿ ಲೇಟ್ ಪಾಪಯ್ಯ ಅವರ ಧರ್ಮಪತ್ನಿ ಶ್ರೀಮತಿ ರಂಗಮ್ಮ (74) ಅವರು ಶನಿವಾರ ತಮ್ಮ ನಿವಾಸದಲ್ಲಿ ನಿಧನರಾದರು.

ಮೃತರು ಮಕ್ಕಳಾದ ಕಲಾರಾಣಿ, ರಾಜು, ಗೀತಾ, ಶ್ಯಾಮ್ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

13.05.2024 ಸೋಮವಾರ, ಮಳೆ ನಕ್ಷತ್ರ: ಕೃತ್ತಿಕ 11.05.2024ರಿಂದ 24.05.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್:** ಆರ್ಟಿಸ್ಟ್ರಿ ಚಿನ್ನಾಭರಣ ಪ್ರದರ್ಶನ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂ, ಬಿ.ಎನ್.ರಸ್ತೆ, ಬೆಳಗ್ಗೆ 10 ಗಂಟೆಯಿಂದ.
- **ಋಷಿ ಸಂಸ್ಕೃತಿ ವಿದ್ಯಾ ಕೇಂದ್ರ:** ಸಿದ್ಧ ಸಮಾಧಿ ಯೋಗ ಶಿಬಿರ, ಸ್ಥಳ: ಋಷಿ ಸಂಸ್ಕೃತಿ ವಿದ್ಯಾ ಕೇಂದ್ರ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6 ಗಂಟೆಯಿಂದ.
- **ಶ್ರೀ ಶಂಕರ ಜಯಂತಿ ಸಭಾ :** ಶ್ರೀ ಶಂಕರ ಭಗವತ್ಪಾದರ ಜಯಂತ್ಯುತ್ಸವ ಹಾಗೂ 45ನೇ ವಾರ್ಷಿಕೋತ್ಸವ–2024, ಬೆಳಗ್ಗೆ 10.30ಕ್ಕೆ ವಾರ್ಷಿಕೋತ್ಸವ ಉದ್ಘಾಟನೆ ಮತ್ತು ಉಪನ್ಯಾಸ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪನಾಥ್ ಅವರಿಂದ. ಸಂಜೆ 5ರಿಂದ ವಿದುಷಿ ಶ್ರೀಮತಿ ಕೃಪಾ ಫಡ್ಕೆ ಅವರ ಶಿಷ್ಯರಾದ ಚಿ॥ ಪೂಜಾ ಸುಗಮ್ ಹಾಗೂ ತಂಡದವರಿಂದ ಭರತನಾಟ್ಯ, ಸ್ಥಳ: ಸಮುದಾಯ ಭವನ, ತೆಂಗಿನತೋಪು, ಸರಸ್ವತಿಪುರಂ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ
- **ವಿಪ್ರ ಜಾಗೃತಿ ವೇದಿಕೆ :** ಆದಿಗುರು ಶಂಕರಾಚಾರ್ಯರ ಭವ್ಯ ರಥೋತ್ಸವ, ಉಪಸ್ಥಿತರು: ಶಾಸಕ ಟಿ.ಎಸ್.ಶ್ರೀವತ್ಸ, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಸ್ಥಳ: ಆವನಿ ಶಂಕರ ಮಠ, ವಿದ್ಯಾರಣ್ಯಪುರಂ, ಸಂಜೆ 6 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15 –ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಕರುನಾಡ ಕಬ್ಬಿಗರು, ಲೇಖನ: ಡಾ.ವಿನೋದಾ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 6.40–ಪದ ಸಂಸ್ಕೃತಿ, ಪ್ರಸ್ತುತಿ: ಡಾ.ಆರ್.ರಾಮಕೃಷ್ಣ, 6.50–ರೈತರಿಗೆ ಸಲಹೆ, 7.15–ಕಾದಂಬರಿ ವಿಹಾರ, ಮುಂದಿನ ವಾರದಿಂದ ಪ್ರಾರಂಭವಾಗಲಿರುವ ನೂತನ ಕಾದಂಬರಿಯ ಬಾನುಲಿ ಓದಿಗೊಂದು ಪ್ರಸ್ತಾವನೆ ಮಾಡಿರುವವರು? ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಹಾಗೂ ಅ.ಕೃ.ಗೌತಂ–ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಡಾ.ಮೈಸೂರು ಉಮೇಶ್, 8.30–ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಎಂ.ಎನ್.ಗಿರೀಶ್ ಮತ್ತು ಎಂ.ಎಸ್.ಪುಟ್ಟರಾಜು, ನಾಗಸ್ವರ, ಎಂ.ಆರ್. ಅಜಯ್‌ಕುಮಾರ್–ಡೋಲು, 11.00–ಮಿಶ್ರ ಮಾಧುರ್ಯ 12.05 ವನಿತಾ ವಿಹಾರ: ಭಾರತನಾಟ್ಯ, ರಂಗಭೂಮಿ ಕಲಾವಿದೆ ಹಾಗೂ ಲೇಖಕಿ ವಿದೂಷಿ ವಾಣಿಸತೀಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಅಬ್ದುಲ್ ರಶೀದ್, 12.30–ದೇವರನಾಮ, 12.45–ಕನ್ನಡದಲ್ಲಿ ಭಾಷಣ, 1.20–ಭಾವಗೀತೆ ಗಳು, ಶರಧಿ ಪಾಟೀಲ್, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ ಎಸ್.ರಾಕೇಶ್–ಕೊಳಲು ವಾದನ, 4.00–ಕಥಾ ಕಾಲಕ್ಷೇಪ ಚವತಿ ಚಂದಿರ ಪ್ರಸ್ತುತಿ: ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.55–ಕೃಷಿರಂಗ ರೇಷ್ಮೆ ಐಸಿರಿ–ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ಹಿಪ್ಪುನೇರಳೆ ಗಿಡದ ಸಮಗ್ರ ಪೀಡೆ ನಿರ್ವಹಣೆ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಎಸ್.ಬಾಲ ಸರಸ್ವತಿ ಅವರೊಂದಿಗೆ ಸಂದರ್ಶನ , ಸಂದರ್ಶಕರು: ಎನ್.ಕೇಶವಮೂರ್ತಿ, 9.30–ಲೋಕ್ ಪ್ರಸಾರಕ್ ಕೇ ಸಾಥ್ ಲೋಕ್ ನಿರ್ಣಯ್ 2024, 10.00–ಚೈತ್ರವನ ಲಕ್ಷೀಶನ ಜೈಮಿನಿ ಭಾರತ ಕಾವ್ಯದ ಸಮಗ್ರ ವಾಚನ ವ್ಯಾಖ್ಯಾನ, ವಾಚನ–ಹೆಚ್.ಆರ್.ಕೇಶವಮೂರ್ತಿ, ವ್ಯಾಖ್ಯಾನ–ಮಾರ್ಕಂಡೇಯ ಅವಧಾನಿ, ಪ್ರಸ್ತುತಿ: ಡಾ.ಎ.ಎಸ್.ಶಂಕರನಾರಾಯಣ, 10.30–ಸವಿನೆನಪು

ಮೇ 15ರಿಂದ 100ನೇ ವರ್ಷದ ಕರಗ ಮಹೋತ್ಸವ



ಮೈಸೂರು, ಮೇ 12(ಜಿಎ)–ಮೈಸೂರು ನಗರದ ಇಟ್ಟಿಗೆಗೂಡಿನ ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 100ನೇ ವರ್ಷದ ಕರಗ ಶತಮಾನೋತ್ಸವ ಮೇ 15ರಿಂದ 19ರವರೆಗೆ ವಿಜೃಂಭಣೆಯಿಂದ ನಡೆಯಲಿದೆ. ಮೇ 15ರಂದು ಬೆಳಗ್ಗೆ 6 ಗಂಟೆಗೆ ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮ ದೇವಿಯರಿಗೆ ಪ್ರಾತಃಕಾಲ ಪ್ರಥಮ ಅಭಿಷೇಕ ನೆರವೇರಿಸಿ ನಂತರ ಊರಿನ ಚತುರ್ದಿಕ್ಕಿನಲ್ಲಿ ಕಂಕಣ ಕಟ್ಟಲಾಗುವುದು. ಬೆಳಗ್ಗೆ 8.30ಕ್ಕೆ ಶ್ರೀನಾಗಲಕ್ಷ್ಮಿ ದೇವಸ್ಥಾನದಿಂದ ಹಾಲಿನ ಕೊಡವನ್ನು ಮೆರವಣಿಗೆ ಮೂಲಕ ಭಕ್ತಾದಿಗಳಿಂದಲೇ ಹಾಲಿನ ಅಭಿಷೇಕ ನೆರವೇರಿಸಲಾಗುವುದು.

ನಂತರ ದೇವಸ್ಥಾನದಿಂದ ಬೆಟ್ಟದ ಪಾದಕ್ಕೆ ಹೊರಟು ಅಲ್ಲಿಂದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗವನ್ನು 11 ಗಂಟೆಗೆ ಮೆರವಣಿಗೆ ಮೂಲಕ ಊರನ್ನು ಬಳಸಿ ತರಲಾಗುವುದು. ಮಧ್ಯಾಹ್ನ 1 ಗಂಟೆಗೆ ದೇವಸ್ಥಾನದಿಂದ ಶ್ರೀ ಕೋಟೆ ಮಾರಿಯಮ್ಮನ ದೇವಸ್ಥಾನಕ್ಕೆ ಹೊರಟು ಶ್ರೀ ಶಕ್ತಿ ಕರಗ ಮತ್ತು ಶ್ರೀ ಮಾರಿಯಮ್ಮನವರ ಕರಗವನ್ನು ಮೆರವಣಿಗೆಯಲ್ಲಿ ತರಲಾಗಿ ಪ್ರಥಮ ಪೂಜೆ ಮಡಿವಾಳರ (ತಾಯಿಯ)ಮನೆಯಲ್ಲಿ ಪೂಜೆ ಸ್ವೀಕರಿಸಿ ದೇವಸ್ಥಾನ ತಲುಪುತ್ತದೆ.

ಸಂಜೆ 4 ಗಂಟೆಗೆ ಕರಗವು ದೇವಸ್ಥಾನದಿಂದ ಹೊರಟು ಪ್ರಥಮ ಪೂಜೆಯನ್ನು ಶ್ರೀ ಮಡಿವಾಳರ ದೇವಸ್ಥಾನದಲ್ಲಿ ಸ್ವೀಕರಿಸಿ ಶ್ರೀ ಸಿದ್ಧಪ್ಪನವರ ಕಲ್ಯಾಣ ಮಂಟಪ ಕಡೆಯಿಂದ ಹೊರಟು ಪೋಸ್ಟ್ ಆಫೀಸ್ 1ನೇ ಕ್ರಾಸ್, ಕೆಳ ಮಾಡಲ್ ಹೌಸ್, ಟ್ಯಾಂಕ್ ಬಂಡ್ ರಸ್ತೆ ಬೀದಿಗಳಲ್ಲಿ ಪೂಜೆ ಸ್ವೀಕರಿಸಿ ರಾತ್ರಿ ದೇವಸ್ಥಾನಕ್ಕೆ ಬಂದು ಸೇರುತ್ತಲ್ಲೇ ಮಹಾಮಂಗಳಾರತಿ ನೆರವೇರಲಿದೆ.

ಮೇ16 ರಂದು ಬೆಳಗ್ಗೆ 7 ಗಂಟೆಗೆ ಅಮ್ಮನವರ ಕರಗವು ದೇವಸ್ಥಾನದಿಂದ ಹೊರಟು ಗರಡಿ ಬೀದಿಯಿಂದ ಹೊಸಬೀದಿ 1ರಿಂದ 5ನೇ ಕ್ರಾಸ್, ಹಳೆ ಮಾಡಲ್ ಹೌಸ್, ಎಸ್.ಆರ್.ಟಿ. ಗ್ಯಾರೇಜ್ ಮಾರ್ಗವಾಗಿ ನ್ಯೂ ಮಾಡಲ್ ಹೌಸ್‌ವರೆಗೆ ಭಕ್ತಾದಿಗಳ ಪೂಜೆ ಸ್ವೀಕರಿಸಿ, ಗಣಪತಿ ದೇವಸ್ಥಾನದ ಮಾರ್ಗವಾಗಿ ದೇವಸ್ಥಾನಕ್ಕೆ ಬಂದು ಸೇರುತ್ತಲೇ ಮಹಾಮಂಗಳಾರತಿ ನಡೆಯಲಿದೆ. ಮೇ 17ರಂದು ಬೆಳಗ್ಗೆ 7 ಗಂಟೆಗೆ ಅಮ್ಮನವರ ಕರಗವು ದೇವಸ್ಥಾನದಿಂದ ಹೊರಟು ಇಟ್ಟಿಗೆಗೂಡಿನ ಶ್ರೀ ಸತ್ಯನಾರಾಯಣಸ್ವಾಮಿ ದೇವಸ್ಥಾನದ ಸರ್ಕಲ್ ನಿಂದ ಪ್ರಾರಂಭವಾಗಿ ಪೆರಿಯತಂಬಿ ರಸ್ತೆಯ 2ನೇ ಕ್ರಾಸ್, ಶ್ರೀ ಸಿದ್ದಪ್ಪಾಜಿ ದೇವಸ್ಥಾನ ಮಾರ್ಗವಾಗಿ ಅರುಣಾಚಲಂ ರಸ್ತೆಯಿಂದ ಲೋಕರಂಜನ್ ಮಹಲ್ ರಸ್ತೆ, ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಪೂಜೆ ಸ್ವೀಕರಿಸಿ ಕಮ್ಮಾಳಗೇರಿಯಿಂದ ಜೂ ಮಾರ್ಗವಾಗಿ ಭವಾನಿ ರಸ್ತೆ ಮೂಲಕ ಮರಳಿ ದೇವಸ್ಥಾನ ತಲುಪಲಿದೆ. ಮೇ 18ರಂದು ಬೆಳಗ್ಗೆ 7 ಗಂಟೆಗೆ ಅಮ್ಮನವರ ಕರಗವು ದೇವಸ್ಥಾನ ದಿಂದ ಹೊರಟು ಮಾನಸ ರಸ್ತೆಯಿಂದ ಪ್ರಾರಂಭವಾಗಿ ಕೆಳಗಿನಕೇರಿ ಶ್ರೀ ಕುಪ್ಪಮ್ಮ ದೇವಸ್ಥಾನ, ಲಕ್ಷ್ಮೀ ದೇವಸ್ಥಾನದ ಮಾರ್ಗವಾಗಿ ಇಟ್ಟಿಗೆಗೂಡಿನ ಇತರೆ ಬೀದಿಗಳಲ್ಲಿ ಪೂಜೆಯನ್ನು ಸ್ವೀಕರಿಸಿ ಸಂಜೆ ದೇವಸ್ಥಾನ ತಲುಪುತ್ತಲೇ ಮಹಾಮಂಗಳಾರತಿ ನೆರವೇರುತ್ತದೆ.

ಮೇ 19ರಂದು ಮಧ್ಯಾಹ್ನ 12 ಗಂಟೆಗೆ ಅಂಬಲಿ ಪೂಜೆ ನಡೆಯು ತ್ತದೆ. ನಂತರ ಅರಿಶಿನ ನೀರಿನ ಓಕುಳಿಯಾಡಲು ಕರಗವು ಹೊರಡು ತ್ತದೆ. ಸಂಜೆ 4 ಗಂಟೆಯಿಂದ ಭಕ್ತಾದಿಗಳಿಂದ ತಂಬಿಟ್ಟು ಆರತಿ ನೆರ ವೇರಲಿದೆ. ರಾತ್ರಿ 7 ಗಂಟೆಗೆ ಇಟ್ಟಿಗೆಗೂಡಿನ ಬೀದಿಗಳಲ್ಲಿ ಕರಗ ಉತ್ಸವವು ನಡೆಯಲಿದೆ. ನಂತರ ರಾತ್ರಿ 11 ಗಂಟೆಗೆ ಅಮ್ಮನವರ ಕರಗದ ಉಯ್ಯಾಲೋತ್ಸವ ನಡೆಯಲಿದೆ. ರಾತ್ರಿ 12 ಗಂಟೆಗೆ ಮಹಾ ಮಂಗಳಾರತಿ ನೆರವೇರಲಿದೆ. ಮೇ 20ರಂದು ಬೆಳಗ್ಗೆ 5 ಗಂಟೆಗೆ ಕರಗವನ್ನು ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯಲ್ಲಿ ವಿಸರ್ಜಿಸಲಾಗುತ್ತದೆ. ಮೇ 26ರಂದು ಸಂಜೆ 7 ಗಂಟೆಗೆ ವಡಾಕಂಜಿ ಪೂಜೆ ಹಾಗೂ ಮಹಾಮಂಗಳಾರತಿ ನೆರವೇರಲಿದೆ ಎಂದು ಶ್ರೀ ರೇಣುಕಾ ದೇವಿ ಕರಗ ದೇವಸ್ಥಾನದ ಟ್ರಸ್ಟ್ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಶ್ರವಣದೋಷವುಳ್ಳವರಿಗೆ ಶ್ರವಣ ಸಾಧನ ವಿತರಣೆ



ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಸೆಮಿನಾರ್ ಭವನದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಶ್ರವಣದೋಷ ಹೊಂದಿರುವವರಿಗೆ ಶ್ರವಣ ಸಾಧನಗಳನ್ನು ವಿತರಿಸಲಾಯಿತು.

ಮೈಸೂರು, ಮೇ 12(ಜಿಎ)–ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಕ್ಯಾನ್‌ಫಿನ್ ಹೋಮ್ಸ್ ಲಿ. ಮತ್ತು ಮೈಸೂರು ಜಿಲ್ಲಾ ಕಿವುಡರ ಸಂಘದ ಸಹಯೋಗದಲ್ಲಿ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಸೆಮಿನಾರ್ ಭವನದಲ್ಲಿ ಭಾನುವಾರ ಶ್ರವಣದೋಷ ಹೊಂದಿರುವ ವ್ಯಕ್ತಿಗಳಿಗೆ ಶ್ರವಣ ಸಾಧನಗಳ ವಿತರಣೆ ಮಾಡಲಾಯಿತು.

ಈ ವೇಳೆ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕರಾದ ಡಾ.ಎಂ.ಪುಷ್ಪಾವತಿ ಮಾತನಾಡಿ, ಸಮಸ್ಯೆ ಅರಿತು ಬಗೆಹರಿಸುವ ಮನಸ್ಸು ಪ್ರತಿಯೊಬ್ಬರಿಗೂ ಇರಬೇಕು. ಆರೋಗ್ಯ ಪೂರ್ಣ ಸಮಾಜಕ್ಕೆ ಆರೋಗ್ಯಪೂರ್ಣ ಮನಸ್ಸುಗಳು ಬೇಕು. ಇದಕ್ಕೆ ಆಯಿಷ್ ಮಾದರಿ ಸಂಸ್ಥೆಯಾಗಿದ್ದು, ಸಾಕಷ್ಟು ಮಂದಿ ಸಮಸ್ಯೆವುಳ್ಳವರು ಬರುತ್ತಾರೆ. ಅವರೆಲ್ಲರಿಗೂ ಶ್ರವಣ ಸಾಧನಾ ಕೊಡುವುದು ಕಷ್ಟ ಅಂತಹವರಿಗೆ ನೆರವು ಒದಗಿಸುವುದು ತಮ್ಮ ಕರ್ತವ್ಯವಾಗಿದೆ ಎಂದರು.

ಲಯನ್ಸ್ ಅಂತಾರಾಷ್ಟ್ರೀಯ ಜಿಲ್ಲಾ 1ರ ಉಪ ರಾಜ್ಯಪಾಲ ಎನ್.ಸುಬ್ರಹ್ಮಣ್ಯ ಮಾತನಾಡಿ, ಪ್ರತಿಯೊಬ್ಬರಿಗೂ ಸಮಾಜವನ್ನು ಇನ್ನಷ್ಟು ಉತ್ತಮವಾಗಿರಿಸುವ ಜವಾಬ್ದಾರಿ ಇದೆ. ಸಂವಹನಕ್ಕೆ ಶ್ರವಣ ಯಂತ್ರ ಉಪಯುಕ್ತ ಸಾಧನ. ಇದರಿಂದ ಖಂಡಿತ ಫಲಾನುಭವಿಗಳ ಬದುಕಿನಲ್ಲಿ ಬದಲಾವಣೆ ಆಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಕ್ಯಾನ್‌ಫಿನ್ ಹೋಮ್ಸ್ ಲಿ.ನ ಉಪಪ್ರಧಾನ ವ್ಯವಸ್ಥಾಪಕ ಡಿ.ಆರ್. ಪ್ರಭು, ಕ್ಯಾನ್‌ಫಿನ್ ಹೋಮ್ಸ್ ಲಿ.ನ ಸಹಾಯಕ ಪ್ರಧಾನ ವ್ಯವಸ್ಥಾಪಕಿ ಚಿತ್ರಾ ಶ್ರೀನಾಥ್, ಕ್ಯಾನ್ ಫಿನ್ ಹೋಮ್ಸ್ ಲಿ.ನ ನಿವೃತ್ತ ಸಹಾಯಕ ಪ್ರಧಾನ ವ್ಯವಸ್ಥಾಪಕ ಕೆ.ಎನ್. ಶ್ಯಾಮರಾವ್, ಕೀರ್ತನಾ, ಮೈಸೂರು ಜಿಲ್ಲಾ ಕಿವುಡರ ಸಂಘದ ಅಧ್ಯಕ್ಷ ಎಸ್. ಮೂರ್ತಿ, ಉಪಾಧ್ಯಕ್ಷ ಜೆ.ವಿ.ಮಹೇಶ್ ವರ್ಮಾ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 12–ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ವೀರಶೈವ ಅನಾಥಾಲಯ ಟ್ರಸ್ಟ್ ವತಿಯಿಂದ ನಡೆಸುತ್ತಿರುವ ವಿದ್ಯಾರ್ಥಿನಿಲಯಕ್ಕೆ 2024–25ನೇ ಶೈಕ್ಷಣಿಕ ಸಾಲಿನ ಪ್ರಥಮ, ದ್ವಿತೀಯ ಪಿಯುಸಿ ವ್ಯಾಸಂಗ ಮಾಡುವ ಶೇ.50ಕ್ಕಿಂತ ಹೆಚ್ಚು ಅಂಕಗಳಿಸಿರುವ ಆರ್ಥಿಕವಾಗಿ ಹಿಂದುಳಿದ ಗ್ರಾಮಾಂತರ ವೀರಶೈವ ವಿದ್ಯಾರ್ಥಿಗಳಿಗೆ ಮೇ 10ರಿಂದ 17ರವರೆಗೆ ಅರ್ಜಿ ವಿತರಿಸಲಾಗುವುದು. ಭರ್ತಿ ಮಾಡಿದ ಅರ್ಜಿಗಳನ್ನು ಮೇ 17ರೊಳಗೆ ಕಚೇರಿಗೆ ಸಲ್ಲಿಸಬೇಕು. ನಂತರ ಮೇ 19ರಂದು ವಿದ್ಯಾರ್ಥಿಗಳ ಸಂದರ್ಶನ ಮಾಡಿ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಸಂದರ್ಶನದ ದಿನದಂದು ವಿದ್ಯಾರ್ಥಿಗಳು ಕಡ್ಡಾಯವಾಗಿ ಪೋಷಕರನ್ನು ಜೊತೆಗೆ ಕರೆತರಬೇಕು. ಅರ್ಹ ವಿದ್ಯಾರ್ಥಿಗಳು ಅರ್ಜಿಗಾಗಿ ಮತ್ತು ಹೆಚ್ಚಿನ ಮಾಹಿತಿಗಾಗಿ 9916650106 ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ಡಾ.ಪ್ರೀತಿ ಶುಭಚಂದ್ರಗೆ ಚಾವುಂಡರಾಯ ಪ್ರಶಸ್ತಿ



ಮೈಸೂರು: ನಗರದ ಹಿರಿಯ ಲೇಖಕಿ ಡಾ.ಪ್ರೀತಿ ಶುಭಚಂದ್ರ ಅವರು ಕನ್ನಡ ಸಾಹಿತ್ಯ ಪರಿಷತ್ತು ನೀಡುವ 2023ನೇ ಸಾಲಿನ 'ಚಾವುಂಡರಾಯ ಪ್ರಶಸ್ತಿ' ಪುರಸ್ಕೃತರಾಗಿದ್ದಾರೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ಪರಿಷತ್ ಅಧ್ಯಕ್ಷ ಡಾ.ಮಹೇಶ ಜೋಶಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಡಾ.ಪ್ರೀತಿ ಶುಭಚಂದ್ರ ಅವರನ್ನು ಆಯ್ಕೆಗೊಳಿಸಲಾಯಿತು.

ಶ್ರವಣಬೆಳಗೊಳದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಪರಿಷತ್ತಿನಲ್ಲಿ ಈ ದತ್ತಿ ಸ್ಥಾಪಿಸಿದ್ದು, ಪ್ರಾಚೀನ ಜೈನ ಸಾಹಿತ್ಯ ಆಧರಿಸಿ ಆಧುನಿಕ ಕನ್ನಡ ಭಾಷೆಯಲ್ಲಿ ರಚಿಸಿದ ಪ್ರಬಂಧ, ಸಂಶೋಧನೆ, ವಿಮರ್ಶೆ, ಕಾದಂಬರಿ, ನಾಟಕ, ಕಥಾಸಾಹಿತ್ಯ ಪ್ರಕಾರಗಳ ಲೇಖಕರಿಗೆ, ಗ್ರಂಥ ಸಂಪಾದಕರಿಗೆ ಇಲ್ಲವೆ ಕನ್ನಡ ಸಾಹಿತ್ಯಕ್ಕೆ ವಿಶೇಷವಾಗಿ ಬಹು ಆಯಾಮದ ಕೊಡುಗೆಯನ್ನಿತ್ತ ಹಿರಿಯ ಸಾಹಿತಿಯನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುವುದು. ಡಾ.ಪ್ರೀತಿ ಶುಭಚಂದ್ರ ಅವರು 40ಕ್ಕೂ ಅಧಿಕ ಜೈನ ಸಾಹಿತ್ಯಕ್ಕೆ ಸಂಬಂಧಿಸಿದ ಸಂಶೋಧನ ಲೇಖನಗಳನ್ನು ಹಾಗೂ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಅವರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರಾಗಿ, ಮೊದಲ ಮಹಿಳಾ ನಿರ್ದೇಶಕಿಯಾಗಿ ಹಾಗೂ ಮಹಿಳಾ ಅಧ್ಯಯನ ಕೇಂದ್ರದ ಗೌರವ ನಿರ್ದೇಶಕಿಯಾಗಿ ಕಾರ್ಯನಿರ್ವಹಿಸಿದ್ದಾರೆ.



ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ–ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದಿಂದ ಬಸವೇಶ್ವರ ಜಯಂತಿ ಆಚರಿಸಲಾಯಿತು. ಈ ವೇಳೆ ಮಹೇಶ್, ರವಿಕುಮಾರ್, ಪ್ರಕಾಶ್, ಚಂದ್ರೇಗೌಡ, ಕುಮಾರ್, ರುದ್ರಸ್ವಾಮಿ, ಯೋಗೇಶ್, ಶಿವರಾಜ್, ಯೋಗೇಶ್, ಮಹೇಶ್ ಮೋಹನ್, ಸ್ವಾಮಿ, ಕುಮಾರ್, ವೆಂಕಟೇಶ್ ಇದ್ದರು.

ಮೈಸೂರು ವಿವಿ ಅಂತರ ಕಾಲೇಜು ಅಂತರ ವಲಯ ಪುರುಷರ ಕ್ರೀಡಾಕೂಟದ ಬಹುಮಾನ ವಿತರಣೆ



ಮೈಸೂರು, ಮೇ 12– ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಅಂತರ ವಲಯ ಪುರುಷರ ಕ್ರೀಡಾಕೂಟ ನಡೆಯಿತು. ಕ್ರೀಡಾಕೂಟದ ಬಹುಮಾನ ವಿತರಣೆ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳ ವಿಶೇಷಾಧಿಕಾರಿ ಪ್ರೊ.ಎಂ.ಎನ್. ಕುಮಾರ್, ರಸಾಯನಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಎಂ.ಪಿ.ಸದಾಶಿವ, ಅಂತಾರಾಷ್ಟ್ರೀಯ ಶಿಲ್ಪಿಗಳು ಅರುಣ್ ಯೋಗಿರಾಜ್ ಮತ್ತು ರಾಷ್ಟ್ರೀಯ ವಾಲಿಬಾಲ್ ಕ್ರೀಡಾಪಟುಗಳು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್ ವಹಿಸಿದ್ದರು. ದೈಹಿಕ ಶಿಕ್ಷಣ ವಿಭಾಗದ ಉಪನಿರ್ದೇಶಕ ಡಾ.ಪಿ.ಕೃಷ್ಣಯ್ಯ ಉಪಸ್ಥಿತರಿದ್ದರು.

ಕ್ರೀಡಾಕೂಟದಲ್ಲಿ ಪಿ.ಜಿ.ಎಸ್.ಸಿ ಮಾನಸ ಗಂಗೋತ್ರಿ, 31 ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಪಡೆಯಿತು. ಎಸ್.ಬಿ. ಆರ್.ಆರ್. ಮಹಾಜನ ಕಾಲೇಜು 24 ಅಂಕಗಳು ಪಡೆದು ದ್ವಿತೀಯ ಸ್ಥಾನ ಹಾಗೂ ಸೆಪಿಯೆಂಟ್ ಕಾಲೇಜು 11 ಅಂಕಗಳು ತೃತೀಯ ಸ್ಥಾನ ಪಡೆಯಿತು. ಪಿಜಿಎಸ್‌ಸಿ ಮಾನಸಗಂಗೋತ್ರಿ ಸಮಗ್ರ ಪ್ರಶಸ್ತಿ ಪಡೆದುಕೊಂಡಿತು. ಕ್ರೀಡಾಕೂಟದಲ್ಲಿ 40 ಕಾಲೇಜುಗಳಿಂದ 15 ವಿವಿಧ ಕ್ರೀಡೆಗಳ ಸಮಾರು 800 ಪುರುಷ ಕ್ರೀಡಾಪಟುಗಳು ಭಾಗವಹಿಸಿದ್ದರು.

ಪಿಎಚ್.ಡಿ ಪದವೀಧರರು



ಬಿ. ಆಶಿತಾ ಗಣೇಶ್

ಮೈಸೂರು, ಮೇ 12–ಡಾ.ಎ.ಜಿ.ದೇವಿಪ್ರಸಾದ್ ಅವರ ಮಾರ್ಗದರ್ಶನದಲ್ಲಿ ಬಿ. ಆಶಿತಾ ಗಣೇಶ್ ಅವರು ಪರಿಸರ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಪಿ. ಸುಷ್ಮಾ

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಜೈವಿಕ ತಂತ್ರಜ್ಞಾನ ಮತ್ತು ಜೈವಿಕ ವಿಭಾಗದ ಸಹ ಪ್ರಾಧ್ಯಾಪಕ ಹಾಗೂ ಡೆಪ್ಯುಟಿ ಡೀನ್ ಡಾ. ಚಂದನ್ ಶಿವಮಲ್ಲು ಮಾರ್ಗದರ್ಶನದಲ್ಲಿ ಪಿ.ಸುಷ್ಮಾ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಕಾಂಗ್ರೆಸ್‌ಗೆ ನೇಮಕ



ಮೈಸೂರು, ಮೇ 12– ಮೈಸೂರು ನಗರ ಕಾಂಗ್ರೆಸ್ ಹೆಚ್ಚುವರಿ ಕಾರ್ಯದರ್ಶಿಯಾಗಿ ನರಸಿಂಹರಾಜ ಮೊಹಲ್ಲಾ ಎನ್.ಇ. ಬಡಾವಣೆಯ ಇರ್ಷಾದ್ ಹುಸೇನ್‌ಖಾನ್ ಅವರನ್ನು ನೇಮಕ ಮಾಡಿದ್ದಾರೆ.

ಕೊಡಗು ಮಾಡೆಲ್ ಶಾಲೆಗೆ ಶೇ.100 ಫಲಿತಾಂಶ

ಮೈಸೂರು, ಮೇ 12– ವಿದ್ಯಾಶಂಕರ ಬಡಾವಣೆಯಲ್ಲಿನ ಕೊಡಗು ಮಾಡೆಲ್ ಸ್ಕೂಲ್, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಗಳಿಸಿದೆ. ಎಂ.ದೀಪಾಲಿಗೌಡ(ಶೇ.98.24), ಎಸ್.ಮಾಳವಿಕಾ (ಶೇ.91.52), ಪವಿತ್ರಾ(ಶೇ.89.60), ಆರ್.ಧನುಷ್(ಶೇ.88), ಜೀವನ್ ರಾಘವೇಂದ್ರ (ಶೇ.86.88), ಎಸ್.ಪವನ್‌ಗೌಡ(ಶೇ.86.08), ಎಸ್.ಚಂದನ್ ಕುಮಾರ್ (ಶೇ.81.92) ಹಾಗೂ ಎಲ್ಲಾ ವಿದ್ಯಾರ್ಥಿಗಳೂ ಉತ್ತಮ ಅಂಕ ಪಡೆದಿದ್ದಾರೆ.

ಐವೈಟಿ ಕೋರ್ಸ್ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ

ಯೋಗ ಕಲಿತರೆ ಆರೋಗ್ಯದಿಂದ ಇರಬಹುದು, ಯೋಗದ ಮಹತ್ವ ತಿಳಿಯಿರಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪರಮಹಂಸ ಯೋಗ ಮಹಾವಿದ್ಯಾಲಯ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಇಂಟರ್‌ನ್ಯಾಷನಲ್ ಯೋಗ ಟೀಚರ್ ಟ್ರೈನಿಂಗ್ ಕೋರ್ಸಿನ 11ನೇ ತಂಡದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು.

ಮೈಸೂರು, ಮೇ 12(ಜಿಎ)– ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪರಮಹಂಸ ಯೋಗ ಮಹಾವಿದ್ಯಾಲಯ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಇಂಟರ್‌ನ್ಯಾಷನಲ್ ಯೋಗ ಟೀಚರ್ ಟ್ರೈನಿಂಗ್ [ಐವೈಟಿ] ಕೋರ್ಸಿನ 11ನೇ ತಂಡದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರಿಗೆ ಪತ್ರಿಕಾ ಭೀಷ್ಮ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ವೇಳೆ ಪರಮಹಂಸ ಯೋಗ ಮಹಾವಿದ್ಯಾಲಯದ ಸಂಸ್ಥಾಪಕ ಶಿವಪ್ರಕಾಶ್ ಮಾತನಾಡಿ, ಪ್ರತಿಯೊಬ್ಬರೂ ಯೋಗ ಕಲಿತರೆ ಆರೋಗ್ಯದಿಂದ ಇರಬಹುದು. ಯೋಗ ಬಲ್ಲವನಿಗೆ ರೋಗವಿಲ್ಲ ಎಂಬ ಗಾದೆ ಮಾತಿದೆ. ಆದ್ದರಿಂದ ಸಮಾಜದ ಎಲ್ಲಾ ವರ್ಗದ ಜನರು ಯೋಗದ ಮಹತ್ವ ಅರಿಯಬೇಕು ಎಂದರು.

ಯೋಗದಿಂದ ಆರೋಗ್ಯ ಮಾತ್ರವಲ್ಲದೇ ಉದ್ಯೋಗವಕಾಶಗಳು ಕೂಡ ಲಭ್ಯವಾಗುತ್ತಿವೆ. ನಮ್ಮ ಸಂಸ್ಥೆಯ 1980ರಿಂದಲೂ ಮೈಸೂರು ನಗರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಎಲ್ಲರಿಗೂ ಯೋಗ ತಲುಪಿಸುವ ಗುರಿ ಹೊಂದಿದೆ. ಇದಕ್ಕಾಗಿ ಐವೈಟಿ ಕೋರ್ಸ್ ನಡೆಸುತ್ತಾ, ಉತ್ತಮ ಯೋಗ ಶಿಕ್ಷಕರನ್ನು ತಯಾರು ಮಾಡುತ್ತಿದೆ. ಇಲ್ಲಿ ಕಲಿತರು ದೇಶ–ವಿದೇಶಗಳಲ್ಲಿ ಯೋಗ ಶಿಕ್ಷಕರಾಗಿ ಕೆಲಸ ಮಾಡುತ್ತಿರುವುದು ಹೆಮ್ಮೆಯ ವಿಷಯ ಎಂದರು.

ಶಾಸಕ ಟಿ.ಎಸ್.ಶ್ರೀವತ್ಸ ಅವರು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರಿಗೆ ಪತ್ರಿಕಾ ಭೀಷ್ಮ ಪ್ರಶಸ್ತಿ ಪ್ರದಾನ ಮಾಡಿ, ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿದರು. ಇಂದಿನ ಕಾರ್ಯಕ್ರಮದಲ್ಲಿ ಆಚಾರ್ಯದ್ವಯರಾದ ಶ್ರೀಶಂಕರಾಚಾರ್ಯ, ಶ್ರೀ ರಾಮಾನುಜಾಚಾರ್ಯರ ಜಯಂತಿ ಕಾರ್ಯಕ್ರಮ ಏರ್ಪಡಿಸಿರುವುದು ಅರ್ಥಪೂರ್ಣವಾಗಿದೆ ಎಂದು ಶುಭ ಹಾರೈಸಿದರು.

11ನೇ ತಂಡದಲ್ಲಿ ಜಿಎನ್.ಸುವರ್ಣ, ಎ.ಎಸ್.ರಕ್ಷಿತಾ, ಬಿ.ಯು.ಕಾವ್ಯಾ, ಎಚ್.ನಾಗರಾಜಪ್ಪ, ಎಲ್.ಜಗದೀಶ್, ಮುರಳೀಧರ, ರಾಣಿ, ಪ್ರಸಾದ್, ಸೌಮ್ಯಾ ಹಾಗೂ ರವಿಶಂಕರ್ ಐವೈಟಿ ತರಬೇತಿ ಪಡೆದು. ಪ್ರಮಾಣಪತ್ರ ಸ್ವೀಕರಿಸಿದರು. ಈ ಪೈಕಿ ಮೂವರು ತರಬೇತಿಯಿಂದ ಆಗಿರುವ ಉಪಯೋಗದ ಬಗ್ಗೆ ಅನಿಸಿಕೆ ಹಂಚಿಕೊಂಡರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಪದಕ ಗಳಿಸಿರುವ ರಾಣಿ ಸ್ವಾಮಿಗೌಡ ಹಾಗೂ ಭಾರತಿ ಅವರು ವಿವಿಧ ಯೋಗಗಳನ್ನು ಪ್ರದರ್ಶಿಸಿದರು. ಕಾರ್ಯಕ್ರಮದಲ್ಲಿ ಡಾ.ಲಕ್ಷ್ಮೀ ಶ್ರೀನಿವಾಸ್ ಗುರೂಜಿ, ಗೋಶಾಲೆಯ ಮುಖ್ಯಸ್ಥ ಸುಂದರರಾಜ್, ಮನೋ ತರಬೇತಿದಾರರಾದ ಸುಧೀರ್ ಸುಬ್ರಹ್ಮಣ್ಯ, ವಿದ್ಯಾಲಯದ ಕೋರ್ಸ್ ಸಂಚಾಲಕಿ ಡಾ.ಆರ್.ಭಾವನಾ, ಡಾ.ಆರ್.ಅಪರ್ಣಾ ಉಪಸ್ಥಿತರಿದ್ದರು.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ


60ಕ್ಕೂ ಹೆಚ್ಚು ಸ್ವಯಂಚಾಲಿತ ಕೃತಕ ಬುದ್ಧಿಮತ್ತೆಯ ಸಿಸಿ ಕ್ಯಾಮರಾ ಅಳವಡಿಕೆ

●ವಾಹನಗಳ ನೋಂದಣಿ ಸಂಖ್ಯೆ ಪತ್ತೆ ಹಚ್ಚಲಿರುವ ಕ್ಯಾಮರಾ ಕಣ್ಣುಗಳು ●ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಕ್ಯಾಮರಾ ಅಳವಡಿಕಾ ಕಾರ್ಯ ಚುರುಕು
●ಇಂದು, ನಾಳೆ ಎಡಿಜಿಪಿ ಅಲೋಕ್ ಕುಮಾರ್ ಅವರಿಂದ ಪರಿಶೀಲನೆ ●ಮಿತಿ ಮೀರಿದ ವೇಗ, ಅಜಾಗರೂಕ ಚಾಲನೆಗೆ ಬ್ರೇಕ್ ಹಾಕಲು ಕ್ರಮ

ಮೈಸೂರು, ಮೇ 12(ಎಂಟಿವೈ, ಎಕೆ)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸುರಕ್ಷಿತ ಚಾಲನೆಗೆ ಒತ್ತು ನೀಡುವುದರೊಂದಿಗೆ ಮಿತಿ ಮೀರಿದ ವೇಗ ಹಾಗೂ ಅಜಾಗರೂಕ ವಾಹನ ಚಾಲನೆ ಬ್ರೇಕ್ ಹಾಕುವ ನಿಟ್ಟಿನಲ್ಲಿ 60ಕ್ಕೂ ಹೆಚ್ಚು ಸ್ಥಳಗಳಲ್ಲಿ ವಾಹನಗಳ ನೋಂದಣಿ ಸಂಖ್ಯೆ ಪತ್ತೆ ಮಾಡುವ ಸ್ವಯಂಚಾಲಿತ ಕೃತಕ ಬುದ್ಧಿಮತ್ತೆ ಸಿಸಿ ಕ್ಯಾಮರಾ ಅಳವಡಿಸುವ ಕಾರ್ಯ ಭರದಿಂದ ಸಾಗಿದೆ.

ಮಿತಿ ಮೀರಿದ ವೇಗದ ಚಾಲನೆಯಿಂದಾಗಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸರಣಿ ಅಪಘಾತ ಸಂಭವಿಸಿ ಸಾವು–ನೋವಿನ ಸಂಖ್ಯೆ ಹೆಚ್ಚುತ್ತಿದ್ದ ಹಿನ್ನೆಲೆಯಲ್ಲಿ ಶಿಸ್ತಿನ ವಾಹನ ಚಾಲನಾ ವ್ಯವಸ್ಥೆಯೊಂದಿಗೆ ವೇಗದ ಮಿತಿ ಅಳವಡಿಸುವ ನಿಯಮವನ್ನು ಜಾರಿಗೊಳಿಸಲಾಗಿದ್ದು, ಇದರಿಂದ ಕಳೆದ ಕೆಲವು ತಿಂಗಳಿಂದ ಎಕ್ಸ್‌ಪ್ರೆಸ್‌ವೇಯಲ್ಲಿ ಅಪಘಾತಗಳ ಸಂಖ್ಯೆ ಕ್ಷೀಣಿಸಿತ್ತು ಈಗಾಗಲೇ ಹೈವೇನಲ್ಲಿ ಸಂಚರಿಸುವ ವಾಹನಗಳ ವೇಗದ ಮಿತಿಯನ್ನು ಪತ್ತೆ ಮಾಡುವ ನಿಟ್ಟಿನಲ್ಲಿ ಹಲವು ಕ್ಯಾಮರಾ ಅಳವಡಿಸಲಾಗಿದೆ. ಆದರೂ ಪೂರ್ಣ ಪ್ರಮಾಣದ ಶಿಸ್ತಿನ ಸಂಚಾರದ ವ್ಯವಸ್ಥೆ ಜಾರಿಗೊಳಿಸಿ, ಅಜಾಗರೂಕ ಚಾಲನೆಗೆ ಕಡಿವಾಣ ಹಾಕಲು ಇದೀಗ ಎಕ್ಸ್‌ಪ್ರೆಸ್ ಹೈವೇನಲ್ಲಿ 60ಕ್ಕೂ ಹೆಚ್ಚು ಸ್ಥಳದಲ್ಲಿ ಸ್ವಯಂಚಾಲಿತ ಕೃತಕ ಬುದ್ಧಿಮತ್ತೆಯ ಸಿಸಿ ಕ್ಯಾಮರಾ ಅಳವಡಿಸಲಾಗುತ್ತಿದೆ.

ಪೊಲೀಸ್ ಇಲಾಖೆ ನೀಡಿದ ಸೂಚನೆ ಮೇರೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು 3.63 ಕೋಟಿ ರೂ. ವೆಚ್ಚದಲ್ಲಿ ಹರಿಯಾಣದ ಗುರುಗ್ರಾಮ್ ಮೂಲದ ಟೆಕ್ಸಿಡೆಲ್ ಇಂಡಿಯಾ ಪ್ರೈ.ಲಿಮಿಟೆಡ್ ಸಂಸ್ಥೆ ಮೂಲಕ ಎಕ್ಸ್‌ಪ್ರೆಸ್ ವೇನಯಲ್ಲಿ 60ಕ್ಕೂ ಸ್ಥಳಗಳಲ್ಲಿ ಸ್ವಯಂಚಾಲಿತ ವಾಹನದ ನೋಂದಣಿ ಫಲಕಗಳ ಗುರುತಿಸುವ(ಆಟೋಮ್ಯಾಟಿಕ್ ನಂಬರ್ ಪ್ಲೇಟ್ ರೆಕಗ್ನಿಷನ್– ಎಎನ್‌ಪಿಆರ್) ಕ್ಯಾಮರಾ ಅಳವಡಿಸುವ ಕಾರ್ಯಕ್ಕೆ ಟೆಂಡರ್ ನೀಡಲಾಗಿದ್ದು, ಏಪ್ರಿಲ್ ಅಂತ್ಯದೊಳಗೆ ಎಎನ್‌ಆರ್‌ಪಿ ಕ್ಯಾಮರಾ ಅಳವಡಿಸುವ ಕಾರ್ಯ ಪೂರ್ಣಗೊಳಿಸಬೇಕಾಗಿತ್ತು. ಕಾರಣಾಂತರಗಳಿಂದ ಕ್ಯಾಮರಾ ಅಳವಡಿಕಾ ಕಾರ್ಯ ವಿಳಂಬವಾಗಿದ್ದು, ಇದೀಗ ಭರದಿಂದ ಕ್ಯಾಮರಾ ಅಳವಡಿಕಾ ಕಾರ್ಯ ನಡೆಸಲಾಗುತ್ತಿದೆ. ತಿಂಗಳಾಂತ್ಯಕ್ಕೆ ಎಲ್ಲಾ 60 ಸ್ಥಳದಲ್ಲಿಯೂ ಅಳವಡಿಸಿರುವ ಎಎನ್‌ಪಿಆರ್ ಕ್ಯಾಮರಾ ಕಾರ್ಯಾರಂಭ ಮಾಡಲಿದ್ದು, ನಿಯಮ ಉಲ್ಲಂಘಿಸುವ ವಾಹನ ಸವಾರರಿಗೆ ದಂಡ ಬಿಸಿ ಮುಟ್ಟಿಸಲಿವೆ.



ಎಎನ್‌ಪಿಆರ್ ಕ್ಯಾಮರಾಗಳಿಗೆ ವಿದ್ಯುತ್ ಪೂರೈಸುವ ನಿಟ್ಟಿನಲ್ಲಿ ಸೋಲಾರ್ ಪ್ಯಾನಲ್ ಅಳವಡಿಸುವುದು.

ಎಎನ್‌ಪಿಆರ್ ಕ್ಯಾಮರಾ ಕಾರ್ಯ ವೈಖರಿ: ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಈಗಾಗಲೇ ಹಲವೆಡೆ ಸಿಸಿ ಕ್ಯಾಮರಾ ಅಳವಡಿಸಿ, ವಾಹನಗಳ ವೇಗದ ಮೇಲೆ ಹದ್ದಿನ ಕಣ್ಣಿಟ್ಟಿದೆ. ಇದೀಗ ಅಳವಡಿಸುತ್ತಿರುವ ಕೃತಕ ಬುದ್ಧಿಮತ್ತೆ(ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ಸ್ವಯಂಚಾಲಿತ ಕ್ಯಾಮರಾ ದಿನದ 24 ಗಂಟೆಯೂ ಚಾಲ್ತಿಯಲ್ಲಿರುತ್ತದೆ. ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ಸೋಲಾರ್ ಪ್ಯಾನಲ್ ಅಳವಡಿಸಲಾಗಿದೆ. ಈ ಎಎನ್‌ಪಿಆರ್ ಕ್ಯಾಮರಾ ಹೈವೇನಲ್ಲಿ ಸಂಚರಿಸುವ ವಾಹನಗಳ ವೇಗದ ಮೇಲೆ ಕಣ್ಣಿಡಲಿದೆ. ನಿಗದಿತ ವೇಗಕ್ಕಿಂತ ಹೆಚ್ಚಿನ ವೇಗದಲ್ಲಿ ಚಲಿಸುತ್ತಿರುವ ವಾಹನಗಳ ಗುರುತಿಸಿ, ಫೋಟೋ ಹಾಗೂ ವಿಡಿಯೋ ಚಿತ್ರೀಕರಿಸಲಿದೆ. ಇದರೊಂದಿಗೆ ವೇಗದ ಮಿತಿ ಉಲ್ಲಂಘಿಸಿದ ವಾಹನಗಳ ನಂಬರ್ ಪ್ಲೇಟ್ ಗುರುತಿಸಿ ಚಿತ್ರ ಸೆರೆ ಹಿಡಿಯಲಿದೆ.

ಅಲ್ಲದೆ, ಸಂಚಾರ ಶಿಸ್ತು ಉಲ್ಲಂಘಿಸಿ, ಅಶಿಸ್ತಿನಿಂದ ಪಥ ಬದಲಿಸುವ ವಾಹನಗಳನ್ನು ಗುರುತಿಸಿ ಚಿತ್ರೀಕರಿಸಲಿದೆ. ರಸ್ತೆಯಲ್ಲಿ ವಿರುದ್ಧ ದಿಕ್ಕಿನಿಂದ ಚಲಿಸುವ ವಾಹನ, ನಿರ್ಬಂಧ ವಿದ್ದರೂ ಹೈವೆ ರಸ್ತೆಯಲ್ಲಿ ಸಂಚರಿಸುವ ದ್ವಿಚಕ್ರ ವಾಹನ, ತ್ರಿಚಕ್ರ ವಾಹನಗಳ ಮೇಲೂ ನಿಗಾ ಇಡಲಿದೆ. ಇದರಿಂದ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಶಿಸ್ತಿನ ಸಂಚಾರದ ವ್ಯವಸ್ಥೆ ಜಾರಿಗೊಳ್ಳಲಿದೆ. ಈ ಎಎನ್‌ಪಿಆರ್ ಕ್ಯಾಮರಾಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದರಿಂದ ನಿಯಮ ಉಲ್ಲಂಘಿಸುವ ವಾಹನ ಸವಾರರಿಗೆ ದಂಡ ಬಿಸಿ ಮುಟ್ಟಿಸಲಿದೆ. ಮೊದಲೇ ಟೋಲ್ ಮೊತ್ತ ಹೆಚ್ಚಾಗಿರುವುದರಿಂದ ವಾಹನ ಸವಾರರ ಜೇಬಿಗೆ ಕತ್ತರಿ ಬೀಳುತ್ತಿದ್ದು, ಕ್ಯಾಮರಾ ಇರುವಿಕೆ ಗಮನಿಸಿದ ನಿಗದಿತ ವೇಗಕ್ಕಿಂತ ಹೆಚ್ಚಿನ ವೇಗದಲ್ಲಿ ಚಾಲನೆ ಮಾಡಿದರೆ ದಂಡ ಪಾವತಿಸಬೇಕಾಗುತ್ತದೆ.

ಎಡಿಜಿಪಿಯಿಂದ ಪರಿಶೀಲನೆ: ಎಕ್ಸ್‌ಪ್ರೆಸ್ ವೇನಲ್ಲಿ ಅಳವಡಿಸಿರುವ ಹಾಗೂ ಹೊಸದಾಗಿ ಅಳವಡಿಸುತ್ತಿರುವ ಎಎನ್‌ಪಿಆರ್ ಕ್ಯಾಮರಾ ಕಾರ್ಯವೈಖರಿಯನ್ನು ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಅವರು ಮೇ 13ರಂದು ಬೆಂಗಳೂರು–ನಿಡಘಟ್ಟದವರೆಗೂ ಪರಿಶೀಲನೆ ನಡೆಸಲಿದ್ದಾರೆ. ಮೇ 14ರಂದು ನಿಡಘಟ್ಟದಿಂದ ಮೈಸೂರಿನವರೆಗೂ ಪರಿಶೀಲನೆ ನಡೆಸಿ, ಬದಲಾವಣೆ, ಮಾರ್ಪಾಡು ಇದ್ದರೆ ಸೂಚನೆ ನೀಡಲಿದ್ದಾರೆ. ಅಲ್ಲದೆ, ಕ್ಯಾಮರಾ ಕಾರ್ಯ ನಿರ್ವಹಣೆ ಕುರಿತಂತೆ ಪರಿಶೀಲನೆ ನಡೆಸಲಿದ್ದಾರೆ.

ಶೀಘ್ರದಲ್ಲೇ ಎಎನ್‌ಪಿಆರ್ ಕ್ಯಾಮರಾ ಕಾರ್ಯ ನಿರ್ವಹಣೆ: ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಮೈಸೂರು ಮಿತ್ರನೊಂದಿಗೆ ಮಾತನಾಡಿ, ಮೈಸೂರು–ಬೆಂಗಳೂರು ಹೈವೆ ರಸ್ತೆಯಲ್ಲಿ ಎಎನ್‌ಪಿಆರ್ ಕ್ಯಾಮರಾ ಅಳವಡಿಕಾ ಕಾರ್ಯ ಅಂತಿಮ ಹಂತಕ್ಕೆ ತಲುಪಿದೆ. ಶೀಘ್ರದಲ್ಲಿಯೇ ಎಲ್ಲಾ ಕ್ಯಾಮರಾಗಳು ಕಾರ್ಯಾರಂಭ ಮಾಡಲಿವೆ. ರಾಡರ್ ತಂತ್ರಜ್ಞಾನದ ಮೂಲಕ ಈ ಕ್ಯಾಮರಾ ಕಾರ್ಯನಿರ್ವಹಿಸಲಿದ್ದು, ವೇಗದ ಮಿತಿ ನಿಯಮ ಉಲ್ಲಂಘಿಸುವ ವಾಹನಗಳ ನಂಬರ್ ಪ್ಲೇಟ್ ಗುರುತಿಸಿ ಚಿತ್ರೀಕರಿಸಲಿದೆ. ಈ ಕ್ಯಾಮರಾ ಅಳವಡಿಕಾ ಕಾರ್ಯವನ್ನು ಮೇ 13 ಮತ್ತು 14ರಂದು ಪರಿಶೀಲಿಸುತ್ತಿರುವುದಾಗಿ ತಿಳಿಸಿದರು.

ಪೆನ್‌ಡ್ರೈವ್ ಪ್ರಕರಣದಲ್ಲಿ ಶಾಸಕ ಎ.ಮಂಜು ಕೈವಾಡ

ಆರೋಪಿ ನವೀನ್ ಗೌಡ ಎಫ್‌ಬಿ ಪೋಸ್ಟ್

ಬೆಂಗಳೂರು, ಮೇ 12– ಹಾಸನ ಸಂಸದ ಪ್ರಜ್ವಲ್ ರೇವಣ್ಣ ಸೆಕ್ಸ್ ಹಗರಣ ದಿನಕ್ಕೊಂದು ತಿರುವು ಪಡೆಯುತ್ತಿದ್ದು, ದಿನಕ್ಕೊಂದು ಹೊಸ ಹೊಸ ಹೆಸರುಗಳು ಸೇರ್ಪಡೆಯಾಗುತ್ತಿದ್ದು, ಇದೀಗ ಪ್ರಕರಣದಲ್ಲಿ ಹೊಸದಾಗಿ ಶಾಸಕ ಎ ಮಂಜು ಹೆಸರು ಕೇಳಿಬರುತ್ತಿದೆ.

ಪೆನ್‌ಡ್ರೈವ್ ಹಂಚಿಕೆಯ ಆರೋಪ ಹೊತ್ತಿರುವ ನವೀನ್ ಗೌಡ ಈ ಸಂಬಂಧ ತನ್ನ ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್‌ವೊಂದನ್ನು ಹಾಕಿದ್ದು, ಅರಕಲಗೂಡು ಶಾಸಕ ಎ. ಮಂಜು ಅವರೇ ಪೆನ್‌ಡ್ರೈವ್ ಹಂಚಿಕೆ ಮಾಡಿರಬಹುದು ಎಂದು ಶಂಕಿಸಿದ್ದಾರೆ. ಅಲ್ಲದೆ ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಹೇಳುತ್ತಿರುವ ಮಹಾ ನಾಯಕ ಇವರೇ ಎಂದು ಆರೋಪ ಮಾಡಿದ್ದಾರೆ

ಈ ಬಗ್ಗೆ ಫೇಸ್‌ಬುಕ್‌ನಲ್ಲಿ ನವೀನ್ ಗೌಡ ಹಾಕಿರುವ ಪೋಸ್ಟ್‌ನಲ್ಲಿ ಜೆಡಿಎಸ್ ಶಾಸಕ ಎ. ಮಂಜು ವಿರುದ್ಧ ನೇರವಾಗಿ ಆರೋಪ ಮಾಡಲಾಗಿದೆ. ಆದರೆ, ನವೀನ್ ಗೌಡ ಈ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದು, ಅವರಿಗಾಗಿ ಎಸ್‌ಐಟಿ ಅಧಿಕಾರಿಗಳು ತೀವ್ರ ಶೋಧ ನಡೆಸಿದ್ದಾರೆ.

ಪೋಸ್ಟ್‌ನಲ್ಲೇನಿದೆ?: ನನಗೆ ಏಪ್ರಿಲ್20 ರಂದು ಸಿಕ್ಕ ಪೆನ್‌ಡ್ರೈವ್ ಅನ್ನು ಅರಕಲಗೂಡು ಶಾಸಕ ಮಂಜು ಏಪ್ರಿಲ್ 21 ರಂದು ಅರಕಲಗೂಡು ಮಾರುತಿ ಕಲ್ಯಾಣ ಮಂಟಪದಲ್ಲಿ ಅವರಿಗೆ ನೀಡಿದ್ದೇನೆ. ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಅವರು ವಿಡಿಯೊವನ್ನು ವೈರಲ್ ಮಾಡಿದ್ದರ ಹಿಂದೆ ಮಹಾ ನಾಯಕನ ಕೈವಾಡ ಇದೆ ಎಂದು ಹೇಳಿದ್ದರು. ಆ ಮಹಾ ನಾಯಕ ಅರಕಲಗೂಡು ಶಾಸಕರೇ ಇರಬಹುದು ಎಂದು ಪೋಸ್ಟ್ ಮಾಡಿದ್ದಾನೆ. ಸದ್ಯ ನವೀನ್ ಗೌಡ ಪೋಸ್ಟ್ ಎಲ್ಲೆಡೆ ವೈರಲ್ ಆಗಿದೆ.

ಪೆನ್‌ಡ್ರೈವ್ ಹಂಚಿರುವ ನವೀನ್ ಗೌಡನನ್ನು ಎಸ್‌ಐಟಿ ಬಂಧಿಸಲಿ

ಅರಕಲಗೂಡು ಜೆಡಿಎಸ್ ಶಾಸಕ ಎ.ಮಂಜು ಆಗ್ರಹ

ಮೈಸೂರು, ಮೇ 12(ಎಸ್‌ಬಿಡಿ)– ನನಗೆ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯದ ಪೆನ್‌ಡ್ರೈವ್ ನೀಡಿರುವುದಾಗಿ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿರುವ ನವೀನ್ ಗೌಡ ಎಂಬಾತನನ್ನು ಎಸ್‌ಐಟಿ ಬಂಧಿಸಿ, ವಿಚಾರಣೆಗೊಳಪಡಿಸಬೇಕು ಎಂದು ಅರಕಲಗೂಡು ಜೆಡಿಎಸ್ ಶಾಸಕ ಎ.ಮಂಜು ಆಗ್ರಹಿಸಿದ್ದಾರೆ.

ಶಾಸಕ ಎ.ಮಂಜು ಅವರಿಗೆ ತಾನು ಏ.21ರಂದು ಪೆನ್‌ಡ್ರೈವ್ ಕೊಟ್ಟಿದ್ದು, ಪೆನ್‌ಡ್ರೈವ್ ಹಂಚಿಕೆಯ ಮಹಾನಾಯಕ ಎ.ಮಂಜು ಅವರೇ ಆಗಿರಬಹುದು ಎಂದು ನವೀನ್ ಗೌಡ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿರುವ ವಿಚಾರ ವರದಿಯಾಗುತ್ತಲೇ ಮೈಸೂರಿನಲ್ಲಿ ಭಾನುವಾರ ಸಂಜೆ ತುರ್ತು ಸುದ್ದಿಗೋಷ್ಠಿ ನಡೆಸಿ, ಮಾತನಾಡಿದ ಶಾಸಕ ಎ.ಮಂಜು, ಹಲವು ಮದುವೆಗಳಲ್ಲಿ ಭಾಗ ವಹಿಸಿದ್ದೇನೆ, ನೂರಾರು ಜನರನ್ನು ಮಾತನಾಡಿಸಿದ್ದೇನೆ. ಅವರಲ್ಲಿ ಈ ನವೀನ್ ಗೌಡ ಎಂಬ ವ್ಯಕ್ತಿ ಯಾರೆಂದು ಗೊತ್ತಿಲ್ಲ. ಶಾಸಕ ಹೆಚ್.ಡಿ.ರೇವಣ್ಣ ಬಂಧನ ವಿಚಾರವಾಗಿ ಜೆಡಿಎಸ್ ವತಿಯಿಂದ ಪ್ರತಿಭಟನೆ ನಡೆಸಿದ ನಂತರ ಪ್ರಕರಣ ಈ ರೀತಿ ತಿರುವು ಪಡೆಯುತ್ತಿದೆ. ನನಗೆ ನೆನಪಿರುವಂತೆ ಏ.21ರಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರೊಂದಿಗೆ ಪ್ರಚಾರ ಕಾರ್ಯದಲ್ಲಿ ಭಾಗವಹಿಸಿದ್ದೆ. ಬಿಡುವು ಮಾಡಿಕೊಂಡು ಅಂದು ಮದುವೆಗೆ ಹೋಗಿದ್ದು ನಿಜ. ಆದರೆ ಈ ನವೀನ್ ಗೌಡ ಯಾರು ಎನ್ನುವುದು ನನಗೆ ಗೊತ್ತಿಲ್ಲ ಎಂದರು.



ಆತನನ್ನು ಕೂಡಲೇ ಬಂಧಿಸಬೇಕು: ಆತ ಏ.21ರಂದು ನನಗೆ ಪೆನ್‌ಡ್ರೈವ್ ನೀಡಿದ್ದಾನೆ ಎಂದಾದರೆ ವಿಡಿಯೋ ಹಂಚಿದ್ದನ್ನು ತಾನೇ ಒಪ್ಪಿಕೊಂಡಂತಾಯ್ತು. ಕೂಡಲೇ ಆತನನ್ನು ಎಸ್‌ಐಟಿ ಬಂಧಿಸಿ, ವಿಚಾರಣೆಗೆ ಒಳಪಡಿಸಬೇಕು. ನನಗೆ ಆತ ಪೆನ್‌ಡ್ರೈವ್ ಕೊಟ್ಟಿದ್ದೇನೆ ಎಂದು ಹೇಳಿರುವ ದಿನ ಬೆಳಗ್ಗೆಯೇ ಪೆನ್‌ಡ್ರೈವ್‌ಗಳು ಹಾಸನ, ಸಕಲೇಶಪುರ ಮತ್ತಿತರ ತಾಲೂಕಗಳ ಪಾರ್ಕ್‌ಗಳಲ್ಲಿ ಬಿಸಾಡಲಾಗಿತ್ತು ಎಂದು ವರದಿಯಾಗಿತ್ತು. ಹಾಗಾದರೆ ಆತ ಎಲ್ಲೆಲ್ಲಾ ಹಂಚಿಕೆ ಮಾಡಿದ್ದ. ಪೆನ್‌ಡ್ರೈವ್ ತಯಾರಾಗಿದ್ದು ಎಲ್ಲಿ, ಅದರ ಹಿಂದಿರುವವರು ಯಾರು? ಎಲ್ಲವನ್ನೂ ತನಿಖೆ ಮೂಲಕ ಹೊರ ತೆಗೆಯಬೇಕು ಎಂದು ಆಗ್ರಹಿಸಿದರು.

ಕೇಸ್ ದಾಖಲಿಸುತ್ತೇನೆ: ರಾಜಕೀಯದ ಕೊನೆಗಾಲದಲ್ಲಿ ದೇವೇಗೌಡರು ನನ್ನ ಕೈಹಿಡಿದು ಶಾಸಕನಾಗಿ ಮಾಡಿದ್ದಾರೆ. ಅವರ ಕುಟುಂಬಕ್ಕೆ ನಾನೇಕೆ ದ್ರೋಹ ಮಾಡಲಿ. ಅಲ್ಲದೆ ಇಂತಹ ನೀಚ ರಾಜಕಾರಣವನ್ನು ನಾನೆಂದೂ ಮಾಡಿಲ್ಲ, ಮಾಡುವುದೂ ಇಲ್ಲ. ಪೆನ್‌ಡ್ರೈವ್ ಪ್ರಕರಣದಿಂದ ದೇವೇಗೌಡರು ತುಂಬಾ ನೊಂದಿದ್ದಾರೆ. ಅವರನ್ನು ಭೇಟಿಯಾದಾಗ ತುಂಬಾ ಬೇಸರವಾಯಿತು. ರೇವಣ್ಣನವರನ್ನೂ ಕಾರಾಗೃಹದಲ್ಲಿ ಭೇಟಿ ಮಾಡಿದ್ದೆ. ದೇವೇಗೌಡರ ಕುಟುಂಬದ ಕಷ್ಟದಲ್ಲಿ ಜೊತೆಗಿರುತ್ತೇನೆ. ಇದೇ ಕಾರಣಕ್ಕೆ ಪ್ರಕರಣದಲ್ಲಿ ನನ್ನನ್ನೂ ತಳಕು ಹಾಕುವ ಪ್ರಯತ್ನ ನಡೆದಿದೆ. ನವೀನ್ ಗೌಡ ಹಿಂದೆ ಯಾರೋ ಪ್ರಬಲರಿದ್ದಾರೆ. ತಪ್ಪಿತಸ್ಥರು ಯಾರೇ ಆಗಿರಲಿ ಕಾನೂನು ಪ್ರಕಾರ ಶಿಕ್ಷೆ ಆಗಲೇಬೇಕು ಎನ್ನುವುದಕ್ಕೆ ಈಗಲೂ ಬದ್ಧ. ಆದರೆ ಹೀಗೆಲ್ಲಾ ಪಿತೂರಿ ಮಾಡುವುದು ಸರಿಯಲ್ಲ. ಇದು ಮಹಿಳೆಯರ ಗೌರವ ಪ್ರಶ್ನೆ. ಮೊದಲು ನವೀನ್ ಗೌಡನನ್ನು ಬಂಧಿಸಿದರೆ ಪೆನ್‌ಡ್ರೈವ್ ಇತಿಹಾಸವೇ ಬಯಲಾಗುತ್ತದೆ. ಆತನ ವಿರುದ್ಧ ನಾನೂ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇನೆ ಎಂದು ತಿಳಿಸಿದರು.

ಪವರ್ ಲಿಫ್ಟಿಂಗ್ ಚಾಂಪಿಯನ್ ವಿಜೇತರಿಗೆ ಬಹುಮಾನ ವಿತರಣೆ



ಮೈಸೂರು, ಮೇ 12(ಎಂಕೆ)– ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಹೊಯ್ಸಳ ಕರ್ನಾಟಕ ಭವನದ ಆವರಣದಲ್ಲಿ ಮೈಸೂರು ಜಿಲ್ಲಾ ಪವರ್ ಲಿಫ್ಟಿಂಗ್ ಅಸೋಸಿಯೇಷನ್ ಹಾಗೂ ಅಪೋಲೋ ವ್ಯಾಯಾಮ ಶಾಲೆ ವತಿಯಿಂದ ಆಯೋಜಿಸಿದ್ದ 'ಪವರ್ ಲಿಫ್ಟಿಂಗ್ ಚಾಂಪಿಯನ್ ಶಿಪ್–2024' ವಿಜೇತರಿಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಬಹುಮಾನ ವಿತರಿಸಿದರು.

ಈ ವೇಳೆ ಮಾತನಾಡಿದ ಅವರು, ದುಶ್ಚಟಗಳಿಂದ ದೂರವಿರಲು ಕ್ರೀಡೆ ಸಹಕಾರಿಯಾಗಿದೆ. ಇಂದಿನ ಯುವಕರೇ ನಮ್ಮ ದೇಶದ ಶಕ್ತಿ. ಯುವಕರು ಸರಿಯಾದ ಮಾರ್ಗದಲ್ಲಿ ಬೆಳೆದರೆ ಸದೃಢ ದೇಶ ನಿರ್ಮಾಣವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಈ ನಿಟ್ಟಿನಲ್ಲಿ ಇಂತಹ ಸ್ಪರ್ಧಾತ್ಮಕ ಕಾರ್ಯಕ್ರಮ ಏರ್ಪಡಿಸಿರುವುದು ಅತ್ಯಂತ ಅರ್ಥಪೂರ್ಣವಾಗಿದೆ ಎಂದರು.

ಯುವ ಸಮೂಹ ಮದ್ಯ ವ್ಯಸನ, ಡ್ರಗ್ಸ್, ಜೂಜಾಟಗಳಿಗೆ ದಾಸರಾಗಿ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುವುದಲ್ಲದೇ ಆತ್ಮಹತ್ಯೆಯಂತಹ ಕೆಟ್ಟ ನಿರ್ಧಾರಗಳಿಗೆ ಬಲಿಯಾಗುತ್ತಿದ್ದಾರೆ. ಆದ್ದರಿಂದ ಯುವಕರು ಕ್ರೀಡೆ ಮತ್ತಿತರ ಆರೋಗ್ಯಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸದಾ ಕ್ರಿಯಾಶೀಲರಾಗಿರಬೇಕು. ಉತ್ತಮ ದೇಹ, ಆರೋಗ್ಯವುಳ್ಳವರು ಮಾನಸಿಕವಾಗಿಯೂ ಸದೃಢರಾಗಿರುತ್ತಾರೆ. ದೈಹಿಕ ವ್ಯಾಯಾಮವನ್ನು ಪ್ರತಿನಿತ್ಯ ಮಾಡುವುದರಿಂದ ದುಶ್ಚಟಗಳು ದೂರಾಗಲಿವೆ. ಸಮಾಜದಲ್ಲಿ ಹೆಚ್ಚು ಗೌರವವೂ ಸಿಗುತ್ತದೆ ಎಂದು ಸಲಹೆ ನೀಡಿದರು.

ಅಪೋಲೋ ಜಿಮ್ ಮಾಸ್ಟರ್ ನಾಗೇಶ್ ರಾವ್, ತರಬೇತುದಾರರಾದ ಭಾಸ್ಕರ್, ಶಾನ್ ಅವಾಸ್, ಶಿವಕುಮಾರ್, ಸುಪ್ರೀತ್, ಶರತ್, ರೇಣು, ವೇಣು, ಪ್ರವೀಣ್, ಪ್ರಜ್ವಲ್ ಗೌಡ, ಮತ್ತಿತರರು ಉಪಸ್ಥಿತರಿದ್ದರು.

ಗುರಿ ಸಾಧಿಸಲು ಗುರು ಪರಂಪರೆ ಮುಖ್ಯ

ನಾರಾಯಣ ದೇಸಾಯಿ ಅಭಿಮತ



ಅಜ್ಜನ ಮನೆ ಕಲಾ ಪ್ರಪಂಚ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಶ್ರೀ ಶಂಕರ ನಮನ ಕಾರ್ಯಕ್ರಮವನ್ನು ವಿದುಷಿ ಡಾ.ತುಳಸಿ ರಾಮಚಂದ್ರ ಉದ್ಘಾಟಿಸಿದರು.

ಮೈಸೂರು, ಮೇ 12(ಎಸ್‌ಪಿಎನ್)– ಸಮಾಜಕ್ಕೆ ಕುಲ ಪರಂಪರೆ ಎಷ್ಟು ಮುಖ್ಯವೂ ಅದೇ ರೀತಿ ನಾವು ಅಂದುಕೊಂಡ ಗುರಿ ಸಾಧಿಸಲು ಗುರು ಪರಂಪರೆಯೂ ಅಷ್ಟೇ ಮುಖ್ಯ ಎಂದು ಸಂಸ್ಕೃತ ಚಿಂತಕ ವಿದ್ವಾನ್ ನಾರಾಯಣ ದೇಸಾಯಿ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರ ಗಾನ ಭಾರತೀ ಆವರಣದ ರಮಾಗೋವಿಂಥ ಕಲಾ ವೇದಿಕೆಯಲ್ಲಿ ಅಜ್ಜನ ಮನೆ ಕಲಾ ಪ್ರಪಂಚ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಶ್ರೀ ಶಂಕರ ನಮನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಶಂಕರಾಚಾರ್ಯರು ಬದುಕಿದ್ದ ಕಡಿಮೆ ಅವಧಿಯಲ್ಲೇ ಜಗತ್ಪ್ರಸಿದ್ಧಿ ಪಡೆದಿದ್ದಾರೆ. ಶಂಕರಾಚಾರ್ಯರಿಗೆ 5ನೇ ವರ್ಷಕ್ಕೆ ಉಪನಯನವಾಯಿತು. ನಂತರ 8ನೇ ವಯಸ್ಸಿಗೆ ಲೋಕ ಪರ್ಯಟನೆ ಆರಂಭಿಸುತ್ತಾರೆ. ಆ ವೇಳೆ ನಾಲ್ಕು ವೇದಗಳಿಗೆ ಹೊಸ ಭಾಷ್ಯದ ಮೂಲಕ ಜಗತ್ತಿಗೆ ಪರಿಚಯಿಸುತ್ತಾರೆ. ಒಟ್ಟಿನಲ್ಲಿ ಅವಸಾನದ ಹಂಚಿನಲ್ಲಿದ್ದ ಹಿಂದೂ ಧರ್ಮಕ್ಕೆ ಪುನರುತ್ಥಾನಗೊಳಿಸಿದವರು ಶಂಕರಾಚಾರ್ಯ ಎಂದರೆ ತಪ್ಪಾಗಲಾರದು ಎಂದು ತಿಳಿಸಿದರು.

ಇದಕ್ಕೂ ಮುನ್ನ ಕಲಾವಿದರಾದ ಲಕ್ಷ್ಮೀ ಬಸವರಾಜು, ಡಾ.ತುಳಸಿ ರಾಮಚಂದ್ರ, ಸುಮಾ, ಕೃಷ್ಣ ರಮೇಶ್ ಅವರ ನೇತೃತ್ವದಲ್ಲಿ ಶ್ರೀ ಶಂಕರಾಚಾರ್ಯರ ಭಾವಚಿತ್ರಕ್ಕೆ ನಮಿಸಿ, ಕಾರ್ಯಕ್ರಮವನ್ನು ಉದ್ಘಾಟಿಸಿದರು.

ನಂತರ ಬೆಂಗಳೂರಿನ ಕೇಶವ ಕಾಲೇಜ್ ಆಫ್ ಮ್ಯೂಸಿಕ್ ಅಂಡ್ ಡ್ಯಾನ್ಸ್ ಕಲಾತಂಡದ ವಿದುಷಿ ಗೀತಾಶ್ಯಾಮ್ ಪ್ರಕಾಶ್ ನೇತೃತ್ವದಲ್ಲಿ ಪಂಚ ವೀಣಾವಾದನ ನಡೆಸಿಕೊಟ್ಟರು. ಇವರಿಗೆ ವಿದ್ವಾನ್ ಶುಭಾಂಗ್ ಸಾವಗ(ಮೃದಂಗ), ವಿದ್ವಾನ್ ಟಿ.ಎಸ್.ಅಜಯ್ ಘಟಂ ನುಡಿಸಿ ಸಾಥ್ ನೀಡಿದರು.

ತದ ನಂತದ ಬೆಂಗಳೂರಿನ ದಿ ಸೆಂಟರ್ ಫಾರ್ ಡಿವೈನ್ ಆರ್ಟ್ಸ್ ತಂಡದಿಂದ ಶ್ರೀ ಶಂಕರಾಚಾರ್ಯ ವಿರಚಿತ ಸೌಂದರ್ಯ ಲಹರಿ ವಿಲಾಹ ನೃತ್ಯರೂಪಕ ನಡೆಸಿಕೊಟ್ಟರು. ಮೈಸೂರು ನೃತ್ಯಾಲಯ ಟ್ರಸ್ಟ್‌ನ ಕಲಾವಿದರು ಶಂಕರಂ ಲೋಕ ಶಂಕರಂ ನೃತ್ಯ ರೂಪಕ ನಡೆಸಿಕೊಟ್ಟರು.

ವಿಧಾನ ಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಮರಿತಿಬ್ಬೇಗೌಡ ಕಾಂಗ್ರೆಸ್ ಅಭ್ಯರ್ಥಿ

ನಾಳೆ ನಾಮಪತ್ರ ಸಲ್ಲಿಕೆ



ವಿಧಾನ ಪರಿಷತ್ತಿನ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಅವರು ಬಿ ಫಾರಂ ಸ್ವೀಕರಿಸಿದ ನಂತರ ಬೆಂಗಳೂರಿನಲ್ಲಿ ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಅವರನ್ನು ಅಭಿನಂದಿಸಿದರು. ಈ ವೇಳೆ ಸಚಿವ ಚಲುವರಾಯಸ್ವಾಮಿ, ಶಾಸಕ ಪಿ.ಎಂ.ನರೇಂದ್ರಸ್ವಾಮಿ, ಪರಿಷತ್ ಸದಸ್ಯ ದಿನೇಶ್‌ಗೂಳಿಗೌಡ ಮತ್ತಿತರರು ಇದ್ದರು.

ಮೈಸೂರು,ಮೇ 12(ಪಿಎಂ)– ವಿಧಾನ ಪರಿಷತ್ತಿನ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಮರಿತಿಬ್ಬೇಗೌಡ ಅವರನ್ನು ಆಯ್ಕೆ ಮಾಡಲಾಗಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಮರಿತಿಬ್ಬೇಗೌಡರ ಹೆಸರನ್ನು ಅನುಮೋದಿಸಿದ್ದಾರೆಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಭಾನುವಾರ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ನಿರಂತರವಾಗಿ ನಾಲ್ಕು ಅವಧಿಗೆ ಇದೇ ಕ್ಷೇತ್ರದಿಂದ ಪರಿಷತ್ ಸದಸ್ಯರಾಗಿ ಮರಿತಿಬ್ಬೇಗೌಡ ಆಯ್ಕೆಯಾಗಿದ್ದಾರೆ. ಇವರು ಕಳೆದ ಮಾರ್ಚ್‌ನಲ್ಲಿ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿ, ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಿದ್ದರು. ಮೊದಲ ಬಾರಿಗೆ ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದ ಅವರು, ನಂತರದ ಅವಧಿಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಪರಿಷತ್ತಿಗೆ ಪ್ರವೇಶ ಪಡೆದಿದ್ದರು. ಆ ಬಳಿಕದ ಎರಡು ಅವಧಿಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದರು. ಜೊತೆಗೆ ಪರಿಷತ್ತಿನ ಉಪಸಭಾಪತಿ ಆಗಿಯೂ ಕಾರ್ಯನಿರ್ವಹಿಸಿದ್ದರು. ಇದೀಗ ಐದನೇ ಅವಧಿಗೆ ಆಯ್ಕೆ ಬಯಸಿ ಕಾಂಗ್ರೆಸ್‌ನಿಂದ ಕಣಕ್ಕಿಳಿಯುತ್ತಿದ್ದಾರೆ.

ಮೇ 14ರಂದು ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಮರಿತಿಬ್ಬೇಗೌಡ ನಾಮಪತ್ರ ಸಲ್ಲಿಸಲಿದ್ದಾರೆ. ಇದಕ್ಕೂ ಮುನ್ನ ಬೆಳಗ್ಗೆ 10.30ಕ್ಕೆ ಪಡುವಾರಹಳ್ಳಿಯ ವಾಲ್ಮೀಕಿ ರಸ್ತೆಯಲ್ಲಿರುವ ಲೀಲಾ ಚೆನ್ನಯ್ಯ ಕಲ್ಯಾಣ ಮಂಟಪದಲ್ಲಿ ಸಭೆ ಆಯೋಜಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರು, ಶಾಸಕರು, ಮಾಜಿ ಶಾಸಕರು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಸಮ್ಮುಖದಲ್ಲಿ ನಾಮಪತ್ರ ಸಲ್ಲಿಸುವುದಾಗಿ ಮರಿತಿಬ್ಬೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭವಾನಿ ರೇವಣ್ಣಗೆ 2ನೇ ನೋಟಿಸ್

ಹಾಸನ, ಮೇ 12– ಹಾಸನ ಸಂಸದ ಪ್ರಜ್ವಲ್ ರೇವಣ್ಣ ಸೆಕ್ಸ್ ಹಗರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ತೆಯ ಅಪಹರಣ ಪ್ರಕರಣದಲ್ಲಿ ಎಚ್.ಡಿ.ರೇವಣ್ಣ ಅವರ ಪತ್ನಿ ಭವಾನಿ ರೇವಣ್ಣ ಅವರಿಗೆ ಮತ್ತೊಂದು ಸಂಕಷ್ಟ ಎದುರಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗುವಂತೆ ಎಸ್‌ಐಟಿ ಶನಿವಾರ ಎರಡನೇ ನೋಟಿಸ್ ಜಾರಿ ಮಾಡಿದೆ. ಮೊದಲ ನೋಟಿಸ್‌ಗೆ ಉತ್ತರಿಸದ ಹಿನ್ನೆಲೆಯಲ್ಲಿ ಎರಡನೇ ನೋಟಿಸ್ ಜಾರಿ ಮಾಡಲಾಗಿದೆ ಎಂದು ವರದಿಯಾಗಿದೆ.

ಮಾತ್ರವಲ್ಲದೇ ರೇವಣ್ಣ ಮೇಲೆ ಕೇಳಿ ಬಂದಿರುವ ಅಪಹರಣ ಪ್ರಕರಣದ ಕೇಸ್‌ನಲ್ಲಿ ಕುಮ್ಮಕ್ಕು ಕೊಟ್ಟ ಆರೋಪವನ್ನು ಭವಾನಿ ರೇವಣ್ಣ ಹೊತ್ತಿದ್ದಾರೆ. ಈ ಸಂಬಂಧ ಹಲವಾರು ಪ್ರಶ್ನೆಗಳನ್ನು ಕೇಳಲು ಎಸ್‌ಐಟಿ ತಂಡ ಸಿದ್ಧವಾಗಿದೆ. ಆದರೆ, ಭವಾನಿ ರೇವಣ್ಣ ವಿಚಾರಣೆಗೆ ಹಾಜರಾಗದೆ ತಪ್ಪಿಸಿಕೊಳ್ಳುತ್ತಿದ್ದಾರೆ. ಈ ಬಾರಿಯೂ ಭವಾನಿ ರೇವಣ್ಣ ವಿಚಾರಣೆಗೆ ಹಾಜರಾಗದಿದ್ದರೆ ಎಸ್‌ಐಟಿ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಲು ಸಿದ್ಧತೆ ನಡೆಸಿದೆ ಎಂದು ತಿಳಿದುಬಂದಿದೆ.

ನಗರ ಹಸಿರೀಕರಣಕ್ಕೆ ಅಧಿಕಾರಿಗಳ, ಜನರ ಸಹಕಾರ ಅಗತ್ಯ

ಮೈಸೂರು ಗ್ರಾಹಕ ಪರಿಷತ್ ಸಭೆಯಲ್ಲಿ ಚರ್ಚೆ

ಮೈಸೂರು, ಮೇ 12(ಎಸ್‌ಪಿಎನ್)– ಒಂದು ನಗರ ಹಸಿರಿನಿಂದ ಕಂಗೊಳಿಸಬೇಕಾದರೆ, ಸಾರ್ವಜನಿಕರು, ಸ್ಥಳೀಯ ಸಂಸ್ಥೆ ಅಧಿಕಾರಿಗಳು, ರಾಜ್ಯ ಸರ್ಕಾರದ ಸಹಕಾರ ಅತೀ ಮುಖ್ಯ ಎಂಬ ಅಭಿಪ್ರಾಯ ಭಾನುವಾರ ನಡೆದ ಮೈಸೂರು ಗ್ರಾಹಕ ಪರಿಷತ್(ಮೈಗ್ರಾಪ) ಸಾಮಾನ್ಯ ಸಭೆಯಲ್ಲಿ ವ್ಯಕ್ತವಾಯಿತು.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯ ಮೈಗ್ರಾಪ ಕಚೇರಿಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಹಲವು ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಮೈಸೂರು ನಗರ ಹಸಿರೀಕರಣಗೊಳಿಸುವ ಸಂಬಂಧ ಈಗಾಗಲೇ ಲಕ್ಷಾಂತರ ಗಿಡಗಳನ್ನು ನೆಡಲಾಗುತ್ತಿದೆ. ಹಾಗೆಯೇ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ತಮ್ಮ ತಮ್ಮ ಮನೆಗಳಲ್ಲಿ ಸಸಿಗಳನ್ನು ನೆಡಲು ಕೋಟಿ ವೃಕ್ಷ ಅಭಿಯಾನದ ಮೂಲಕ ಲಕ್ಷಾಂತರ ಗಿಡಗಳನ್ನು ವಿತರಿಸಲಾಗುತ್ತಿದೆ ಎಂದರು.

ಪರಿಸರದಲ್ಲಾಗುತ್ತಿರುವ ಏರುಪೇರುಗಳನ್ನು ಸರಿಪಡಿಸಲು ನಗರ ಹೆಚ್ಚು ಹಸಿರೀಕರಣಗೊಳ್ಳಬೇಕು. ಇದಕ್ಕೆ ಸಾರ್ವಜನಿಕರ ಸಹಭಾಗಿತ್ವವೂ ಮುಖ್ಯ ಎಂದರಲ್ಲದೆ, ಫುಟ್‌ಪಾತ್‌ನಲ್ಲಿ ಹಾಕಿರುವ ಮರಗಳ ಸುತ್ತ ಡಾಂಬರ್ ಅಥವಾ ಸಿಮೆಂಟ್ ಟೈಲ್ಸ್‌ಗಳಿಂದ ಸಂಪೂರ್ಣ ಮುಚ್ಚಲಾಗಿರುತ್ತದೆ. ಇದರಿಂದ ಮರಗಳಿಗೆ ನೀರು ತಲುಪಲು ಅಡ್ಡಿಯಾಗಿ, ಮರದ ಬೇರುಗಳು ದುರ್ಬಲಗೊಂಡು ಬೀಳುವ ಸಾಧ್ಯತೆ ಇದ್ದು, ಇದರ ಬಗ್ಗೆ ಯಾರೂ ಗಮನಹರಿಸುತ್ತಿಲ್ಲ ಎಂದರು.



ಮೈಸೂರು ಗ್ರಾಹಕ ಪರಿಷತ್(ಮೈಗ್ರಾಪ) ಸಾಮಾನ್ಯ ಸಭೆಯಲ್ಲಿ ಹಸಿರೀಕರಣ ಕುರಿತು ಸದಸ್ಯರು ಚರ್ಚಿಸಿದರು.

ಪರಿಸರ ತಜ್ಞ ಡಾ.ಶಂಕರ್ ಭಟ್ ಮಾತನಾಡಿ, ಫುಟ್‌ಪಾತ್‌ಗಳಲ್ಲಿ ನೆಟ್ಟಿರುವ ಗಿಡಗಳನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡಬೇಕು. ಇದರ ನಿರ್ವಹಣೆ ಕುರಿತು ಆಯಾಯ ಜಿಲ್ಲೆಗಳಲ್ಲಿ ಸ್ಥಳೀಯ ಸಂಸ್ಥೆಗಳೇ ನೇರ ಉತ್ತರದಾಯಿತ್ವ ಹೊಂದಲು ಸರ್ಕಾರ ಮಾರ್ಗದರ್ಶನ ನೀಡಬೇಕು. ಅಲ್ಲದೆ, ಮೈಸೂರು ನಗರದಲ್ಲಿ ಪರಿಸರ ನಿರ್ವಹಣೆ ಕುರಿತು ಮೈಸೂರು ನಗರ ಪಾಲಿಕೆ ಅಧಿಕಾರಿಗಳ ಜವಾಬ್ದಾರಿ ಆಗಿದ್ದೂ ಅದನ್ನೂ ಸರಿಯಾಗಿ ನಿರ್ವಹಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಇದಕ್ಕೆ ಬಹುತೇಕ ಸದಸ್ಯರು ದನಿಗೂಡಿಸಿದರು.

ಅಲ್ಲದೆ, ನಗರ ಪ್ರದೇಶದಲ್ಲಿ ಸಸಿಗಳನ್ನು ನೆಡಬಹುದು. ಆದರೆ, ಆ ಗಿಡಗಳ ನಿರ್ವಹಣೆ ಹೇಗೆ ಎಂಬುದು ಯಕ್ಷ ಪ್ರಶ್ನೆಯಾಗಿದೆ. ನಗರ ಪ್ರದೇಶದಲ್ಲಿ ದಿನ ದಿಂದ ದಿನಕ್ಕೆ ಗಿಡ–ಮರಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಈಗ ಉಳಿದಿರುವ ಮರಗಳನ್ನು ಉಳಿಸಿಕೊಳ್ಳಬೇಕಾದರೆ, ವಿದ್ಯುತ್ ನಿಗಮಗಳ ನೌಕರರಿಗೆ, ಮೈಸೂರು ನಗರಪಾಲಿಕೆ ನೌಕರರಿಗೆ ವೈಜ್ಞಾನಿಕವಾಗಿ ಮರಗಳನ್ನು ಕತ್ತರಿಸುವ ಬಗ್ಗೆ ತರಬೇತಿ ನೀಡುವ ಅವಶ್ಯಕತೆ ಇದೆ. ಆದರೆ, ಇದರ ಬಗ್ಗೆ ಯಾವುದೇ ಅಧಿಕಾರಿಗಳು ಗಮನಹರಿಸುತ್ತಿಲ್ಲ ಎಂದು ತಿಳಿಸಿದರು.

ಅರಣ್ಯ ಇಲಾಖೆಯ ಆರ್‌ಎಫ್‌ಓ ಧನ್ಯಶ್ರೀ ಮಾಹಿತಿ ನೀಡಿ, ಮೈಸೂರು ಹಸಿರೀಕರಣ ಮಾಡಲು ಅರಣ್ಯ ಇಲಾಖೆ ಬದ್ಧವಾಗಿದೆ. ಈಗಾಗಲೇ ಲಕ್ಷಾಂತರ ಸಸಿಗಳನ್ನು ನೆಟ್ಟು ಪೋಷಿಸುತ್ತಿದೆ. ಅಲ್ಲದೆ, ಒಮ್ಮೆ ಸಾರ್ವಜನಿಕ ರಸ್ತೆಗಳಲ್ಲಿ ಗಿಡ ನೆಟ್ಟರೆ, ಆ ಗಿಡಗಳನ್ನು ಐದು ವರ್ಷಗಳವರೆಗೆ ಪೋಷಿಸುವುದು ಅರಣ್ಯ ಇಲಾಖೆ ಜವಾಬ್ದಾರಿ. ನಂತರ ಅದರ ನಿರ್ವಹಣೆ ಸ್ಥಳೀಯ ಸಂಸ್ಥೆಗಳು ತೆಗೆದುಕೊಳ್ಳಬೇಕು. ಅದು ಸಾಧ್ಯವಾಗುತ್ತಿಲ್ಲ. ಪ್ರಸ್ತುತ 11 ಸಾವಿರಕ್ಕೂ ಹೆಚ್ಚು ನೆಡುವಷ್ಟು ಸಸಿಗಳು ನಮ್ಮ ಇಲಾಖೆಯಲ್ಲಿವೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬಹುದು ಎಂದು ಮಾಹಿತಿ ನೀಡಿದರು. ಈ ವೇಳೆ ಮೈಗ್ರಾಪ ಅಧ್ಯಕ್ಷ ಶ್ರೀಶೈಲಾ ರಾಮಣ್ಣ, ಶೋಭನಾ, ಭಾಮಿ ವಿ.ಶೆಣೈ ಸೇರಿದಂತೆ ಅನೇಕರಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ : ಯಾರೋ ನಂಗೆ 'ಮಾಟ-ಮಂತ್ರ ಮಾಡಿಸಿದ್ದಾರೆ ಅನ್ಸುತ್ತೆ!
ತಿಮ್ಮ : ಹೇಗೆ ಹೇಳ್ತಿಯಾ?
ಗುಂಡ : ಯಾಕಂದ್ರೆ ಯಾವ 'ಹುಡ್ಗಿನು' ನನ್ನ 'ಪ್ರಪೋಸ್' ಒಪ್ಕೋತಿಲ್ಲ..

ಮೈಸೂರು ಮಿತ್ರ

ಸೋಮವಾರ, 13 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

'ಸಾವಿರ ಕಷ್ಟದ ಹಿಂದೆ ನೆಮ್ಮದಿ ಅಡಗಿರುತ್ತದೆ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಅಡುಗೆ ಮಾಡಿದವಳಿಗಿಂತ, ಬಡಿಸಿದವಳೇ ಮೇಲು'

ನಿಮ್ಮ ಪತ್ರಗಳು

ವಿಜಯನಗರ ಹೈ ಟೆನ್ಷನ್ ರಸ್ತೆಯಲ್ಲಿ ಅವೈಜ್ಞಾನಿಕ ರಸ್ತೆ ವಿಭಜಕ



ಮಾನ್ಯರೆ,

ಮೈಸೂರಿನ ವಿಜಯನಗರ ಬಡಾವಣೆಯ ಹೈ ಟೆನ್ಷನ್ ರಸ್ತೆಯ ನಡುವೆ ಸಿಮೆಂಟಿನ ರಸ್ತೆ ವಿಭಜಕವನ್ನು ಸಂಬಂಧಪಟ್ಟ ಇಲಾಖೆ ನಿರ್ಮಿಸುತ್ತಿದೆ. ಇಲ್ಲಿ ನಾವುಗಳು ವಿಜಯನಗರ ಸ್ಪೋರ್ಟ್ಸ್ ಸ್ಟೇಡಿಯಂ ಕಡೆಯಿಂದ ಬಂದು, ವಿಜಯನಗರ ರೈಲ್ವೆ ಬಡಾವಣೆ ಪ್ರವೇಶಿಸಲು, ಫೋಟೋದಲ್ಲಿ ಕಾಣುವ ಸಪ್ತಗಿರಿ ಗ್ಲಾಸ್ ಹೌಸ್ ಪಕ್ಕದ ಅಡ್ಡ ರಸ್ತೆ ಬಳಸುತ್ತಿದ್ದೆವು. ಆದರೆ ಈಗ ಇವರು ಈ ಹೊಸ ರಸ್ತೆ ವಿಭಜಕವನ್ನು ವಿವೇಕರಹಿತವಾಗಿ ಹಾಕುತ್ತಿರುವುದರಿಂದ ಇಲ್ಲಿ, ಸುಗಮ ಸಂಚಾರಕ್ಕೆ ನೆರವಾಗುವ ಬದಲು, ವೃಥಾ ಸಂಚಾರ ದಟ್ಟಣೆ. ಈಗ ನಾವು ರೈಲ್ವೆ ಬಡಾವಣೆ ಯನ್ನು ಮೊದಲಿನಂತೆ ಪ್ರವೇಶಿಸಲು ಪ್ರಯತ್ನಿಸಿದರೆ, ಇಲ್ಲಿ ಅಪಘಾತಗಳು ನಡೆದು, ಮುಖ್ಯ ರಸ್ತೆಯ ಸಂಚಾರಕ್ಕೆ ದಿನಂಪ್ರತಿ ಅಡ್ಡಿಯಾಗುವುದು ಖಂಡಿತ.

ಈ ಹಿನ್ನೆಲೆಯಲ್ಲಿ ಸಂಬಂಧಿಸಿದ ಸಂಚಾರಿ ಪೊಲೀಸ್ ಅಧಿಕಾರಿಗಳು, ಸ್ಥಳಕ್ಕೆ ಕೂಡಲೇ ಭೇಟಿ ನೀಡಿ ಇಲ್ಲಿ ನಿರ್ಮಿಸುತ್ತಿರುವ ವಿಭಜಕವನ್ನು ಸಪ್ತಗಿರಿ ಗ್ಲಾಸ್ ಹೌಸ್‌ನ ತುಸು ಮೊದಲೇ ನಿಲ್ಲಿಸಿ ರೈಲ್ವೆ ಬಡಾವಣೆ ನಿವಾಸಿಗಳು, ಭವಿಷ್ಯದಲ್ಲಿ ಕೊಂಕಣ ಸುತ್ತಿ ಮೈಲಾರಕ್ಕೆ ಹೋಗುವುದನ್ನು ತಪ್ಪಿಸಲಿ.

ಮೇಲಾಗಿ ಈ ವಿಜಯನಗರ ರೈಲ್ವೆ ಬಡಾವಣೆಯ ಈ Approach ರಸ್ತೆ, ರಿಲಯನ್ಸ್ ಮಾಲ್ ಮುಂಭಾಗದ ರಸ್ತೆ ರಿಪೇರಿ ಇತ್ಯಾದಿ ಸಲುವಾಗಿ ಬಂದ್ ಆದ ಸಂದರ್ಭದಲ್ಲಿ, ಸೂರ್ಯ ಬೇಕರಿ ವೃತ್ತ ತಲುಪಲು, ಪರ್ಯಾಯ ಮಾರ್ಗ ವಾಗಿ ಬಳಸಲ್ಪಡುತ್ತದೆ. ಸಂಚಾರಿ ಪೊಲೀಸರು ಇದನ್ನು ಯೋಚಿಸಿಲ್ಲ. ಏಕೆ?

ಆದ ಕಾರಣ, ಈ ಸಿಮೆಂಟ್ ವಿಭಜಕವನ್ನು ಪಶ್ಚಿಮ ದಿಕ್ಕಿನಲ್ಲಿ ಗ್ಲಾಸ್ ಹೌಸ್ ಬಳಿಯೇ ಮೊಟಕುಗೊಳಿಸಿ, ಮುಂದಾಗುವ ಸಾರ್ವಜನಿಕ ಅನಾನುಕೂಲವನ್ನು ಸಂಬಂಧಿಸಿದ ಅಧಿಕಾರಿಗಳು ತಪ್ಪಿಸಲಿ. ಇದಕ್ಕೆ ಸ್ಥಳೀಯ ಶಾಸಕರು ಸಹಿತ ತಮ್ಮ ಬೆಂಬಲ ಸೂಚಿಸಿ, ತಮ್ಮ ಜನಪರ ಧೋರಣೆಯನ್ನು ಪ್ರದರ್ಶಿಸಲಿ.

–ನಾಗಮಂಗಲ ನರಸಿಂಹಮೂರ್ತಿ

ಡಿಕೆಶಿ, ಹೆಚ್‌ಡಿಕೆಗೆ ಬುದ್ಧಿ ಹೇಳುವವರು ಯಾರೂ ಇಲ್ಲವೇ?

ಮಾನ್ಯರೆ,

ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯದ ಪೆನ್‌ಡ್ರೈವ್‌ಗೆ ಸಂಬಂಧಿಸಿದಂತೆ, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನಡುವಿನ ವೈಯಕ್ತಿಕ ಮಾತಿನ ಸಮರ ತಾರಕಕ್ಕೇರುತ್ತಿದೆ,



ಕುಮಾರಸ್ವಾಮಿಯವರು ಮೊನ್ನೆ, ಮಾಧ್ಯಮಗಳ ಮುಂದೆ ನಾನು ಒಂದು ಕರೆ ಕೊಟ್ಟರೆ ಸಾಕು ನೀವುಗಳು (ಡಿ.ಕೆ. ಬ್ರದರ್ಸ್) ರಸ್ತೆಯಲ್ಲಿ ಓಡಾಡುವ ಹಾಗಿಲ್ಲ ಎಂದು ಬಹಿರಂಗವಾಗಿ ಬೆದರಿಕೆ ಹಾಕಿದ್ದಾರೆ. ಇದಕ್ಕೆ ಪ್ರತಿಯಾಗಿ ಡಿ.ಕೆ.ಶಿವಕುಮಾರ್ ಅವರು ಏಕವಚನದಲ್ಲೇ, ಕುಮಾರಸ್ವಾಮಿಯವರನ್ನು ಉದ್ದೇಶಿಸಿ ಕರೆ ಕೊಡಪ್ಪ ನಾನು ಅದನ್ನೇ ಕಾಯುತ್ತಿದ್ದೇನೆ, ಏನಾಗುತ್ತೆ ನೋಡೋಣ ಎನ್ನುತ್ತಾರೆ.

ಇವರುಗಳ ಪ್ರಚೋದನಕಾರಿ ಹೇಳಿಕೆಗಳಿಂದ, ನಿಜವಾಗಿಯೂ ತೊಂದರೆ ಅನುಭವಿಸುವವರು ಸಾಮಾನ್ಯ ಕಾರ್ಯಕರ್ತರು, ಇದನ್ನು ನೋಡುತ್ತಾ, ಕೆಲವರು ಮಜಾ ತೆಗೆದುಕೊಳ್ಳುತ್ತಿದ್ದಾರೆ, ಕೆಲವರು ನಗುತ್ತಿದ್ದಾರೆ, ಕೆಲವರಂತೂ ಇವರುಗಳ ಹಣೆಬರಹವೇ ಇಷ್ಟು ಎಂದು ಎಂದು ಒಳಗೊಳಗೇ ಖುಷಿಪಡುತ್ತಿದ್ದಾರೆ. ಇವೆಲ್ಲವೂ ನಡೆಯುತ್ತಿರುವುದು, ಒಕ್ಕಲಿಗರ ನಾಯಕತ್ವಕ್ಕಾಗಿ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಈ ಇಬ್ಬರು ನಾಯಕರನ್ನು ಕರೆದು, ಬುದ್ಧಿ ಹೇಳುವ ಒಕ್ಕಲಿಗರ ಮುಖಂಡರು ಯಾರೂ ಇಲ್ಲವೇ? ಆದಿಚುಂಚನಗಿರಿ ಮಠದ ಸ್ವಾಮಿಗಳು ಇವರನ್ನು ಕರೆದು ಬುದ್ಧಿ ಹೇಳಲಿ. **–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.**

ಕೊಲೆಗಡುಕರಿಗೆ ಕಠಿಣ ಕಾನೂನು ಜಾರಿಯಾಗಲಿ

ಮಾನ್ಯರೆ,

ಹುಬ್ಬಳ್ಳಿಯ ನೇಹಾ ಕೊಲೆ ಮಾಸುವ ಮುನ್ನವೇ ಕೊಡಗಿನಲ್ಲಿ ಮತ್ತೆ ಅಂತದೇ ಘಟನೆ ನಡೆದಿರುವುದು ವಿಷಾದನೀಯ. ಕೊಲೆ ಮಾಡಿದರೂ ಶಿಕ್ಷೆಯೇ ಆಗದೇ ಸಾಕ್ಷಿಗಳ ಕೊರತೆಯ ನೆಪದಲ್ಲಿ ಬಿಡುಗಡೆಯಾಗಿ ಮತ್ತದೇ ಕೃತ್ಯದಲ್ಲಿ ಭಾಗಿಯಾದ ಹಲವಾರು ನಿದರ್ಶನಗಳಿವೆ. ಅಪರಾಧಿಗೆ ತಕ್ಕ ಶಿಕ್ಷೆಯಾಗದಿರುವುದೇ ಅಪರಾಧಿಗಳ ಇಂತಹ ಹೀನ ಕೃತ್ಯಗಳಿಗೆ ಕಾರಣವಾಗಿವೆ.

ಕೊಲೆ ಪ್ರಕರಣಗಳಲ್ಲಿ ಶೀಘ್ರಗತಿ ನ್ಯಾಯಾಲಯಗಳನ್ನು ಸ್ಥಾಪಿಸಿ ಮರಣದಂಡನೆ ಜಾರಿಯಾಗುವಂತೆ ಐಪಿಸಿ ಕಾನೂನಿಗೆ ತಿದ್ದುಪಡಿ ತಂದು ಶಿಕ್ಷೆ ಜಾರಿ ಮಾಡುವುದೇ ಸದ್ಯದ ಪರಿಹಾರವಾಗಿದೆ. ಸಾಕ್ಷಿಗಳು ಸಿಸಿ ಕ್ಯಾಮರಾಗಳಲ್ಲಿ ಲಭ್ಯವಿದ್ದಲ್ಲಿ ಅಂತಹವರನ್ನು ಎನ್ಕೌಂಟರ್ ಕೂಡ ಮಾಡಲು ಸರ್ಕಾರ ಕಾನೂನು ತರಬೇಕು. ಇಲ್ಲದಿದ್ದರೆ ಮನುಷ್ಯ ಜೀವಕ್ಕೆ ಬೆಲೆಯೇ ಇಲ್ಲದೆ ಇಂತಹ ಘಟನೆಗಳು ಅವ್ಯಾಹತವಾಗಿ ನಡೆಯಲು ಕಾರಣವಾಗಬಹುದು. ಕಾನೂನು ಪಂಡಿತರು ಈ ಬಗ್ಗೆ ಯೋಚಿಸಬೇಕು. **–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.**

ಚುನಾವಣಾ ಬಾಂಡುಗಳ ಅಂತ್ಯ: ಮುಂದೇನು?

ರಾಜ್ಯವೇ ಪೂರೈಸುವ ನಿಧಿ: ಒಂದು ಪ್ರಜಾಪ್ರಭುತ್ವೀಯ ಪರ್ಯಾಯ–2



ಪ್ರೊ.ಎಂ.ಉಮಾಪತಿ
ನಿವೃತ್ತ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ

(ನಿನ್ನೆಯ ಸಂಚಿಕೆಯಿಂದ)

> ಪ್ರಜಾಪ್ರಭುತ್ವ ಒಂದು ಬಹಳ ಕ್ಲಿಷ್ಟ, ನಾಗರಿಕ ಹಾಗೂ ನ್ಯಾಯಯುತ ವ್ಯವಸ್ಥೆ. ಇದು ಚರಿತ್ರೆಯಲ್ಲಿ ನಿಧಾನವಾಗಿ ಸುಧಾರಿಸುತ್ತಾ ಮತ್ತು ಉತ್ತಮವಾಗುತ್ತಾ ಬಂದಿದೆ. ಇದನ್ನು ಇನ್ನೂ ಉತ್ತಮಪಡಿಸುವ ಕಾಲ ಈಗ ಬಂದಿದೆ. ಈ ಲೇಖನದಲ್ಲಿ ಸೂಚಿಸಿರುವ ಚುನಾವಣಾ ಸುಧಾರಣೆಗಳು ಈ ನಿಟ್ಟಿನಲ್ಲಿ ದೇಶದ ಜನರ ಗಮನ ಸೆಳೆದು ಪ್ರಜಾಪ್ರಭುತ್ವವನ್ನು ಕಳ್ಳರ ಆಳ್ವಿಕೆ (Crypto cracy), ಲೂಟಿಕೋರರ ಆಳ್ವಿಕೆ (lootocracy) ಅಥವಾ ಕೇವಲ ಉಳ್ಳವರ ಆಳ್ವಿಕೆ (Plutocracy)ಯಾಗುವುದನ್ನು ತಪ್ಪಿಸುವ ಪ್ರಯತ್ನವಾಗಿದೆ.

ಚುನಾವಣಾ ಅಭ್ಯರ್ಥಿಗಳ ವೆಚ್ಚವನ್ನು ನಿಯಂತ್ರಿಸಲು ಚುನಾವಣಾ ಕಾನೂನು ಇದರ ಮೇಲೆ ಮಿತಿಗಳನ್ನು ಗೊತ್ತುಪಡಿಸಿದೆ. ಲೋಕಸಭಾ ಚುನಾವಣೆ–2024ರಲ್ಲಿ ಕ್ಷೇತ್ರದ ಗಾತ್ರದ ಆಧಾರದ ಮೇಲೆ ರೂ. 65 ಲಕ್ಷದಿಂದ ರೂ. 95 ಲಕ್ಷದವರೆಗೆ ಈ ಮಿತಿಗಳಿವೆ. ಹಾಗೂ ಈ ಮಿತಿಗಳನ್ನು ಜಾರಿಗೊಳಿಸಲು ಚುನಾವಣಾ ಅಧಿಕಾರಿಗಳು ಮತದಾರರನ್ನು ಪ್ರಲೋಭಿಸಲು ಬಳಸಬಹುದಾದ ಗುಪ್ತ ಹಣ, ವಸ್ತುಗಳು, ಮದ್ಯಗಳನ್ನು ವಶಪಡಿಸಿಕೊಳ್ಳಲು ಹರಸಾಹಸ ಮಾಡುತ್ತಾರೆ. ಆದಾಗ್ಯೂ ಗೆಲ್ಲಲು ಪ್ರತೀ ಅಭ್ಯರ್ಥಿಯೂ ಹತ್ತಾರು ಕೋಟಿಗಳನ್ನು ಖರ್ಚು ಮಾಡುವುದು ಒಂದು ಮುಕ್ತ–ಗುಪ್ತ ವಿಚಾರ. ಆದರೂ ನೂರಕ್ಕೆ ನೂರು ಅಭ್ಯರ್ಥಿಗಳು ಚುನಾವಣಾ ಆಯೋಗಕ್ಕೆ ಹಾಗೂ ಗೆದ್ದವರು ಲೋಕಸಭೆ ಹಾಗೂ ವಿಧಾನಸಭೆಗಳಿಗೆ ವರದಿ ಸಲ್ಲಿಸುವಾಗ ತಮ್ಮ ಖರ್ಚು ಕಾನೂನಿನ ಇತಿಮಿತಿ ಒಳಗೇ ಇತ್ತೆಂದು ಸುಳ್ಳು ಹೇಳುತ್ತಾರೆ. ಇವರುಗಳಲ್ಲಿ ಶೇಕಡ 50ರಷ್ಟು ಮಂದಿ ತಾವು ಇತಿಮಿತಿಯ ಅರ್ಧದಷ್ಟೂ ಹಣವನ್ನು ಖರ್ಚು ಮಾಡಿಲ್ಲವೆಂದು ಹೇಳುವ ಅವರ ಧೈರ್ಯವನ್ನು ಮೆಚ್ಚಲೇಬೇಕು!

ಅಭ್ಯರ್ಥಿಗಳು ಮಾಡುವ ವೆಚ್ಚವಲ್ಲದೆ ರಾಜಕೀಯ ಪಕ್ಷಗಳೂ ಚುನಾವಣೆಗಾಗಿ ದೊಡ್ಡ ಮೊತ್ತದ ವೆಚ್ಚ ಮಾಡುತ್ತಾರೆ. ಆದರೆ ಈ ಪಕ್ಷದ ವೆಚ್ಚದ ಮೇಲೆ ಯಾವ ಕಾನೂನಿನ ಮಿತಿಯೂ ಇಲ್ಲ ಹಾಗೂ ಅಭ್ಯರ್ಥಿಗಳು ಮಾಡುವ ವೆಚ್ಚದಲ್ಲಿ ಅವರ ಪಕ್ಷಗಳು ಮಾಡುವ ಖರ್ಚು ಸೇರ್ಪಡೆಯಾಗುವುದಿಲ್ಲ. ಇವೆಲ್ಲರಿಂದಾಗುವ ಹಣದ ಹುಚ್ಚು ಹೊಳೆ ಚುನಾವಣೆಗಳನ್ನು ಮುಕ್ತ ಹಾಗೂ ನ್ಯಾಯಯುತವನ್ನಾಗಿಸುವ ಪ್ರಯತ್ನವನ್ನು ಅದೃಶವಾಗಿಸುತ್ತದೆ. ಚುನಾವಣಾ ಸ್ಪರ್ಧೆಗಳಲ್ಲಿ ಅಭ್ಯರ್ಥಿ–ಅಭ್ಯರ್ಥಿಗಳ ಹಾಗೂ ರಾಜಕೀಯ ಪಕ್ಷಗಳ ನಡುವೆ ಸಮತೋಲನದ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯುತ್ತದೆ. ಹೆಚ್ಚು ಹಣ ಬಲದ ಪಕ್ಷವು ಚುನಾವಣೆಗಳ ಫಲವನ್ನು ಬಹುಪಾಲು ತನ್ನ ಬುಟ್ಟಿಗೆ ತುಂಬಿಕೊಳ್ಳುತ್ತದೆ.

ದೇಶದಲ್ಲಿ 1952ರಲ್ಲಿ ನಡೆದ ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ 17 ಕೋಟಿ ಮತದಾರರಿದ್ದರು. ಸರ್ಕಾರವು ಈ ಚುನಾವಣೆಗಾಗಿ ರೂ.17.8 ಕೋಟಿ ವೆಚ್ಚ ಮಾಡಿತ್ತು. ಹಿಂದಿನ, ಅಂದರೆ 2019 ರಲ್ಲಿ ನಡೆದ ದೇಶದ ಸಾರ್ವತ್ರಿಕ ಚುನಾವಣೆಯಲ್ಲಿ 90 ಕೋಟಿ ಮತದಾರರಿದ್ದರು. ಈ ಚುನಾವಣೆಯಲ್ಲಿ ಪಕ್ಷಗಳು ಮತ್ತು ಅಭ್ಯರ್ಥಿಗಳೂ ಮಾಡಿದ ಒಟ್ಟಾರೆ ವೆಚ್ಚ ಒಂದು ಗಂಭೀರವಾದ ಅಂದಾಜಿನ ಪ್ರಕಾರ, ರೂ. 60 ಸಾವಿರ ಕೋಟಿಗಳನ್ನು ದಾಟಿತ್ತು. ಈಗ ನಡೆಯುತ್ತಿರುವ ಲೋಕಸಭೆ–2024ರ ಚುನಾವಣೆಯಲ್ಲಿ ದೇಶಾದ್ಯಂತ 96.8 ಕೋಟಿಯಷ್ಟು ಮತದಾರರಿದ್ದಾರೆ. ಈ ಚುನಾವಣೆಯಲ್ಲಿ ಆಗುವ ಒಟ್ಟಾರೆ ವೆಚ್ಚವು 2019ರ ಚುನಾವಣೆಯ ರೂ. 60 ಸಾವಿರ ಕೋಟಿಗಳನ್ನು ಖಂಡಿತ ಮೀರುತ್ತದೆ.

ರಾಜಕೀಯ ಪಕ್ಷಗಳ ಹಣ ಬಲದ ವಿಚಾರ ಒಂದು ನಿರಂತರ ಗುಪ್ತ ವಿಚಾರವಾಗಿಯೇ ಬಂದಿದೆ. ಗುಪ್ತ ಮಾರ್ಗದಲ್ಲಿ ಖಾಸಗಿ ವ್ಯಕ್ತಿಗಳು ಹಾಗೂ ಕಂಪನಿಗಳು ಈ ಹಣವನ್ನು ನೀಡುತ್ತಿರುವುದೇ ಇದಕ್ಕೆ ಕಾರಣವಾಗಿದೆ. ಅತ್ಯಂತ ಸಾರ್ವಜನಿಕವಾದ ರಾಜಕೀಯ ಪಕ್ಷ ಹಾಗೂ ಚುನಾವಣಾ ವ್ಯವಹಾರಗಳ ವೆಚ್ಚಕ್ಕೆ ಹಣ ಖಾಸಗಿ ಕ್ಷೇತ್ರದಿಂದ ಹರಿದು ಬರುತ್ತಿರುವುದೇ ಇದಕ್ಕೆ ಕಾರಣ. ಇಂತಹ ಖಾಸಗೀ ಹಣ, ಅದು ಬಿಳಿಯದಾಗಲೀ, ಕಪ್ಪು ಹಣವಾಗಲೀ, ಮುಕ್ತವಾಗಲೀ ಅಥವಾ ಗುಪ್ತವಾಗಲೀ ನೋಟು, ಚೆಕ್ಕು, ಚುನಾವಣಾ ಬಾಂಡು ಯಾವ ರೂಪದಲ್ಲಾಗಲೀ ಸುಮ್ಮನೆ ಬರುವುದಿಲ್ಲ. ಕೊಡುವವರ ಮತ್ತು ಪಡೆಯುವವರ ನಡುವೆ ಕೊಟ್ಟು ಪಡೆಯುವ (**ಕ್ವಿಡ್ ಪ್ರೋ ಕ್ಯೂ**) ಗುಪ್ತ ಒಪ್ಪಂದ ಇದರ ಭಾಗವಾಗಿಯೇ ಇರುತ್ತದೆ. ಇದು ಪ್ರಜಾಪ್ರಭುತ್ವ ಹಾಗೂ ಸಾರ್ವಜನಿಕ ಹಿತಗಳು ದುರ್ಬಲಗೊಳ್ಳಲು ಕಾರಣವಾಗುತ್ತದೆ. ಈ ಕಾರಣದಿಂದ ಮೂಲತಃ ಹಾಗೂ ಚುನಾವಣಾ ಕಾರ್ಯಗಳಿಗೆ ಖಾಸಗಿ ಹಣ ಹರಿದು ಬರುವುದನ್ನು ನಿಲ್ಲಿಸಿ, ಸಾರ್ವಜನಿಕ ಅಂದರೆ ರಾಜ್ಯದ ಹಣ ನೀಡುವುದೊಂದೇ ಅರ್ಥಪೂರ್ಣ ಪರ್ಯಾಯವಾಗುತ್ತದೆ. ಇದು ಪ್ರಜಾಪ್ರಭುತ್ವದ ಬಲ ಮತ್ತು ಆರೋಗ್ಯಗಳನ್ನು ಹೆಚ್ಚಿಸಿ ಸಾರ್ವಜನಿಕ ಹಿತವನ್ನು ಅದರ ಸಾರ್ವಭೌಮ ಸ್ಥಾನದಲ್ಲಿ ಕೂರಿಸುತ್ತದೆ.

ರಾಜಕೀಯ ವೆಚ್ಚಕ್ಕೆ ರಾಜ್ಯದ ಬೊಕ್ಕಸವೇ ಹೊರೆ ಹೊರುವುದು ಒಂದು ಪ್ರಜಾಪ್ರಭುತ್ವೀಯ ಪರ್ಯಾಯವಾಗುತ್ತದೆ. ರಾಜಕೀಯ ಪಕ್ಷಗಳ ಹಾಗೂ ಚುನಾವಣಾ ಖರ್ಚನ್ನು ಭಾಗಶಃವಾಗಿಯಾದರೂ ರಾಜ್ಯದ ಬೊಕ್ಕಸದಿಂದ ಭರಿಸುವುದು 20ನೇ ಶತಮಾನದಿಂದ ಕಂಡು ಬರುತ್ತಿದೆ. ಇದರ ಬಗೆಗಿನ ಹೆಚ್ಚು ವಿವರಗಳು ಹಾಗೂ ಪರ–ವಿರೋಧ ವಾದ–ವಿವಾದಗಳೂ **ಫಂಡಿಂಗ್ ಆಫ್ ಪೊಲಿಟಿಕಲ್ ಪಾರ್ಟಿಸ್ ಅಂಡ್ ಎಲೆಕ್ಷನ್, ಕ್ಯಾಂಪೈನ್ಸ್ : ಎ ಹ್ಯಾಂಡ್ ಬುಕ್ 2014** ಪುಸ್ತಕದಲ್ಲಿ ದೊರೆಯುತ್ತದೆ.

ಭಾರತದಲ್ಲಿ ಈ ಖರ್ಚನ್ನು ರಾಜ್ಯ ಭರಿಸುವುದನ್ನು **ಇಂದ್ರಜಿತ್ ಗುಪ್ತಾ ಸಮಿತಿ, ತನ್ನ ವರದಿ 1998ರಲ್ಲಿ** ಮೊದಲ ಬಾರಿಗೆ ಅನುಮೋದಿಸಿತು. ಆದರೆ, ಇದು ಕೆಳಕಂಡ ಎರಡು ಷರತ್ತುಗಳಿಗೆ ಬದ್ಧವಾಗಿರಬೇಕೆಂದು ಶಿಫಾರಸ್ಸು ಮಾಡಿತು;

(i) ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಹಾಗೂ ಅದರ ಅಭ್ಯರ್ಥಿಗಳಿಗೆ ಮಾತ್ರ ಈ ಬೆಂಬಲ ದೊರೆಯಬೇಕು, ಸ್ವತಂತ್ರ ಅಭ್ಯರ್ಥಿಗಳಿಗಲ್ಲ

(ii) ಹಣದ ಬದಲು, ಎಲ್ಲಾ ಸ್ಪರ್ಧಿಸುವ ಪಕ್ಷಗಳಿಗೂ, ಅವರ ಅಭ್ಯರ್ಥಿಗಳಿಗೂ ಸಮನಾಗಿ ದೊರೆಯುವ ನಿರ್ದಿಷ್ಟ ಪ್ರಚಾರ ಅನುಕೂಲಗಳ ರೂಪದಲ್ಲಿರಬೇಕು.

ಎರಡನೆಯದಾಗಿ, ದಿ ಲಾ ಕಮೀಷನ್ ಆಫ್ ಇಂಡಿಯಾವು ತನ್ನ 1994ರ ವರದಿಯಲ್ಲಿ, ಈ ಉದ್ದೇಶಕ್ಕಾಗಿ ರಾಜ್ಯವು ಪೂರ್ಣ ಪ್ರಮಾಣದ ಹಣಕಾಸು ಬೆಂಬಲ ಕೊಡಬಹುದು ಎಂದು ಶಿಫಾರಸ್ಸು ಮಾಡಿತು. ಆದರೆ, ಹೀಗೆ ಬೆಂಬಲ ಪಡೆದವರು ಇನ್ಯಾವ ಮೂಲಗಳಿಂದಲೂ ಹಣದ ಬೆಂಬಲ ಪಡೆಯುವುದನ್ನು ನಿಷೇಧಿಸಬೇಕು ಎನ್ನುವ ಷರತ್ತನ್ನು ವಿಧಿಸಿತು.

ಇದರ ಜೊತೆಗೆ (i) ರಾಜಕೀಯ ಪಕ್ಷಗಳು ಆಂತರಿಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರಬೇಕು ಮತ್ತು (ii) ತಮ್ಮ ಆದಾಯ ಮತ್ತು ವೆಚ್ಚದ ಲೆಕ್ಕ ಪತ್ರಗಳನ್ನು ತಯಾರಿಸಿಕೊಂಡು ಆಡಿಟ್‌ಗೆ, ಅಂದರೆ ಹಣಕಾಸು ತಜ್ಞರ ಪರಿಶೀಲನೆಗೆ ಒಳಪಡಿಸಬೇಕೆಂಬ ಷರತ್ತುಗಳನ್ನು ಒತ್ತಿ ಹೇಳಿತ್ತು.

ಮೂರನೆಯದಾಗಿ, ರಾಷ್ಟ್ರೀಯ ಸಂವಿಧಾನದ ಕಾರ್ಯ ಪುನರಾವಲೋಕನಾ ಆಯೋಗ (ದಿ ನ್ಯಾಷನಲ್ ಕಮಿಷನ್ ಟು ರಿವ್ಯೂ ದಿ ವರ್ಕಿಂಗ್ ಆಫ್ ದಿ ಕಾನ್ಸಿಟಿಟ್ಯೂಷನ್ 2001) ಕೂಡ ಇಂತಹುದೇ ಶಿಫಾರಸ್ಸುಗಳನ್ನು ಮಾಡಿತ್ತು.

ಪ್ರಸ್ತುತ ಕಾನೂನು ಸ್ಥಿತಿಯಲ್ಲಿ, ಪ್ರಜಾಪ್ರತಿನಿಧಿ ಕಾಯಿದೆ 1951 ಹಾಗೂ ಚುನಾವಣಾ ಆಯೋಗಗಳಿಗೆ ರಾಜಕೀಯ ಪಕ್ಷಗಳನ್ನು ಸಾಕಷ್ಟು ಹತೋಟಿಯಲ್ಲಿಡುವ ಅಧಿಕಾರಗಳಿಲ್ಲ. ಚುನಾವಣಾ ಸಮಯದಲ್ಲಿ ಜಾರಿ ಇರುವ ಮಾದರಿ ಆಚಾರ ಸಂಹಿತೆಗೆ (ಮಾಡೆಲ್ ಕೋಡ್ ಆಫ್ ಕಂಡಕ್ಟ್‌ಗೆ) ಕಾನೂನಿನ ಬೆಂಬಲವಿಲ್ಲ. ಈ ಸಂಹಿತೆಯ ಉಲ್ಲಂಘನೆಯಾಗಿ ದೂರುಗಳು ಬಂದಾಗ, ಚುನಾವಣಾ ಆಯೋಗಕ್ಕೆ ಈ ಅಪಾದಿತರಿಗೆ ಎಚ್ಚರಿಕೆ ನೀಡುವ, ನಿರ್ದೇಶನ ನೀಡುವ ಅಧಿಕಾರ ಮಾತ್ರ ಇದೆ. ರಾಜಕೀಯ ಪಕ್ಷಗಳಿಗೆ ತಮ್ಮ ಮಾನ್ಯತೆ ಕಳೆದುಕೊಳ್ಳುವ ಭಯವೇ ಇಲ್ಲ

ಆಧುನಿಕ ಪ್ರಜಾಪ್ರತಿನಿಧಿ ಪ್ರಭುತ್ವ ನಡೆಸಲು ರಾಜಕೀಯ ಪಕ್ಷಗಳು ಅನಿವಾರ್ಯ ಅಂಗಗಳಾಗಿವೆ. ಕೆಲವು ಆಧುನಿಕ ಸರ್ಕಾರದ ವಿಷಯ ತಜ್ಞರು 'ರಾಜಕೀಯ ಪಕ್ಷವೇ (ಇಂದಿನ) ರಾಜ' ಎನ್ನುತ್ತಾರೆ. ಬೆಟ್ಟದ ಗಾತ್ರದ ಗುಪ್ತ ಹಣ ಬಲ, ಸರ್ವವ್ಯಾಪಿಯಾದ ರಾಜಕೀಯ ಪ್ರಭಾವ ಮತ್ತು ಶಕ್ತಿ ಹಾಗೂ ಆಳುವ ಪಕ್ಷಗಳ ವಿಷಯದಲ್ಲಿ, ಸಾರ್ವಭೌಮತ್ವ ಹೊಂದಿರುವ ಸರ್ಕಾರಿ ಸ್ಥಾನಗಳು, ಸಂಸ್ಥೆಗಳು, ಅಧಿಕಾರ ಹಾಗೂ ಬೊಕ್ಕಸದ ಬಲಗಳಿದ್ದು, ಪಕ್ಷಗಳು ಯಾರ ನಿಯಂತ್ರಣದಲ್ಲೂ ಇಲ್ಲದ ಕಾನೂನು ಬಾಹ್ಯ ಸಂಸ್ಥೆಗಳಾಗಿವೆ. ಪಕ್ಷಗಳ 'ಹೈಕಮಾಂಡ್'ಗಳು, ಬಹುಪಾಲು ವಂಶಪಾರಂಪರ್ಯ ನಾಯಕತ್ವ ಹಾಗೂ ಅಪ್ರಜಾಪ್ರಭುತ್ವ ಆಂತರಿಕ ರಚನೆಗಳನ್ನು ಹೊಂದಿದ್ದು, ತಮ್ಮ ಆಜ್ಞೆ ಮತ್ತು ವ್ಹಿಪ್‌ಗಳ ಮೂಲಕ ಎಲ್ಲರನ್ನೂ ಸಂಪೂರ್ಣ ನಿಯಂತ್ರಣದಲ್ಲಿಟ್ಟುಕೊಂಡಿವೆ.

ಈ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷ ಮತ್ತು ಚುನಾವಣಾ ಪ್ರಚಾರಗಳಿಗಾಗಿ ರಾಜ್ಯದ ಹಣದ ಬೆಂಬಲ ದೊರಕಿಸಿಕೊಡುವ ಸಲುವಾಗಿ **ಕೆಳಕಂಡ ನಾಲ್ಕು ವ್ಯವಸ್ಥೆಗಳ ಅನಿವಾರ್ಯವಿದೆ;**

(i) ರಾಷ್ಟ್ರೀಯ ರಾಜಕೀಯ ನಿಧಿಯ ಸ್ಥಾಪನೆ

(ii) ರಾಷ್ಟ್ರೀಯ ರಾಜಕೀಯ ಪಕ್ಷ ಹಾಗೂ ಚುನಾವಣಾ ಆಯೋಗದ ಸ್ಥಾಪನೆ

(iii) ಚುನಾವಣಾ ಪ್ರಚಾರಕ್ಕಾಗಿ ರಾಜಕೀಯ ಪಕ್ಷಗಳಿಗೆಲ್ಲಾ ಸಮನಾಗಿ ದೊರೆಯುವ ಹಣಕಾಸೇತರ ಅನುಕೂಲಗಳು ಹಾಗೂ ಅದಕ್ಕೆ ಅಗತ್ಯವಾದ ಸರ್ಕಾರಿ ಹಣಕಾಸನ್ನು ಕಾನೂನಿನ ಮೂಲಕ ಸ್ಥಾಪಿಸುವುದು.

(iv) ಬಲವಂತ ಮತದಾನ ಜಾರಿಗೊಳಿಸಿ ಪವಿತ್ರ ಮತದಾನ ಪೂರ್ಣವಾಗುವಂತೆ ಮಾಡುವುದು.

ಮೊದಲನೆಯದಾಗಿ ಸಂವಿಧಾನದ ಮೂಲಕ ಒಂದು ರಾಷ್ಟ್ರೀಯ ರಾಜಕೀಯ ನಿಧಿಯನ್ನು ಸ್ಥಾಪಿಸುವುದು. ಈ ನಿಧಿಗೆ ಹಣವನ್ನು ಈ ಕೆಳಗಿನ ಮೂರು ಮಾರ್ಗದಲ್ಲಿ ಒದಗಿಸಬಹುದು.

(i) ಒಂದು ಪ್ರಜಾಪ್ರಭುತ್ವ ತೆರಿಗೆ ಅಥವಾ ಸರ್‌ಚಾರ್ಜ್ ಅನ್ನು ವಾರ್ಷಿಕವಾಗಿ ಸಾರ್ವಜನಿಕರಿಂದ ಸಂಗ್ರಹಿಸುವುದು.

(ii) ಕಾರ್ಪೋರೇಟ್ ಸಂಸ್ಥೆಗಳ ಸಾಮಾಜಿಕ ಜವಾಬ್ದಾರಿ ನಿಧಿಯಿಂದ.

(iii) ಯಾವುದೇ ಸಂಸ್ಥೆ ಅಥವಾ ವ್ಯಕ್ತಿ ಸ್ವ ಇಚ್ಛೆಯಿಂದ ಮುಕ್ತವಾಗಿ ನೀಡುವ ದೇಣಿಗೆ.

ಎರಡನೆಯದಾಗಿ ಈ ಮೇಲಿನ ನಿಧಿಯನ್ನು ಪರಿಣಾಮಕಾರಿ ಹಾಗೂ ನಿಷ್ಪಕ್ಷಪಾತವಾಗಿ ನಿರ್ವಹಿಸಲು ಒಂದು ಸ್ವಾಯತ್ತವಾದ ಸಂವಿಧಾನಿಕ ರಾಷ್ಟ್ರೀಯ ರಾಜಕೀಯ ಪಕ್ಷ ಹಾಗೂ ಚುನಾವಣಾ ಆಯೋಗವನ್ನು ಸ್ಥಾಪಿಸುವುದು. ಸಾಕಷ್ಟು ಬಲವುಳ್ಳ ಇಂತಹ ಸಂಸ್ಥೆಯಿಂದ ಮಾತ್ರ ಈಗ ಕಾನೂನು ಬಾಹ್ಯವಾಗಿರುವ ರಾಜಕೀಯ ಪಕ್ಷಗಳನ್ನು ನಿಯಂತ್ರಿಸಿ, ಅವುಗಳ ನಡುವಿನ ಚುನಾವಣಾ ಸ್ಪರ್ಧೆಯನ್ನು ಒಂದು ಸಮ ಸ್ಪರ್ಧಾತ್ಮಕ ಕ್ಷೇತ್ರವನ್ನಾಗಿಸುವುದು ಸಾಧ್ಯವಾಗುತ್ತದೆ.

ಮೂರನೆಯದಾಗಿ, ಚುನಾವಣಾ ಪ್ರಚಾರಕ್ಕಾಗಿ ರಾಜಕೀಯ ಪಕ್ಷ ಮತ್ತು ಅವರ ಅಭ್ಯರ್ಥಿಗಳಿಗೆ ಸಮಾನವಾದ ಹಣಕಾಸೇತರ ಅನುಕೂಲಗಳನ್ನು ಒದಗಿಸಲು ಹಾಗೂ ಇದಕ್ಕೆ ಅಗತ್ಯವಾದ ಹಣಕಾಸು ಒದಗಿಸಲು ಸೂಕ್ತವಾದ ಕಾನೂನುಗಳನ್ನು ಸ್ಥಾಪಿಸುವುದು ಅಗತ್ಯವಾಗುತ್ತದೆ.

ಇಂತಹ ಅನುಕೂಲಗಳು ಕೆಳಕಂಡಂತಿರಬಹುದು;

(i) ಪ್ರತಿ ಚುನಾವಣಾ ಕ್ಷೇತ್ರಕ್ಕೊಂದು ಚುನಾವಣಾ ಪತ್ರಿಕೆ (ಪ್ರತಿದಿನ ಅಥವಾ ವಾರಕ್ಕೊಂದು) ಒದಗಿಸಿ, ಪಕ್ಷಗಳ ಹಾಗೂ ಅಭ್ಯರ್ಥಿಗಳ ಮುದ್ರಣ ರೂಪದ ಎಲ್ಲಾ ಪ್ರಚಾರಕ್ಕೂ ನಿಯಮಿತ ಹಾಗೂ ಸಮನಾದ ಅನುಕೂಲ ಒದಗಿಸುವುದು.

(ii) ಪ್ರಚಾರಕ್ಕಾಗಿ ಸ್ಪರ್ಧಿಗಳಿಗೆ ಸಾರ್ವಜನಿಕ ದೂರದರ್ಶನ (ಟಿವಿ) ಹಾಗೂ ರೇಡಿಯೋ ಮಾಧ್ಯಮಗಳಲ್ಲಿ ಸಮಾನ ಕಾಲಾವಕಾಶ ಒದಗಿಸುವುದು.

(iii) ಪ್ರತೀ ಚುನಾವಣಾ ಕ್ಷೇತ್ರದ ಪ್ರತಿ ಮೊಹಲ್ಲಾ ಅಥವಾ ವಾರ್ಡ್‌ಗಳಲ್ಲಿ ನಿಯತಕಾಲಿಕವಾಗಿ ಸಾರ್ವಜನಿಕ ಸಭೆಗಳನ್ನು ಏರ್ಪಡಿಸಿ ಎಲ್ಲಾ ಸ್ಪರ್ಧಿಗಳಿಗೆ ಒಂದೇ ವೇದಿಕೆಯಲ್ಲಿ ಜನರೆದುರು ನಾಗರಿಕ ಮಾದರಿ ಪ್ರಚಾರಕ್ಕೆ ಅನುಕೂಲ ಕಲ್ಪಿಸಿಕೊಡುವುದು.

(iv) ಇಂತಹ ಸಮಾನ ಅನುಕೂಲ ಒದಗಿಸುವ ಕೆಲಸವನ್ನು ಚುನಾವಣಾ ಕ್ಷೇತ್ರದ ನಿರ್ವಹಣಾಧಿಕಾರಿಗಳು, ಸಮಿತಿಗಳು, ಜಿಲ್ಲಾಡಳಿತ ಮೇಲಿನ ಆಯೋಗದ ಉಸ್ತುವಾರಿಯಲ್ಲಿ ನಿರ್ವಹಿಸುವುದು.

ನಾಲ್ಕನೆಯದಾಗಿ, ಪವಿತ್ರ ಮತದಾನ, ನೂರಕ್ಕೆ ನೂರು ಆಗುವತ್ತ, ಬಡವರಿಗೆ ಅನುಕೂಲಕಾರಿ ಭರವಸೆಗಳು ಮತ್ತು ವೋಟು ಮಾಡದ ಶ್ರೀಮಂತರಿಗೆ ತೆರಿಗೆ ಹೆಚ್ಚಿಸುವ, ದಂಡ ವಿಧಿಸುವ ಒಂದು ರೀತಿಯ ಬಲವಂತ ಮತದಾನ ವ್ಯವಸ್ಥೆಯನ್ನು ಜಾರಿಗೊಳಿಸುವುದು ಅವಶ್ಯವಿದೆ. ಮತದಾನ ಮಾಡಿದ ದಿನಗೂಲಿ ಕಾರ್ಮಿಕರಂತಹವರಿಗೆ ಒಂದು ತರಹದ ಮತದಾನ ವೇತನ ನೀಡಿ ಪ್ರೇರೇಪಿಸುವುದು ಹಾಗೂ ಮತದಾನ ಮಾಡದ ಶ್ರೀಮಂತರಿಗೆ ಆದಾಯ ತೆರಿಗೆ ಅಥವಾ ಇನ್ನಿತರ ತೆರಿಗೆ ಹೆಚ್ಚಿಸುವ ದಂಡದ ಬೆದರಿಕೆ ಹಾಕುವುದರಿಂದ ಮತದಾನವನ್ನು ಹೆಚ್ಚಿಸಬಹುದು.

ಮೇಲಿನ ನಾಲ್ಕು ಚುನಾವಣಾ ಸುಧಾರಣಾ ಕ್ರಮಗಳ ಮೂಲಕ ಚುನಾವಣೆಗಳನ್ನು ಹೆಚ್ಚು ದಕ್ಷ, ನ್ಯಾಯಯುತ, ನಿಷ್ಪಕ್ಷಪಾತ, ಮುಕ್ತ ಹಾಗೂ ಪರಿಣಾಮಕಾರಿಯನ್ನಾಗಿಸಬಹುದು. ಆದರೆ ಇವುಗಳು ಪರಿಣಾಮಕಾರಿಯಾಗಬೇಕಾದರೆ ಪಕ್ಷಗಳು ಮತ್ತು ಅಭ್ಯರ್ಥಿಗಳ ಖಾಸಗಿ ಪ್ರಚಾರ ಮತ್ತು ಖರ್ಚುಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಿಸುವ ಅಥವಾ ಅವಶ್ಯಕವಿದ್ದ ವಿಷಯಗಳಲ್ಲಿ ನಿಷೇಧಿಸುವ ಪ್ರಯತ್ನ ಮಾಡಬೇಕು. ಉಲ್ಲಂಘಿಸಿದವರಿಗೆ ರಾಜಕೀಯ ಬಹಿಷ್ಕಾರದ ಭಯವಿರಬೇಕು. ಆಗ ಚುನಾವಣಾ ವ್ಯವಸ್ಥೆಯು ಹೆಚ್ಚು ಆರೋಗ್ಯಕರ ಹಾಗೂ ಸಮತೋಲನ ಹೊಂದಿದ ಸ್ಪರ್ಧೆಯಾಗುತ್ತದೆ.

ಸಮಾರೋಪ

ನಾವು ಭಾರತೀಯರು, ನಮ್ಮ ಪ್ರಜಾಪ್ರಭುತ್ವದ ಬಗ್ಗೆ ಹೆಮ್ಮೆಪಡಬಹುದು. ನಮ್ಮದು ವಿಶ್ವದಲ್ಲೇ ಅತ್ಯಂತ ಬೃಹತ್ ಪ್ರಜಾಪ್ರಭುತ್ವ, ನಮ್ಮ ಚುನಾವಣೆಗಳಲ್ಲಿ ಎಷ್ಟೇ ನ್ಯೂನತೆಗಳಿದ್ದರೂ ನಮ್ಮ ಚುನಾವಣಾ ವ್ಯವಸ್ಥೆಯಲ್ಲಿ ಕೋಟಿ ಕೋಟಿ ಜನರು ಬಹು ಉತ್ಸಾಹದಿಂದ ಭಾಗವಹಿಸುವುದು ಜಗತ್ತಿನ ಆಶ್ಚರ್ಯಕ್ಕೆ ಮತ್ತು ಮೆಚ್ಚುಗೆಗೆ ಪಾತ್ರವಾಗಿದೆ. ಮಹಾತ್ಮ ಗಾಂಧಿಯವರ ಮೊಮ್ಮಗ ಗೋಪಾಲ ಕೃಷ್ಣ ಗಾಂಧಿಯವರು ಒಮ್ಮೆ ಹೇಳಿದಂತೆ **'ಭಾರತವು ತಾಜ್, ಮಹಾತ್ಮ ಗಾಂಧಿ ಮತ್ತು ಭಾರತೀಯ ಚುನಾವಣೆ ಎಂಬ ಮೂರು ಜಗದಾಶ್ಚರ್ಯಗಳಿಗೆ ಹೆಸರಾಗಿದೆ'.** ಬೃಹತ್ ಗಾತ್ರದ ಬಡತನ, ಅನಕ್ಷರತೆ ಮತ್ತು ವೈವಿಧ್ಯತೆಗಳನ್ನು ಹೊಂದಿದ ಭಾರತದಲ್ಲಿ ವಯಸ್ಕರ ಮತದಾನ ಪದ್ಧತಿಯ ಮತದಾನ 75 ವರ್ಷ ಮೀರಿಯೂ ಗಮನಾರ್ಹ ಸಫಲತೆಯೊಡನೆ ಮುಂದುವರೆಯುತ್ತಿರುವುದು ನಮ್ಮ ಹೆಮ್ಮೆಯಲ್ಲವೇ!?

ಪ್ರಜಾಪ್ರಭುತ್ವ ಒಂದು ಬಹಳ ಕ್ಲಿಷ್ಟ, ನಾಗರಿಕ ಹಾಗೂ ನ್ಯಾಯಯುತ ವ್ಯವಸ್ಥೆ. ಇದು ಚರಿತ್ರೆಯಲ್ಲಿ ನಿಧಾನವಾಗಿ ಸುಧಾರಿಸುತ್ತಾ ಮತ್ತು ಉತ್ತಮವಾಗುತ್ತಾ ಬಂದಿದೆ. ಇದನ್ನು ಇನ್ನೂ ಉತ್ತಮಪಡಿಸುವ ಕಾಲ ಈಗ ಬಂದಿದೆ. ಈ ಲೇಖನದಲ್ಲಿ ಸೂಚಿಸಿರುವ ಚುನಾವಣಾ ಸುಧಾರಣೆಗಳು ಈ ನಿಟ್ಟಿನಲ್ಲಿ ದೇಶದ ಜನರ ಗಮನ ಸೆಳೆದು ಪ್ರಜಾಪ್ರಭುತ್ವವನ್ನು, ಕಳ್ಳರ ಆಳ್ವಿಕೆ (Cryptocracy), ಲೂಟಿಕೋರರ ಆಳ್ವಿಕೆ (lootocracy) ಅಥವಾ ಕೇವಲ ಉಳ್ಳವರ ಆಳ್ವಿಕೆ (Plutocracy) ಯಾಗುವುದನ್ನು ತಪ್ಪಿಸುವ ಪ್ರಯತ್ನವಾಗಿದೆ. **(ಮುಗಿಯಿತು)**

ಚಾಮುಂಡಿಬೆಟ್ಟದ ರಸ್ತೆಬದಿ ಅಂಗಡಿ ಮುಂಗಟ್ಟು ತೆರವು ಮಾಡದಂತೆ ಸಚಿವರಿಗೆ ಮನವಿ

ಮೈಸೂರು, ಮೇ 12– ಚಾಮುಂಡಿ ಬೆಟ್ಟದಲ್ಲಿ ರಸ್ತೆಬದಿ ಅಂಗಡಿ ಮುಂಗಟ್ಟುಗಳನ್ನು ತೆರವು ಮಾಡಲು ಜಿಲ್ಲಾಧಿಕಾರಿಗಳು ಆದೇಶ ಮಾಡಿದ್ದ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟದ ಅಂಗಡಿ ಮಾಲೀಕರು ರಸ್ತೆಬದಿ ವ್ಯಾಪಾರಸ್ಥರು ಮೈಸೂರಿನ ವಿಜಯನಗರದ ನಿವಾಸದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರನ್ನು ಭೇಟಿ ಮಾಡಿ ಆದೇಶವನ್ನು ಹಿಂಪಡೆದು ಮೊದಲಿನಂತೆ ವ್ಯಾಪಾರಕ್ಕೆ ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿದರು.



ಇದಕ್ಕೆ ಸ್ಪಂದಿಸಿದ ಸಚಿವ ಹೆಚ್.ಸಿ. ಮಹದೇವಪ್ಪ ತಕ್ಷಣವೇ ಜಿಲ್ಲಾಧಿಕಾರಿಗಳಿಗೆ ಕರೆ ಮಾಡಿ ವ್ಯಾಪಾರಸ್ಥರಿಗೆ ಅನುಕೂಲವಾಗುವಂತೆ ಪ್ರತ್ಯೇಕ ಜಾಗ ನಿಗದಿಪಡಿಸುವವರೆಗೂ ಇಲ್ಲಿಯೇ ಮುಂದುವರೆಯಲು ಅವಕಾಶ ಕಲ್ಪಿಸಲು ಸೂಚಿಸಿದರು. ಇದೇ ವೇಳೆ ಕೆಪಿಸಿಸಿ ಸದಸ್ಯರಾದ ನಜರಬಾದ್ ನಟರಾಜ್, ವರುಣಾ ಮಹದೇವ್, ಜೀವನ್ ಆಲನಹಳ್ಳಿ, ಮಂಜುಳಾ ಮಂಜುನಾಥ್ ಸೇರಿದಂತೆ ಚಾಮುಂಡಿಬೆಟ್ಟದ ಅಂಗಡಿ ಮಾಲೀಕರು, ವ್ಯಾಪಾರಸ್ಥರು ಬಳಗದವರು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಶ್ರೀ ಶಂಕರಾಚಾರ್ಯರ ಧರ್ಮ, ನಿಷ್ಠೆ, ಭಕ್ತಿ ಅನನ್ಯವಾದುದು

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್



ಮೈಸೂರು, ಮೇ 12– ಶ್ರೀ ಶಂಕರಾಚಾರ್ಯರ ಧರ್ಮನಿಷ್ಠೆ, ಶ್ರದ್ಧೆ, ಭಕ್ತಿ, ಛಲ ಅನನ್ಯವಾದುದು. ಅವುಗಳನ್ನು ವಿದ್ಯಾರ್ಥಿ ದೆಸೆಯಲ್ಲಿಯೇ ಜೀವನದಲ್ಲಿ ಅಳವಡಿಸಿಕೊಳ್ಳಲು ಮಕ್ಕಳಿಗೆ ಮಾರ್ಗದರ್ಶನ ಮಾಡಬೇಕಾದುದು ಪಾಲಕರ ಆದ್ಯ ಕರ್ತವ್ಯವಾಗಿದೆ ಎಂದು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಕರೆ ನೀಡಿದರು.

ನಗರದ ಕನಕಗಿರಿಯಲ್ಲಿರುವ ಭಾರತಿ ವೃದ್ಧಾಶ್ರಮದಲ್ಲಿ ದಿನೇಶ್ ಗುಂಡೂರಾವ್ ಅಭಿಮಾನಿ ಬಳಗದಿಂದ ಆದಿ ಜಗದ್ಗುರು ಶ್ರೀ ಶಂಕರಾಚಾರ್ಯರು ಹಾಗೂ ಶ್ರೀ ರಾಮಾನುಜಾಚಾರ್ಯರ ಜಯಂತಿ ಅಂಗವಾಗಿ ಆಚಾರ್ಯತ್ರಯರ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಆನಂತರ ವೃದ್ಧಾಶ್ರಮದಲ್ಲಿರುವ ವೃದ್ಧರಿಗೆ ಹಣ್ಣು-ಹಂಪಲು ವಿತರಿಸಿ ಮಾತನಾಡಿದ ಅವರು, ಸನಾತನ ಧರ್ಮಕ್ಕೆ ಮೂಲಶಕ್ತಿ ನೀಡಿದವರು ಶಂಕರಾಚಾರ್ಯರು. ಅವರು ಪ್ರತಿಪಾದಿಸಿದ ಅದ್ವೈತ ಸಿದ್ಧಾಂತವನ್ನ ಎಲ್ಲೆಡೆ ವ್ಯಾಪಿಸಿದರು. ವ್ಯಾಪಕ ಶಕ್ತಿಯ ಶಂಕರ ತತ್ವಗಳ ಪರಿಪಾಲನೆ ಇಂದಿಗೆ ಅಗತ್ಯವಾಗಿದೆ ಎಂದರು.

ಶಂಕರ ಭಗವತ್ಪಾದರು ಅದ್ವೈತ ಸಿದ್ಧಾಂತ ಪ್ರತಿಪಾದಿಸಿ ಜಗದ್ಗುರು ಎನಿಸಿಕೊಂಡವರು. ಧರ್ಮದ ತಿರುಳೇ ಅಧ್ಯಾತ್ಮವಾಗಿದೆ ಎಂದು ತಿಳಿಸಿದ ಶಂಕರರನ್ನು ಕೃತಜ್ಞತೆ ದೃಷ್ಟಿಯಲ್ಲಿ ನೋಡಬೇಕು. ಜತೆಗೆ ಅವರ ಸಂದೇಶ ಅರಿವಿಗೆ ತಂದುಕೊಳ್ಳಲು ಸ್ಮರಣೆ ಮಾಡಬೇಕು. ಶಂಕರರ ಭಾಷ್ಯವು ಸಾವಿರಾರು ವರ್ಷಗಳ ಇತಿಹಾಸ ಹೊಂದಿದ್ದು, ಭವಿಷ್ಯದ ಸಾವಿರಾರು ವರ್ಷಗಳ ಕಾಲವೂ ಇರುವಷ್ಟು ಸತ್ವಯುತವಾಗಿವೆ ಎಂದರು

ನಂತರ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಶ್ರೀ ರಾಮಾನುಜಾಚಾರ್ಯರ ಕೊಡುಗೆ ಸಮಾಜಕ್ಕೆ ಅಪಾರವಾದುದು. 130 ವರ್ಷಗಳ ಕಾಲ ಬದುಕಿದ್ದ ರಾಮಾನುಜರು ಮೇಲುಕೋಟೆಗೆ ಭೇಟಿ ನೀಡಿ ಹಿಂದೂ ಧರ್ಮ ಮಹತ್ವವನ್ನು ಸಾರಿದರು ತಣ್ಣೂರು ಕೆರೆ ನಿರ್ಮಿಸಿದರು, ಸಮಾಜದ ಎಲ್ಲಾ ಜಾತಿಯವರಿಗೂ ಸಂಸ್ಕೃತಿ ಸಂಸ್ಕಾರಗಳನ್ನ ಪರಿಚಯಿಸಿ ಕೊಟ್ಟರು ಸಂಸ್ಕೃತಿಯಿಂದ ಆರೋಗ್ಯ ಶಿಕ್ಷಣ ವಿಜ್ಞಾನದ ಉಪಯೋಗದ ಮಹತ್ವವನ್ನು ತಿಳಿಸಿಕೊಟ್ಟರು.

ಇದೇ ಸಂದರ್ಭದಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ನಗರಪಾಲಿಕೆ ಮಾಜಿ ಸದಸ್ಯೆ ಸೌಭಾಗ್ಯಮೂರ್ತಿ, ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ದಿನೇಶ್ ಗುಂಡೂರಾವ್ ಅಭಿಮಾನಿ ಬಳಗದ ಅಧ್ಯಕ್ಷ ವಿನಯ್ ಕಣಗಾಲ್, ರವಿತೇಜ, ಕಡಕೊಳ ಜಗದೀಶ್, ರಾಕೇಶ್, ದುರ್ಗಾಪ್ರಸಾದ್, ಪವನ್, ಗುರು, ಜ್ಯೋತಿ ಹಾಗೂ ವೃದ್ಧಾಶ್ರಮದ ವೃದ್ಧರು ಹಾಜರಿದ್ದರು



ಶ್ರೀ ರಾಮಾನುಜ ಅಭ್ಯುದಯ ಸಹಕಾರ ಸಂಘದಲ್ಲಿ ರಾಮಾನುಜಾಚಾರ್ಯರ ಜಯಂತಿ ಆಚರಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಆಚಾರ್, ಉಪಾಧ್ಯಕ್ಷ ಪುಟ್ಟಸ್ವಾಮಿ, ನಿರ್ದೇಶಕರಾದ ರಾಜಗೋಪಾಲ್, ಯೋಗಾನರಸಿಂಹ (ಮುರುಳಿ), ಕೇಶವ, ಟಿ.ಎಸ್ ಅರುಣ್, ಶಾಂತರಾಮ್, ಕಾರ್ಯದರ್ಶಿ ಮಹಾಲಕ್ಷ್ಮಿ ಉಪಸ್ಥಿತರಿದ್ದರು.

ಎಂ.ಮಹದೇವಯ್ಯ ನಿಧನ



ಮೈಸೂರು, ಮೇ 12– ಮೈಸೂರಿನ ಲಕ್ಷ್ಮೀಕಾಂತನಗರ ನಿವಾಸಿ, ನಿವೃತ್ತ ನರ್ಸಿಂಗ್ ಸೂಪರಿಂಟೆಂಡೆಂಟ್ ಎಂ.ಮಹದೇವಯ್ಯ ಅವರು ಭಾನುವಾರ ನಿಧನರಾದರು.

ಅವರಿಗೆ 82 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಸೋಮವಾರ) ಬೆಳಗ್ಗೆ 11 ಗಂಟೆಗೆ ಹೆಬ್ಬಾಳ್‌ನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಿದ್ದಮ್ಮ



ಮೈಸೂರು, ಮೇ 12–ಮೈಸೂರಿನ ಪಡುವಾರಹಳ್ಳಿ, 6ನೇ ಕ್ರಾಸ್ ನಿವಾಸಿ ಶ್ರೀಮತಿ ಸಿದ್ದಮ್ಮ(72) ಅವರು ಭಾನುವಾರ ನಿಧನರಾದರು. ಇವರು ಪತಿ, ಪ್ರಾಧ್ಯಾಪಕಿ ಶ್ರೀಮತಿ ಎಂ. ಮಂಜುಳ ಸೇರಿದಂತೆ ಇಬ್ಬರು ಪುತ್ರಿಯರು, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ ಸೇರಿದಂತೆ ಮೂವರು ಪುತ್ರರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗೋಕುಲಂ ರುದ್ರಭೂಮಿಯಲ್ಲಿ ಭಾನುವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಸಿದ್ದಮ್ಮ ನಿಧನಕ್ಕೆ ಮಾಜಿ ಶಾಸಕ ಎಲ್.ನಾಗೇಂದ್ರ, ಬಿಜೆಪಿ ಮುಖಂಡ ಕವೀಶ್ ಗೌಡ, ಜಿಪಂ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಎಲ್.ಚೌಡಪ್ಪ, ಮೈಮುಲ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ನಗರಪಾಲಿಕೆ ಮಾಜಿ ಸದಸ್ಯರಾದ ಎಸ್‌ಬಿಎಂ ಮಂಜು, ಚಿಕ್ಕವೆಂಕಟು, ಉಷಾ ನಾರಾಯಣ, ಉಮೇಶ್, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷೆ ಪಿ.ಸವಿತಾ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

ಜನಾರ್ಧನ



ಮೈಸೂರು, ಮೇ 12– ಮೈಸೂರಿನ ವಿವೇಕಾನಂದನಗರ ನಿವಾಸಿ ಜನಾರ್ಧನ(77) ಅವರು ಭಾನುವಾರ ನಿಧನರಾದರು.

ಇವರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಸೋಮವಾರ ಮಧ್ಯಾಹ್ನ 12ಕ್ಕೆ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಲಕ್ಷ್ಮೀದೇವಮ್ಮ



ಮೈಸೂರು, ಮೇ 12– ಮೈಸೂರಿನ ಸರಸ್ವತಿಪುರಂ ನಿವಾಸಿ, ಲೇಟ್ ನಾರಾಯಣ ಸ್ವಾಮಿ ಧರ್ಮಪತ್ನಿ ಶ್ರೀಮತಿ ಲಕ್ಷ್ಮೀದೇವಮ್ಮ(85) ಅವರು ಭಾನುವಾರ ನಿಧನರಾದರು.

ಇವರು ಪುತ್ರಿ ಆಶಾ, ಪುತ್ರ ಶ್ರೀನಿವಾಸ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ಸೋಮವಾರ ಬೆಳಗ್ಗೆ 10ಕ್ಕೆ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

LENIN CONVENT-SRIRANGAPATNA
WANTED TEACHERS
Freshers Can apply
Sub:- ENGLISH
(With fluent English) - 1
Mathematics and science - 1
Hindi - 1 Social Science-1
Kannada-1
9844854461
6362000950
Immediately Appointment

HOME APPLIANCES SERVICE
ಫ್ರಿಡ್ಜ್, ವಾಶಿಂಗ್‌ಮೇಶೀನ್, ಮೈಕ್ರೋ ವೋವೆನ್, ಎಲ್‌ಸಿಡಿ, ಸೋಲಾರ್, ಯುಪಿಎಸ್, ಗೀಸರ್, ಸೇಲ್ಸ್ ಅಂಡ್ ಸರ್ವೀಸ್, ನಿಮ್ಮ ಮನೆಯ ಹತ್ತಿರ ದೊರೆಯುತ್ತದೆ.
Contact: Srinivas
9379699229

WANTED
Radiographer, Duty Doctor
Typist - Medical, Accountant
OT Technician,
OT Scrub Staff, Receptionist
Electrician / Maintenance
Bhanavi Hospital
9972982665



ಸ್ಕೂಲ್, ಕಾಲೇಜ್ ಯೂನಿಫಾರಂ
ಬ್ಲೇಜರ್ ರೂ.1300
ಲ್ಯಾಬ್ ಏಪ್ರಾನ್ ರೂ. 300
ಭಾವಸಾರ್ ಶ್ರೀಗಣೇಶ್
ಅಗ್ರಹಾರ, ಬಸವೇಶ್ವರ ರಸ್ತೆ 5ನೇ ಕ್ರಾಸ್, ಮೈಸೂರು

ಶ್ರೀ ಗೌರಿಶಂಕರ ಟ್ರಾವೆಲ್ಸ್
5-6-2024 (11 ದಿನ): ಅಯೋಧ್ಯೆ, ನೇಪಾಳ್, ಕಠ್ಮಂಡು, ಪೋಕ್ರ, ಮುಕ್ತಿನಾಥ್, ಲುಂಬಿನಿ, ಮನೋಕಾಮನ, ಕಾಶಿ, ಇತ್ಯಾದಿ.
24-7-2024 (4 ದಿನ): ಭೀಮಾ ಶಂಕರ, ಶಿರಡಿ, ಘೃಷ್ಣೇಶ್ವರ, ಎಲ್ಲೋರ, ತ್ರ್ಯಂಬಕೇಶ್ವರ ಇತ್ಯಾದಿ.
21-8-24 (3 ದಿನ): ಇಂದೋರ್, ಉಜ್ಜಯಿನಿ, ಓಂಕಾರೇಶ್ವರ
(ವಿಮಾನ, ಬಸ್, ಊಟ, ರೂಂ)
Mob: 9620002114

ಮನೆ ಮಾರಾಟಕ್ಕಿದೆ ಸೈಟುಗಳು ಮಾರಾಟಕ್ಕಿವೆ ಮೂಡಾ ಅಪ್ರೂವ್ಡ್
ಶ್ರೀನಗರ ಹಿಂಭಾಗ ಮತ್ತು ಶ್ರೀರಾಂಪುರ ರಿಂಗ್ ರೋಡ್, ಮೈಸೂರು
8050345574

JOBS @ MYSORE
Earn (9500 to 18500) PM.
10th, PUC, BBM, Age (18-24).
Trainee Manager / Project Manager. No fee, ವಿವರಗಳೊಂದಿಗೆ ಖುದ್ದಾಗಿ ಪರಸ್ಥಳದವರಿಗೆ ಮಾತ್ರ ವಸತಿ .
Meet us (9 am to 5.30 pm)
9342827788, 9342238667

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ ಟಿವಿಎಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು ವಯೋಮಿತಿ : 45 ವರ್ಷದ ಒಳಗೆ
ESI & PF ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819
9620667819

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9108566022

Commercial Rent / Lease
Available vacant land for rent / lease 280 ft x 100 ft = 28000 sft corner commercial site on 60 ft double road, adjacent to Hebbal Ring Road, Hebbal, Mysore, suitable for Garden restaurant, function hall, show rooms, service centre etc. whole or part area is also considered. Contact: Kushal
9663141767, 9482959493

ಹೆಲ್ತ್ ಕೇರ್ ತರಬೇತಿ
SSLC / PUC ಆದವರಿಗೆ ಡಿಪ್ಲೊಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು.
Mob: 9916908454

DTCP SITES FOR SALE
DTCP Sites
With RERA
Near Jayapura,
H.D. Kote Road, Mysore.
9590491194, 9606783264

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗಿಯರು, ವಯೋಮಿತಿ 18–30, ವಿದ್ಯಾರ್ಹತೆ: ಪಿ.ಯು.ಸಿ ಯಾವುದೇ ಡಿಗ್ರಿ
ಸೆರಾಕೇರ ಮೈಸೂರು ಹೆಲ್ತ್ ಸೆಂಟರ್ ನ್ಯೂ ಕಾಂತರಾಜ ಅರಸು ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು
7996011692
8296366894

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7204494854

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training.
www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE



Sudarshan Saur
SOLAR WATER HEATER
ATTRACTIVE OFFER
ಸೇಲ್ಸ್ & ಸರ್ವೀಸ್
10 years Guarantee
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 – 86,000.
6364308851, 7892046990

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ ಆಫೀಸ್, ಶೋರೂಂ ಮತ್ತು ಕಂಪನಿಗಳಿಗೆ Packing, Helper, Quality, Maintenance, Cashier, Billing, Data Entry, Telecalling ಮುಂತಾದ ಕೆಲಸಗಳಿಗೆ 7th, 10th, PUC, ITI, Diploma (Any Degree pass / fail) ಆದ ಯುವಕ / ಯುವತಿಯರು ಬೇಕಾಗಿದ್ದಾರೆ. ಸಂಬಳ 14500 – 39500 (ESI + PF + OT) ಸೇರಿ. T&C apply.
9164052361, 6364103418

WANTED
MUSLIM FEMALE OFFICE ASSISTANT
With experience in computer work & tally knowledge,
ATTRACTIVE SALARY,
TO WORK AT
CITY CIVIL WORK
Shariff Complex, Rajpath Road, Udayagiri 2nd Stage, Mysuru.
Contact: 88926 05749 / 86606 82463

SITE FOR SALE
B.S.N.L ಲೇಔಟ್ - 40X60
ವಾಣಿವಿಲಾಸ - 30X40
ಟೀಚರ್ಸ್ ಲೇಔಟ್ - 30X40
Contact
9448447035

WANTED
Wanted Teaching staff for reputed institution (Experience Preferred) for all subjects. Transport facilities available. Drop your resume through WhatsApp
8971577685
9980631121

ಮುಡಾ ಅಪ್ರೂವ್ಡ್ ಸೈಟು ಮಾರಾಟಕ್ಕಿದೆ
ಬ್ರಾಹ್ಮಿನ್ ಲೇಔಟ್ "A" ಬ್ಲಾಕ್, 60 ಅಡಿ ರಸ್ತೆ (ಪೂ.ಪ. 46 ಅಡಿ, ದ.ಉ. 127 ಅಡಿ) 2 ವಿಸ್ತೀರ್ಣ 2900 ಚದರ ಅಡಿಗಳು. ಚ.ಅಡಿಗೆ 1800 ಫೈನಲ್, ಫಿಕ್ಸೆಡ್.
8618644886, 9880280299

READY TO BUILT 40x60
MUDA APPROVED SITE FOR SALE WITH BORE
NEAR ST. JOSEPH SCHOOL YELAWALA, MYSORE
8217851695

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡಿ ಪ್ರತಿ ತಿಂಗಳಿಗೆ ರೂ. 15,000 ಸಂಪಾದಿಸಿ.
Mob: 9731891409

ವಿವಾಹ ಭಾಗ್ಯ
MRJ ಮ್ಯಾಟ್ರಿಮೋನಿ
ಎಲ್ಲಾ ಜಾತಿಯ ವಧು / ವರರಿಗಾಗಿ ಸಂಪರ್ಕಿಸಿ:
1) ಮೊದಲನೆ ಮದುವೆ
2) ಎರಡನೆ ಮದುವೆ
3) ವಿಧವೆ / ವಿದುರರು
FREE REGISTRATION
8904890413

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

FOR SALE (Starts From 10 Lakhs)
1. 20x30, 30x40, 30x50 Near Defence Apartments, HD Kote Road
2. 30x50 Near Varuna Lake
3. 2&3 BHK Flats at Ramkrishna Nagar
4. 30x40 House, Kuvempu Ngr Depo
5. 40x72, 35x45 House Vidyaranyapuram
6. 20x30 House Giridarshini Layout
7. 100x100 Farm House @ KRS Back Water Attach 20L
PRAKRUTHI PROPERTIES
95386 90359, 90359 90359

ಸಪ್ತಪದಿ
ಹಿಂದು ವಧು–ವರರ ಮಾಹಿತಿ ಕೇಂದ್ರ 8 ವರ್ಷದ ಸೇವೆಯೊಂದಿಗೆ
BE, MBA, M.Tech, MBBS/ MD/MS, PhD ಎಲ್ಲಾ ಡಿಗ್ರಿಯ India/USA/Australia/Canda/ Germany / Mysore/ Bangalore
ರಿಜಿಸ್ಟ್ರೇಷನ್‌ಗಾಗಿ ಸಂಪರ್ಕಿಸಿ
9663199511

WANTED TEACHERS
JNANAJYOTHI VIDYALAYA
Beerihundi Vi Mysore Tq.
Wanted HM, English, Hindi CBZ, NST / Montessori Teachers
9845390377
8197057626

ತಕ್ಷಣ ಬೇಕಾಗಿದ್ದಾರೆ
Vodaphone IDEA Comapany
- Sales Executive
- Flexible Timings
- Any Qualification
- Attractive Salary
9886018660
9886018667

ಹುಡುಗರು ಬೇಕಾಗಿದ್ದಾರೆ
ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಕೆಲಸಕ್ಕೆ
9380451150

ಹೊಸ ಮನೆ ಮಾರಾಟಕ್ಕಿದೆ
ಆರ್ಕಿಟೆಕ್ 30x40 MUDA ಮನೆ ಪೂರ್ವ ದಿಕ್ಕು
3BHK + Duplex
All Teak, ಗ್ರಾನೈಟ್
ಬೆಲೆ : 90 ಲಕ್ಷ
80% ಬ್ಯಾಂಕ್ ಲೋನ್
VTU ಕಾಲೇಜ್ ಹತ್ತಿರ ಸಾತಗಳ್ಳಿ, ಮೈಸೂರು
9900840025

ಬೇಕಾಗಿದ್ದಾರೆ
ಶೆಲ್ ಸೂಪರ್ ಮಾರ್ಕೆಟ್‌ನಲ್ಲಿ ಬಿಲ್ಲಿಂಗ್ (ಕ್ಯಾಶಿಯರ್) ಕೆಲಸ ಹಾಗೂ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ಆಕರ್ಷಕ ಸಂಬಳದ ಜೊತೆಗೆ ಊಟ, ವಸತಿ ಹಾಗೂ ESI ಮತ್ತು PF ಸೌಲಭ್ಯವಿರುತ್ತದೆ.
ಸ್ಥಳ: ಮೈಸೂರು, ಬಂಡಿಪಾಳ್ಯ
9739294107

ಹೊಸ ಮನೆ ಮಾರಾಟ/ಭೋಗ್ಯ
ಮುಡಾ, ವಿಜಯನಗರ 4ನೇ ಹಂತ
20x30 Duplex
ಸೆಮಿ ಫರ್ನಿಷಡ್ + ಟೀಕ್ ವುಡ್
3BHK + Store Room
Attach Bathroom
9663727759

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ –15000
ಸೆಕ್ಯೂರಿಟಿ ಸೂಪರ್ ವೈಸರ್ 16000
ESI ಮತ್ತು PF ಸೌಲಭ್ಯ
ಕೂರ್ಗಳ್ಳಿ ಕೈಗಾರಿಕೆಯ ಪ್ರದೇಶದಲ್ಲಿ ಆಸಕ್ತಿ ಉಳ್ಳವರು ಸಂಪರ್ಕಿಸಿ:
9035367083

ಸೈಟು ಮಾರಾಟಕ್ಕಿದೆ
ಜೆ.ಎಸ್.ಎಸ್. ಲೇಔಟ್ 2ನೇ ಹಂತ, ಪೊಲೀಸ್ ಲೇಔಟ್ ಪಕ್ಕ, ಸೈಟ್ ನಂ.96 ಅಳತೆ 9x11.5 ದಕ್ಷಿಣ ದಿಕ್ಕು ಮಾರಾಟಕ್ಕಿದೆ.
9972236593

30x40 ಪೂರ್ವದಿಕ್ಕಿನ DTCP 'A' ಖಾತೆ ಸೊಸೈಟಿ ಸೈಟ್ ಮಾರಾಟಕ್ಕಿದೆ
14 ಲಕ್ಷದ 80 ಸಾವಿರಗಳು ನಂಜುಂಡೇಶ್ವರ ನಗರ TVS ಫ್ಯಾಕ್ಟರಿ ಹತ್ತಿರ ಮೈಸೂರು
9972557534

SITE FOR SALE
30X40, 30X50 MUDA APPROVED
Very Good Location,
Near H.D Kote Ring road, Mysore
30x40, 30x50, 40x60
BMICAPA Approved
Near Manipal Hospital, Mysore
9483358399
6381779015

HOUSE FOR LEASE
3 BHK First Floor House with Italin Kitchen, Bath tub with Home theatre space at Sharadadevinagar
Brokers Please Excuse
9353737965

ಸುವರ್ಣ ಯಾತ್ರ
1. ನೇಪಾಳ ಪಶುಪತಿನಾಥ ಅಯೋಧ್ಯ, ಮುಕ್ತಿನಾಥ, ಮನೋಕಮನ, ಕಠ್ಮಂಡು ಪೋಕ್ರ ಪ್ರವಾಸ 9 ದಿನಗಳು 29–5–24
2. ಚಾರ್‌ಧಾಮ್ ಯಾತ್ರ ಕೇದಾರ್ ನಾಥ್, ಬದ್ರಿನಾಥ್, ಗಂಗೋತ್ರಿ, ಯಮುನೋತ್ರಿ ಹರಿದ್ವಾರ್ ದೆಹಲಿ 13 ದಿನಗಳು 7–6–24
3. ಕಾಶಿ ವಿಶ್ವನಾಥ ಬಾಬಾ ವೈದ್ಯನಾಥ್ ಪ್ರವಾಸ 7 ದಿನಗಳು 24–5–24
9019462508
6360146483

ಅನುಬಂಧ ಮ್ಯಾರೇಜಸ್
ಸುಂದರ ಶ್ರೀಮಂತ ವಿದ್ಯಾವಂತ ವಧುವರರಿಗೆ ನೇರ ಸಂಪರ್ಕಿಸಿ
6361740552
ನಮ್ಮ ಸಂಸ್ಥೆಗೆ ಕೆಲಸ ಮಾಡಲು ಸಮಾಜ ಸೇವಾ ಮನೋಭಾವದ ವಿದ್ಯಾವಂತ ಯುವತಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ

ತಕ್ಷಣ ಬೇಕಾಗಿದ್ದಾರೆ
1) ರಾತ್ರಿ ಪಾಳಿಗೆ ಸೆಕ್ಯೂರಿಟಿ ಗಾರ್ಡುಗಳು ಸ್ಥಳ: ಹೆಬ್ಬಾಳ್, ಕೂರ್ಗಳ್ಳಿ, ಹರ್ಷರಸ್ತೆ,
2) ಫೀಲ್ಡ್ ಸೂಪರ್ ವೈಸರ್ ಸೆಕ್ಯೂರಿಟಿ ಅನುಭವವಿರಬೇಕು
3) ಮಹಿಳಾ ಹೌಸ್ ಕೀಪರ್ ಸ್ಥಳ : ಮೇಟಗಳ್ಳಿ, GSSS ಕಾಲೇಜ್
9686422400
9242406261

ಬೇಕಾಗಿದ್ದಾರೆ
ಮೈಸೂರಿಗೆ ಅನುಭವವುಳ್ಳ ಸೆಕ್ಯೂರಿಟಿ ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ. ಹೊಸಬರನ್ನು ಸಹ ಪರಿಗಣಿಸಲಾಗುತ್ತದೆ.
7259389106

WANTED
RECEPTIONIST
(FEMALE)
with knowledge of speaking english kannada & having Tally knowledge for a Branded UPS Company
HITECH
Ups & Batteries
994562302, 9844355870
44, 5th Main, 6th Cross, S.Puram, Mysore-09

WANTED
1. COMPUTER OPERATOR
2. ACCOUNTANT (TALLY PRIME) (MINIMUM 2 YEAR EXPERIENCE)
3. DRIVER 4. OFFICER BOY
(ATTRACTIVE SALARY WITH ESI AND EPF)
91646 08888
98442 99888
#17/2, 1ST FLOOR, 5TH MAIN, 8TH CROSS, SARASWATHIPURAM, MYSORE

WANTED
COOK FOR SOUTH / NORTH INDIAN FOOD (MALE / FEMALE)
(ATTRACTIVE SALARY, ESI AND EPF)
91646 08888
98442 99888
#17/2, 1ST FLOOR, 5TH MAIN, 8TH CROSS, SARASWATHIPURAM, MYSORE

ಬೇಕಾಗಿದ್ದಾರೆ
ಟೈಲರ್‌ಗಳು ಮತ್ತು ಹೆಲ್ಪರ್‌ಗಳು ಫ್ರೆಂಡ್ಲಿ ಬೂಟಿಕ್ ವಿಜಯನಗರ 4ನೇ ಹಂತ, 3ನೇ ಘಟ್ಟ, ಮಹಿಳಾ ಕಾಲೇಜ್ ಹತ್ತಿರ
8217884838
9845819941

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ದಟ್ಟಗಳ್ಳಿ, ಮೈಸೂರು
ಶಾಲಾ ವಾಹನಕ್ಕೆ ಚಾಲಕರು (School Bus Driver) ಬೇಕಾಗಿದ್ದಾರೆ.
ಸ್ಕೂಲ್ ಆಯಾ ಬೇಕಾಗಿದ್ದಾರೆ.
8431315761

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್– 10 ನಂ.
(ಹೆಬ್ಬಾಳ್, ಮೇಟಗಳ್ಳಿ, ಸಿಟಿ, ಸಿದ್ದಾರ್ಥನಗರ ಸುತ್ತಮುತ್ತ)
(ವಯಸ್ಸು 25 ರಿಂದ 55)
ಹೌಸ್ ಕೀಪಿಂಗ್ ಸೂಪರ್ ವೈಸರ್
ಹೌಸ್ ಕೀಪಿಂಗ್ / ಲೋಡಿಂಗ್ / ಅನ್ ಲೋಡಿಂಗ್
Factory, Helpers, ITI, DIploma, SSLC, PUC
(ವಯಸ್ಸು 18 ರಿಂದ 25) ಉತ್ತಮ ಸಂಬಳ ವಿರುತ್ತದೆ.
9900749104
9036745292

ಹೊಸ ಮನೆ ಮಾರಾಟಕ್ಕಿದೆ
ಮೈಸೂರು ನಗರದ ಅಶೋಕಪುರಂ, 4ನೇ ಕ್ರಾಸ್‌ನಲ್ಲಿ 19x55 ಅಡಿಯಲ್ಲಿ ಕಟ್ಟಿರುವ 2BHK ಯ 2 ಇಂಡಿಪೆಂಡೆಂಟ್ ಆಗಿರುವ ಹಾಗೂ ಕಾರ್ಪೋರೇಷನ್ ಖಾತೆ ಹಾಗೂ ಕ್ಲಿಯರ್ ಡಾಕ್ಯೂಮೆಂಟ್ ಹೊಂದಿರುವ ಮನೆ ಮಾರಾಟಕ್ಕಿದೆ. ಈ ಮನೆಗೆ ಬ್ಯಾಂಕ್ ಸಾಲ ಸೌಲಭ್ಯಕೂಡ ಲಭ್ಯವಿದೆ.
9739780095, 9113523954

ಕಳೆದಿದೆ
ಇಸ್ಮಾಯಿಲ್ ಖಾನ್ # 204, 13ನೇ ತಿರುವು, ಕೆ.ಇ.ಬಿ. ಕಾಲೋನಿ, ಉದಯಗಿರಿ ಲಷ್ಕರ್ ಮೊಹಲ್ಲಾ, ಮೈಸೂರು–570019, ಈ ಸ್ವತ್ತಿಗೆ ಸೇರಿದ ಅಲಾಟ್‌ಮೆಂಟ್ ಲೇಟರ್ ರಿಜಿಸ್ಟರ್ಡ್ ಸೇಲ್ ಡೀಡ್, ಮಂಜೂರಾತಿ ಪತ್ರ, ಟೈಟಲ್ ಡೀಡ್, ಇತ್ಯಾದಿ, ಮೂಲ ದಾಖಲಾತಿಗಳು ಕಳೆದಿದ್ದು, ಸಿಕ್ಕವರು ಸಂಪರ್ಕಿಸಿ:
8971814102

ತಾರಸಿ ಸೋರುವಿಕೆ & ಸಂಪ್ ಲಿಕೇಜ್ & ಬಾತ್ ರೂಂ ಲಿಕೇಜ್ ಸರಿಪಡಿಸಲಾಗುವುದು
8971781855

ಮನೆ ಮಾರಾಟಕ್ಕಿದೆ
ಸ್ಥಳ: ಶಾರದಾ ಪಬ್ಲಿಕ್ ಶಾಲೆ ಹಿಂಭಾಗ, ದಟ್ಟಗಳ್ಳಿ 30x40 ಪೂರ್ವ ಮುಖ, 3 ಬಿ.ಹೆಚ್.ಕೆ. ಟೀಕ್ ವುಡ್ ಇಟಾಲಿಯನ್ ಕಿಚನ್, ಡೈನಿಂಗ್ ಹಾಲ್ ಮತ್ತು ಡಿಟೋ ಮನೆ ರೈಲ್ವೆ ಕಾಲೋನಿ, 40 ಅಡಿಯ ರಸ್ತೆ, ಉತ್ತರ ಮುಖ 30x40
ಸ್ಥಳ ಹರಿವಿದ್ಯಾಲಯ ಶಾಲೆ, ಭೋಗಾದಿ ಮೈಸೂರು–570026
9845623058

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರೋಡ್ – ಜಯಲಕ್ಷ್ಮೀಪುರಂನಲ್ಲಿ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್ ಗೆ ಅನುಭವವುಳ್ಳ Experienced - ಅಡುಗೆ ಭಟ್ರು (South Cook) ಅಸಿಸ್ಟೆಂಟ್ ಕುಕ್ (ಸಹಾಯಕ /Helper) Cutting , Grinding ಮತ್ತು ಕೌಂಟರ್ ಪಾರ್ಸೆಲ್ ಮಾಡುವ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ , ವಸತಿ ಹಾಗೂ ಉತ್ತಮ ಸೌಲಭ್ಯ ಗಳನ್ನೂ ನೀಡಲಾಗುತ್ತದೆ – ಸಂಪರ್ಕಿಸಿ:
9019916266

ಬೇಕಾಗಿದ್ದಾರೆ
Distributor Agencyಗೆ Billing ಆಪರೇಟರ್ (Lady) ಬೇಕಾಗಿದ್ದಾರೆ.
Excel, Tally ಗೊತ್ತಿರಬೇಕು
9972258425

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ ಸೋಮವಾರ 13 ಮೇ 2024

ಸಂಗೊಳ್ಳಿರಾಯಣ್ಣ ಪ್ರತಿಮೆ ಭಗ್ನಗೊಳಿಸಿದ್ದ ಆರೋಪಿ ಬಂಧನ

ಪ್ರತಿಮೆ ಉದ್ಘಾಟನೆ ವೇಳೆ ತನ್ನನ್ನು ಕಡೆಗಣಿಸಿದ್ದರಿಂದ ಕೃತ್ಯ



ಕೆ.ಆರ್.ಪೇಟೆ: ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಬೀಕನಹಳ್ಳಿ ಗ್ರಾಮದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ಭಗ್ನಗೊಳಿಸಿದ್ದ ಆರೋಪಿಯನ್ನು ಗ್ರಾಮಾಂತರ ಠಾಣೆಯ ಪೊಲೀಸ್ ನಿರೀಕ್ಷಕ ಆನಂದೇಗೌಡರ ನೇತೃತ್ವದ ಪೊಲೀಸರ ತಂಡ ಬಂಧಿಸುವಲ್ಲಿ ಯಶಸ್ವಿಯಾಗಿದೆ.

ಬೀಕನಹಳ್ಳಿ ಗ್ರಾಮದ ಹಾಲುಮತ ಸಮುದಾಯಕ್ಕೆ ಸೇರಿದ ಮೋಹನ(30) ಬಿನ್ ಅಣ್ಣೇಗೌಡ ಬಂಧಿತ ವ್ಯಕ್ತಿ.

ತಾಲೂಕಿನ ಬೀಕನಹಳ್ಳಿ ಗ್ರಾಮದಲ್ಲಿ ಕಳೆದ ಬುಧವಾರ (ಮೇ 8) ರಾತ್ರಿ ಕಿಡಿಗೇಡಿಯೊಬ್ಬ ಸ್ವಾತಂತ್ರ್ಯ ಹೋರಾಟಗಾರ ಸಂಗೊಳ್ಳಿ ರಾಯಣ್ಣರ ಪ್ರತಿಮೆಯ ಖಡ್ಗ, ಖಡ್ಗದ ಪಟ್ಟಿ ಮತ್ತು ಕಾಲಿನ ಪಾದವನ್ನು ಮುರಿದು ಪರಾರಿಯಾಗಿದ್ದ. ಮರುದಿನ ಬೆಳಿಗ್ಗೆ ಗ್ರಾಮಸ್ಥರು ರಾಯಣ್ಣರ ಪ್ರತಿಮೆ ಭಗ್ನಗೊಂಡಿರುವುದನ್ನು ಕಂಡು ಆಕ್ರೋಶಗೊಂಡಿದ್ದರು. ಇದರ ಜತೆಗೆ ರಾಜ್ಯಮಟ್ಟದ ಕುರುಬ ಸಮಾಜದ ಮುಖಂಡರು ಸ್ಥಳಕ್ಕೆ ಭೇಟಿ ಕೊಟ್ಟು ಪ್ರತಿಭಟಿಸಿ ದುಷ್ಕರ್ಮಿಯನ್ನು ಬಂಧಿಸುವಂತೆ ರಾಜ್ಯ ಸರ್ಕಾರಕ್ಕೆ ಒತ್ತಡ ಹಾಕಿದ್ದರು.

ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸ್ ಇಲಾಖೆ ಅದೇ ದಿನ ಬೆರಳಚ್ಚು ತಂತ್ರಜ್ಞರು ಮತ್ತು ಪೊಲೀಸ್ ಶ್ವಾನ ತರಬೇತುದಾರ ನಾಗರಾಜ್ ಅವರ ಗರಡಿಯಲ್ಲಿ ಪಳಗಿರುವ ಭೈರವ ಶ್ವಾನವನ್ನು ಕರೆಸಿ ಆರೋಪಿಯ ಪತ್ತೆಗೆ ತಡಕಾಡಿದರು. ಈ ಸಂದರ್ಭದಲ್ಲಿ ಶ್ವಾನ ಭೈರವ ಅದೇ ಗ್ರಾಮದ ಮೋಹನ್ ಅಲಿಯಾಸ್ ಗುಂಡ ಅವರ ಮನೆ ಬಳಿ ಸಾಗಿ ಆತನ ಗುರುತನ್ನು ಪೊಲೀಸರಿಗೆ ಸಾಕ್ಷ್ಯ ಒದಗಿಸಿತ್ತು. ಇದರ ಆಧಾರದ ಮೇಲೆ ತನಿಖೆ ಆರಂಭಿಸಿದ ಪೊಲೀಸರು ಆರೋಪಿ ಮೋಹನ್‌ನನ್ನು ಬಂಧಿಸಿ ಆತನ ವಿರುದ್ಧ ಪ್ರಕರಣ ದಾಖಲಿಸಿತ್ತು.

ಆರೋಪಿಯು ಬೆಂಗಳೂರಿನ ಹೋಟೆಲ್‌ನಲ್ಲಿ ಅಡುಗೆ ಭಟ್ಟನಾಗಿರುವುದು ತಿಳಿದು ಬಂದಿದೆ. ಈ ನಡುವೆ ಘಟನೆ ನಡೆದ ಎರಡು ದಿನದ ನಂತರ ಆತ ತಾಲೂಕಿನ ಅಕ್ಕಿಹೆಬ್ಬಾಳು ಗ್ರಾಮದಲ್ಲಿರುವುದು ಪೊಲೀಸ್ ಬಾತ್ಮಿದಾರರಿಂದ ತಿಳಿದು ಬಂದಿತು. ತಕ್ಷಣ ಗ್ರಾಮಾಂತರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಆನಂದೇಗೌಡ ಮತ್ತು ಸಬ್ ಇನ್ಸ್‌ಪೆಕ್ಟರ್ ಸುಬ್ಬಯ್ಯ ನೇತೃತ್ವದ ತಂಡ ಆತನನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ ನಂತರ ಆತನು ತನ್ನ ಅಪರಾಧವನ್ನು ಒಪ್ಪಿಕೊಂಡಿದ್ದಾನೆ.

ಕಳೆದ 11 ತಿಂಗಳ ಹಿಂದೆ ಬೀಕನಹಳ್ಳಿ ಗ್ರಾಮದಲ್ಲಿ ಸಂಗೊಳ್ಳಿ ರಾಯಣ್ಣರ ಪ್ರತಿಮೆ ಸ್ಥಾಪನೆ ಮಾಡಿದ್ದಾಗ ಈತನನ್ನು ಗ್ರಾಮಸ್ಥರು ಪರಿಗಣಿಸಿರಲಿಲ್ಲ ಎಂಬ ಅಸಮಾಧಾನ ಈತನಿಗೆ ಇತ್ತು. ಈತ ಕಳೆದ ಬುಧವಾರ ಊರಿಗೆ ಬಂದಾಗ ಮದ್ಯ ಸೇವಿಸಿ ರಾತ್ರಿ ಸಮಯದಲ್ಲಿ ಸದರಿ ಪ್ರತಿಮೆಯನ್ನು ವಿರೂಪಗೊಳಿಸಿ ಪ್ರತಿಮೆಯ ಖಡ್ಗ ಹಾಗೂ ಕಾಲಿನ ಕಡಗದ ಪಟ್ಟಿಯನ್ನು ಮುರಿದುಕೊಂಡು ತನ್ನ ಮನೆಯ ಬಳಿ ಇರುವ ಹುಲ್ಲಿನ ಮೆದೆಯಲ್ಲಿ ಅಡಗಿಸಿ ಇಟ್ಟಿದ್ದ. ಇವುಗಳನ್ನು ತನಿಖಾ ಸಂದರ್ಭದಲ್ಲಿ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾದ ಗ್ರಾಮಾಂತರ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಆನಂದೇಗೌಡ, ಸಬ್ ಇನ್ಸ್‌ಪೆಕ್ಟರ್ ಸುಬ್ಬಯ್ಯ, ತನಿಖಾ ಸಹಾಯಕರಾದ ವೈರಮುಡಿ, ಜಯವರ್ಧನ ಮತ್ತು ಅರುಣ್‌ಕುಮಾರ್‌ರವರನ್ನು ಜಿಲ್ಲಾ ವರಿಷ್ಠಾಧಿಕಾರಿ ಯತೀಶ್ ಅಭಿನಂದಿಸಿದ್ದಾರೆ.

ಡಿಕೆಶಿ, ಶಿವರಾಮೇಗೌಡ ವಿರುದ್ಧ ಮದ್ದೂರಿನಲ್ಲಿ ಜೆಡಿಎಸ್, ಬಿಜೆಪಿ ಬೃಹತ್ ಪ್ರತಿಭಟನೆ

ಪ್ರಜ್ವಲ್ ಪ್ರಕರಣ ಸಿಬಿಐ, ನ್ಯಾಯಾಂಗ ತನಿಖೆಗೆ ಒಪ್ಪಿಸಲು ಆಗ್ರಹ

ಮದ್ದೂರು,ಮೇ 12– ರಾಜ್ಯ ಕಾಂಗ್ರೆಸ್ ಸರ್ಕಾರ ಕಳೆದ ಕೆಲ ದಿನಗಳಿಂದ ಪೆನ್ ಡ್ರೈವ್ ನೆಪದಲ್ಲಿ ನೀಚ ರಾಜಕಾರಣ ನಡೆಸುತ್ತಿದೆ ಎಂದು ಆರೋಪಿಸಿ ಜೆಡಿಎಸ್ ಹಾಗೂ ಬಿಜೆಪಿ ಪಕ್ಷದ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು.

ಮಾಜಿ ಸಚಿವ ಡಿ.ಸಿ.ತಮ್ಮಣ್ಣ ನೇತೃತ್ವದಲ್ಲಿ ಟಿ.ಬಿ. ವೃತ್ತದ ಬಳಿ ಜಮಾಯಿಸಿದ ಉಭಯ ಪಕ್ಷಗಳ ನೂರಾರು ಕಾರ್ಯಕರ್ತರು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಪ್ರತಿಕೃತಿ ದಹಿಸಿ ರಸ್ತೆ ತಡೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ನೂರಾರು ಹೆಣ್ಣು ಮಕ್ಕಳ ವಿಷಯದಲ್ಲಿ ಕಾಂಗ್ರೆಸ್ ಮತ್ತು ಪಕ್ಷದ ನಾಯಕರು ಚೆಲ್ಲಾಟವಾಡುತ್ತಿದ್ದು, ಕುತಂತ್ರ ರಾಜಕಾರಣ ನಡೆಸುತ್ತಿದ್ದಾರೆ. ವ್ಯವಸ್ಥಿತ ಷಡ್ಯಂತ್ರದ ಮೂಲಕ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬಕ್ಕೆ ಮಸಿ ಬಳಿಯುವ ಪ್ರಯತ್ನ ಮಾಡುತ್ತಿರುವುದು ಜಗಜ್ಜಾಹೀರಾಗಿದೆ. ತಮ್ಮಿಷ್ಟದಂತೆ ತನಿಖೆ ನಡೆಸಲು ಎಸ್‌ಐಟಿ ರಚನೆ ಮಾಡಿ ತನಿಖೆಯ ಹಾದಿ ತಪ್ಪಿಸುತ್ತಿರುವುದು ಸ್ಪಷ್ಟವಾಗಿದೆ ಎಂದು ಕಿಡಿಕಾರಿದರು.



ಮದ್ದೂರಿನಲ್ಲಿ ಪ್ರತಿಭಟನೆ ನಡೆಸುತ್ತಿರುವ ಜೆಡಿಎಸ್, ಬಿಜೆಪಿ ಕಾರ್ಯಕರ್ತರು.

ಸಾವಿರಾರು ಪೆನ್‌ಡ್ರೈವ್‌ಗಳನ್ನು ರಾಜ್ಯಾದ್ಯಂತ ಹಂಚಿರುವುದರ ಹಿಂದೆ ಕಾಂಗ್ರೆಸ್‌ನ ಮಹಾನಾಯಕರೇ ಇದ್ದಾರೆಂಬುದು ಈಗಾಗಲೇ ಆಡಿಯೋ ಪುರಾವೆಗಳ ಮೂಲಕ ಸ್ಪಷ್ಟವಾಗಿದೆ. ಈ ಕೂಡಲೇ ಈ ಪ್ರಕರಣವನ್ನು ನ್ಯಾಯಾಂಗ ತನಿಖೆ ಅಥವಾ ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಆಗ್ರಹಿಸಿದರು.

ಶಾಸಕ ಕೆ.ಎಂ.ಉದಯ್ ಜೆಡಿಎಸ್‌ನ್ನು ಟೀಕಿಸುತ್ತಾರೆ. ಅವರು ಮತ್ತು ಅವರ ಪಕ್ಷದ ಕಾರ್ಯಕರ್ತರು ಮೊದಲು ಅವರ ತಟ್ಟೆಯಲ್ಲಿ ಹೆಗ್ಗಣ ಬಿದ್ದಿದೆ. ದೇವೇಗೌಡರ ಕುಟುಂಬದ ಬಗ್ಗೆ ಮಾತನಾಡುವ ನೈತಿಕತೆ ಅವರಿಗಿಲ್ಲ. ಇವರ ಬಗ್ಗೆ ಬೆಂಗಳೂರಿನ ಠಾಣೆಗಳಲ್ಲಿ ವಿಚಾರಗಳನ್ನು ತೆಗೆದುಕೊಳ್ಳಬಹುದು. ಇಂಥವರು ದೊಡ್ಡಮನೆ ಬಗ್ಗೆ ಮಾತನಾಡುವುದು ಸರಿಯಲ್ಲ ಎಂದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್ ಮಾತನಾಡಿ, ಹೆಣ್ಣು ಮಕ್ಕಳ ಮಾನಹಾನಿ ಮಾಡುತ್ತಿರುವ ಕ್ರಮ ಸರಿಯಲ್ಲ. ಹೀಗಾಗಿ ಸಮಗ್ರ ತನಿಖೆ ನಡೆಸಿ ಸೂಕ್ತ ಕ್ರಮವನ್ನು ಜರುಗಿಸುವಂತೆ ಮನವಿ ಮಾಡಿದರು.

ಜೆಡಿಎಸ್ ಮುಖಂಡರಾದ ಪ್ರಿಯಾಂಕ ಅಪ್ಪುಗೌಡ ಮಾತನಾಡಿ, ಹೆಣ್ಣು ಮಕ್ಕಳ ಮಾನಹಾನಿ ಅವರ ವೈಯಕ್ತಿಕ ಜೀವನವನ್ನು ಹಾಳುಮಾಡಲಾಗುತ್ತಿದೆ. ಮಹಿಳೆಯರ ಮಾನಹಾನಿ ಮಾಡಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಎಂದರು. ಪ್ರತಿಭಟನೆಯಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಸುರೇಶ್‌ಕುಮಾರ್, ಸದಸ್ಯರಾದ ಮಹೇಶ್, ಟಿ.ಆರ್.ಪ್ರಸನ್ನ, ವನಿತಾ, ರತ್ನಮ್ಮ, ಸುಶೀಲಮ್ಮ, ನಿಂಗಯ್ಯ, ಮುಖಂಡರಾದ ರವಿ ಚನ್ನಸಂದ್ರ, ಅಪ್ಪು.ಪಿ.ಗೌಡ, ಸಿದ್ದರಾಜು, ಜೆಡಿಎಸ್ ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಮಹಿಳಾ ಘಟಕದ ತಾಲೂಕು ಅಧ್ಯಕ್ಷ ದಿವ್ಯ ರಾಮಚಂದ್ರ ಶೆಟ್ಟಿ, ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷೆ ಶ್ವೇತಾ ಇತರರಿದ್ದರು.

> **ಹಾಸನದ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಪೆನ್‌ಡ್ರೈವ್ ಹಂಚಿಕೆ ಮಾಡಿ ದೇವೇಗೌಡ ಕುಟುಂಬಕ್ಕೆ ಕಳಂಕ ತರಲು ಹುನ್ನಾರ ನಡೆಸಿರುವ ಕಾಂಗ್ರೆಸ್ ನಾಯಕರ ಷಡ್ಯಂತ್ರ ಯಶಸ್ವಿಯಾಗುವುದಿಲ್ಲ. ಪೆನ್‌ಡ್ರೈವ್ ಹಿಂದಿನ ರಾಜಕೀಯ ದುರುದ್ದೇಶ ಬಯಲಾಗಿದೆ.**
>
> –ಡಿ.ಸಿ.ತಮ್ಮಣ್ಣ, ಮಾಜಿ ಸಚಿವರು

ನಾಳೆ ಶ್ರೀರಂಗಪಟ್ಟಣದ ಚಂದ್ರವನದಲ್ಲಿ ಯೋಗೋತ್ಸವ

ಶ್ರೀರಂಗಪಟ್ಟಣ, ಮೇ 12– ಪಟ್ಟಣದ ಹೊರವಲಯದಲ್ಲಿರುವ ಚಂದ್ರವನ ಆಶ್ರಮದಲ್ಲಿ ಮೇ 14ರಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಯೋಗೋತ್ಸವ ಕಾರ್ಯಕ್ರಮ ನಡೆಯಲಿದೆ ಎಂದು ಆಶ್ರಮದ ಪೀಠಾಧ್ಯಕ್ಷ ಡಾ. ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ತಿಳಿಸಿದ್ದಾರೆ.

ಚಂದ್ರವನ ಆಶ್ರಮದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 10ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಚಂದ್ರವನ ಆಶ್ರಮದ ಆವರಣದಲ್ಲಿ ಅಂದು ಬೆಳಿಗ್ಗೆ 7 ಗಂಟೆಗೆ ಯೋಗೋತ್ಸವ ಕಾರ್ಯಕ್ರಮ ನಡೆಯಲಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು, ಶ್ರೀ ತ್ರಿನೇತ್ರ ಇಂಟರ್‌ನ್ಯಾಷನಲ್ ಯೋಗ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಚಂದ್ರವನ ಆಶ್ರಮ, ಶ್ರೀರಂಗಪಟ್ಟಣ ಮತ್ತು ಮೈಸೂರು ಬೃಂದಾವನ ಬಡಾವಣೆಯ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಅಂತರರಾಷ್ಟ್ರೀಯ ಯೋಗ ದಿನ ನಡೆಯಲಿದೆ ಎಂದರು.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವ ಡಾ.ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ.

ಯೋಗೋತ್ಸವ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಡಾ. ಕುಮಾರ್ ಉದ್ಘಾಟಿಸಲಿದ್ದು, ಬೆಂಗಳೂರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್. ಅಹಲ್ಯಾ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಜಿಲ್ಲಾ ಪಂಚಾಯ್ತಿ ಸಿಇಒ ಶೇಕ್ ತನ್ವೀರ್ ಆಸೀಫ್, ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್. ನಾಗರಾಜು ಸೇರಿದಂತೆ ಅಧಿಕಾರಿಗಳು ಹಾಗೂ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು.

ಯೋಗೋತ್ಸವದಲ್ಲಿ ಮೈಸೂರಿನ ವಿವಿಧ ಶಿಕ್ಷಣ ಸಂಸ್ಥೆಗಳ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಜೊತೆಗೆ ಸಾರ್ವಜನಿಕರೂ ಸಹ ಭಾಗವಹಿಸಬಹುದಾಗಿದೆ. ಯೋಗೋತ್ಸವದಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೂ ವಿಶ್ವವಿದ್ಯಾನಿಲಯದಿಂದ ಯೋಗ ಅರ್ಹತಾ ಪತ್ರ ವಿತರಿಸಲಾಗುವುದು ಎಂದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ಗಿರೀಶ್ ಚಂದ್ರ ಮಾತನಾಡಿ, ಭಾರತ ಸರ್ಕಾರ ಆಯುಷ್ ಮಂತ್ರಾಲಯದ ಮೂಲಕ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ವಿನೂತನವಾಗಿ ಆಚರಿಸುತ್ತಿದೆ. ಪ್ರಸ್ತುತ 2024ನೇ ವರ್ಷದ 10ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಾಗಿದ್ದು, ದಶಮಾನೋತ್ಸವ ಹೊಸ್ತಿಲಲ್ಲಿ ಮಹಾ ಸಬಲೀಕರಣಕ್ಕಾಗಿ ಯೋಗ ಎಂಬ ಉತ್ಕೃಷ್ಟ ಧ್ಯೇಯವಾಕ್ಯದೊಂದಿಗೆ ಆಚರಿಸಲಾಗುತ್ತಿದೆ ಎಂದರು.

ಗೋಷ್ಠಿಯಲ್ಲಿ ಮೈಸೂರು ಜಿಎಆರ್‌ಸಿ ಸಹಾಯಕ ನಿರ್ದೇಶಕ ಡಾ.ಲಕ್ಷ್ಮಿ ನಾರಾಯಣ ಶಣೈ, ಸಹಾಯಕ ಪ್ರಾಧ್ಯಾಪಕ ಡಾ.ರೇವಣ್ಣ, ಡೆಪ್ಯುಟಿ ಫೈನಾನ್ಸ್ ಅಧಿಕಾರಿ ವಿದ್ವಾನ್ ಶಿವಮೂರ್ತಿ, ಮಠದ ಕಾರ್ಯದರ್ಶಿ ಟಿ.ಪಿ. ಶಿವಕುಮಾರ್ ಇದ್ದರು.

ಪಾಂಡವಪುರದಲ್ಲಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣ

ಮತ್ತೊಬ್ಬ ಆರೋಪಿ ಸೆರೆ, ಬಂಧಿತರ ಸಂಖ್ಯೆ 9ಕ್ಕೆ ಏರಿಕೆ

ಪಾಂಡವಪುರ: ಪಾಂಡವಪುರ ಪಟ್ಟಣದಲ್ಲಿ ನಡೆದ ಹೆಣ್ಣು ಭ್ರೂಣ ಹತ್ಯೆ ಪ್ರಕರಣದ ಮತ್ತೊಬ್ಬ ಆರೋಪಿಯನ್ನು ಪಟ್ಟಣದಲ್ಲಿ ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಬಿಟ್ಟಿದ್ದಾರೆ. ಕೆ.ಆರ್.ಪೇಟೆ ಪಟ್ಟಣದ ಗಾಣಿಗರ ಬೀದಿ ನಿವಾಸಿ ಜಗದೀಶಚಾರ್ ಪತ್ನಿ ಶೃತಿ (32) ಬಂಧಿತ ಆರೋಪಿ. ಮಂಡ್ಯದ ಹಾಡ್ಯದ ಆಲೆಮನೆಯಲ್ಲಿ ನಡೆದ ಹೆಣ್ಣು ಭ್ರೂಣ ಹತ್ಯೆ ಪ್ರಕರಣದಲ್ಲಿ ಆರೋಪಿಯಾಗಿ ಸಾವನ್ನಪ್ಪಿದ್ದ ಕೆ.ಆರ್.ಪೇಟೆಯ ವೈದ್ಯ ಡಾ.ಮಲ್ಲಿಕಾರ್ಜುನ ಅವರ ಖಾಸಗಿ ಕ್ಲಿನಿಕ್‌ನಲ್ಲಿ ಶೃತಿ ಕೆಲಸ ಮಾಡುತ್ತಿದ್ದರು.



ಆರೋಪಿ ಶೃತಿ ಪಾಂಡವಪುರ ಸೇರಿದಂತೆ ವಿವಿಡೆಡೆ ಹೆಣ್ಣು ಭ್ರೂಣ ಹತ್ಯೆ ಕೃತ್ಯದಲ್ಲಿ ಭಾಗಿಯಾಗಿರುವುದು ಪೊಲೀಸರ ವಿಚಾರಣೆಯ ವೇಳೆ ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಕುಮಾರ್, ಸಬ್ ಇನ್ಸ್‌ಪೆಕ್ಟರ್ ಉಮೇಶ್ ನೇತೃತ್ವದಲ್ಲಿ ಪೊಲೀಸರು ದಾಳಿ ನಡೆಸಿ ಕೆ.ಆರ್.ಪೇಟೆಯಲ್ಲಿ ಆರೋಪಿ ಶೃತಿಯನ್ನು ಬಂಧಿಸಿ, ವೈದ್ಯಕೀಯ ಪರೀಕ್ಷೆ ನಡೆಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಹೆಣ್ಣು ಭ್ರೂಣ ಹತ್ಯೆ ಪ್ರಕರಣದಲ್ಲಿ ಆರೋಪಿಗಳ ಸಂಖ್ಯೆ 9ಕ್ಕೆ ಏರಿಕೆಯಾಗಿದ್ದು, ಉಳಿದ ಆರೋಪಿಗಳ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.

ಊಗಿನಹಳ್ಳಿಯಲ್ಲಿ ಸಂಭ್ರಮದ ಹನುಮಂತೋತ್ಸವ

ಕಿಕ್ಕೇರಿ: ಹೋಬಳಿಯ ಗಡಿ ಗ್ರಾಮವಾದ ಊಗಿನಹಳ್ಳಿಯಲ್ಲಿ ಕುರುಹಿನಶೆಟ್ಟಿ ಸಮಾಜದ ವತಿಯಿಂದ ಸಂಭ್ರಮದಿಂದ ಹನುಮಂತೋತ್ಸವ ಆಚರಿಸಲಾಯಿತು.

ಭಾನುವಾರ ನಡೆದ ಹನುಮಂತೋತ್ಸವದಲ್ಲಿ ದೂರದ ಊರುಗಳಿಂದ ಗ್ರಾಮದ ಮೂಲ ನಿವಾಸಿಗಳಾದ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಬೇಸಿಗೆ ರಜೆಯ ಪ್ರಯುಕ್ತ ಮಕ್ಕಳ ಸೈನ್ಯ ಹನುಮಂತೋತ್ಸವದಲ್ಲಿ ಜೋರಿತ್ತು.

ಎತ್ತ ನೋಡಿದರು ಮಕ್ಕಳು, ಯುವಕರ ದಂಡು ಜೊತೆಗೆ ಹಿರಿಯರು ಕಾಣುತ್ತಿದ್ದರು. ಜೈ ಹನುಮ ಎಂದು ಕೂಗುತ್ತ ಉತ್ಸವದಲ್ಲಿ ಭಾಗಿಯಾಗಿದ್ದರು. ಹನುಮದೇವರ ಭಾವಚಿತ್ರಕ್ಕೆ ವಿವಿಧ ಪರಿಮಳ ಪುಷ್ಪಗಳಿಂದ ಅಲಂಕರಿಸಿ ಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು. ರಾಮಮಂದಿರದಿಂದ ಸಾಗಿದ ಉತ್ಸವಕ್ಕೆ ಗ್ರಾಮಸ್ಥರು ಹಣ್ಣು, ಕಾಯಿ ಅರ್ಪಿಸಿ ಆರತಿ ಬೆಳಗಿದರು.

ಭಾರತದಲ್ಲಿ ದಿಢೀರ್ ಆತಂಕ ಹೆಚ್ಚಿಸಿದ ಕೋವಿಡ್ ಒಮಿಕ್ರಾನ್, ಮಹಾರಾಷ್ಟ್ರದಲ್ಲಿ 91 ಕೇಸ್ ಪತ್ತೆ!

ಮುಂಬೈ, ಮೇ 12– ಕೋವಿಡ್ ವೈರಸ್ ವಿರುದ್ಧ ಸುದೀರ್ಘ ಹೋರಾಟದ ಬಳಿಕ ಭಾರತ ಸೇರಿದಂತೆ ವಿಶ್ವ ಯಶಸ್ಸು ಕಂಡಿದೆ. ಕೋವಿಡ್ ನಿಯಂತ್ರಿಸಿ ಮತ್ತೆ ಆರ್ಥಿಕತೆಯನ್ನು ಸರಿದಾರಿಗೆ ತರುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿದೆ. ಇದರ ನಡುವೆ ಕೋವಿಡ್ ಹೊಸ ವೇರಿಯೆಂಟ್‌ಗಳು ಭಾರತದಲ್ಲಿ ಆಗೊಮ್ಮೆ ಈಗೊಮ್ಮೆ ಬಂದು ಹೋಗಿದೆ. ಆದರೆ ಈ ಬಾರಿ ಆತಂಕ ಕರಿನೆರಳು ಹೆಚ್ಚಾಗುತ್ತಿದೆ. ಕಾರಣ ಅಮೆರಿಕದಲ್ಲಿ ಕೋವಿಡ್ 19 ಒಮಿಕ್ರಾನ್ ಕೆಪಿ.2 ಹೊಸ ವೇರಿಯೆಂಟ್ ವೇಗವಾಗಿ ಹರಡುತ್ತಿದೆ. ಇದೇ ಹೊಸ ವೈರಸ್ ಭಾರತದಲ್ಲೂ ಪತ್ತೆಯಾಗಿದೆ. ಮಹಾರಾಷ್ಟ್ರದಲ್ಲಿ ದಿಢೀರ್ 91 ಪ್ರಕರಣಗಳು ಪತ್ತೆಯಾಗಿದೆ.


ಕೋವಿಡ್ 19 ಒಮಿಕ್ರಾನ್ ಕೆಪಿ.2 ಸಬ್ ವೇರಿಯೆಂಟ್ ಪ್ರಕರಣ ಜೆಎನ್.1 ವೇರಿಯೆಂಟ್ ವೈರಸ್‌ನಿಂದ ಮ್ಯೂಟೇಷನ್ ಪಡೆದುಕೊಂಡಿದೆ. 2024ರ ಜನವರಿಯಲ್ಲಿ ಈ ಹೊಸ ವೇರಿಯೆಂಟ್ ಅಮೆರಿಕದಲ್ಲಿ ಮೊದಲ ಬಾರಿಗೆ ಪತ್ತೆಯಾಗಿತ್ತು. ಇದೀಗ ಹೊಸ ವೈರಸ್ ಮಹಾರಾಷ್ಟ್ರದಲ್ಲಿ ಆತಂಕ ಸೃಷ್ಟಿಸಿದೆ. ಪುಣೆಯಲ್ಲಿ 51 ಪ್ರಕರಣ, ಥಾಣೆಯಲ್ಲಿ 20 ಪ್ರಕರಣಗಳು ಪತ್ತೆಯಾಗಿದೆ.

ಔರಂಗಾಬಾದ್, ಅಮರಾವತಿಯಲ್ಲಿ 7 ಪ್ರಕರಣಗಳು ಪತ್ತೆಯಾಗಿದ್ದರೆ, ಸೋಲಾಪುರದಲ್ಲಿ 2 ಪ್ರಕರಣ, ಅಹಮ್ಮದ್ ನಗರ, ನಾಸಿಕ್, ಲಾತೂರ್ ಹಾಗೂ ಸಾಂಗ್ಲಿಯಲ್ಲಿ ತಲಾ ಒಂದೊಂದು ಪ್ರಕರಣಗಳು ಪತ್ತೆಯಾಗಿದೆ. ಮುಂಬೈ ಮಹಾನಗರದಲ್ಲಿ ಇದುವರೆಗೆ ಒಂದೂ ಪ್ರಕರಣ ಪತ್ತೆಯಾಗಿಲ್ಲ. 2023ರ ಅಂತ್ಯದ ವೇಳೆ ಜೆಎನ್.1 ವೇರಿಯೆಂಟ್ ಕೆಲ ದಿನಗಳ ಕಾಲ ಆತಂಕ ಸೃಷ್ಟಿಸಿತ್ತು ಜೆಎನ್.1 ವೇರಿಯೆಂಟ್‌ನಿಂದ ಇದೀಗ ಕೆಪಿ.2 ವೇರಿಯೆಂಟ್ ಹುಟ್ಟಿಕೊಂಡಿದೆ.

ಪ್ರಕರಣ ಪತ್ತೆ ಕುರಿತು ಪ್ರತಿಕ್ರಿಯೆ ನೀಡಿರುವ ಜಿನೋಮ್ ಸೀಕ್ವೆನ್ಸ್ ಪರೀಕ್ಷಾ ಸಂಪರ್ಕ ಅಧಿಕಾರಿ ಡಾ.ರಾಜೇಶ್, ಎಪ್ರಿಲ್, ಮೇ ತಿಂಗಳಲ್ಲಿ ಕೋವಿಡ್ ಮ್ಯೂಟೇಶನ್ ಪಡೆದುಕೊಂಡು ಹೊಸ ವೇರಿಯೆಂಟ್ ಆಗಿ ಹರಡುತ್ತದೆ. ಸದ್ಯ ಕೆಪಿ.2 ವೈರಸ್ ಪ್ರಕರಣ ತ್ವರಿತವಾಗಿ ಹರಡುತ್ತಿದೆ. ಆದರೆ ಆಸ್ಪತ್ರೆ ದಾಖಲು ಪ್ರಮಾಣ ಕಡಿಮೆ ಇದೆ. ಹೀಗಾಗಿ ಆತಂಕ ಪಡುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಮಾರ್ಚ್ ತಿಂಗಳಲ್ಲಿ ಮಹಾರಾಷ್ಟ್ರದಲ್ಲಿ 250 ಕೋವಿಡ್ ಪ್ರಕರಣ ಪತ್ತೆಯಾಗಿತ್ತು. ಆದರೆ ಆಸ್ಪತ್ರೆ ದಾಖಲು ಪ್ರಮಾಣದಲ್ಲಿ ಏರಿಕೆಯಾಗಿರಲಿಲ್ಲ. ಉರಿ ಬಿಸಿಲು ಹಾಗೂ ಮಳೆ ವಾತಾವರಣವಿರುವ ಕಾರಣ ಶೀತ ಕೆಮ್ಮು ಜ್ವರ, ಗಂಟಲುನೋವು ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಮುಂಜಾಗ್ರತೆ ತೆಗೆದುಕೊಳ್ಳಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಶಂಕರಾಚಾರ್ಯರ ಭವ್ಯ ಮೆರವಣಿಗೆ



ಮೈಸೂರು, ಮೇ 12(ಎಂಕೆ)– ಮೈಸೂರಿನ ಅಗ್ರಹಾರದಲ್ಲಿರುವ ಅಭಿನವ ಶಂಕರಾಲಯ ಮಠದಲ್ಲಿ ಶಂಕರಾಚಾರ್ಯರ ಜಯಂತಿ ಅಂಗವಾಗಿ ಭವ್ಯ ಮೆರವಣಿಗೆ ನಡೆಸಲಾಯಿತು.

ಶಾಸಕ ಟಿ.ಎಸ್.ಶ್ರೀವತ್ಸ ಶಂಕರಾಚಾರ್ಯರ ಪುತ್ಥಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಶಂಕರ ಮಠದಿಂದ ಆರಂಭವಾದ ಭವ್ಯ ಮೆರವಣಿಗೆ ಶಂಕರ ಮಠದ ಮುಖ್ಯ ರಸ್ತೆಯಿಂದ ಉತ್ತರಾದಿ ಮಠದ ರಸ್ತೆ ಮಾರ್ಗವಾಗಿ ನಾದಸ್ವರ ಹಾಗೂ ಭಜನೆ ಮೂಲಕ ಸಾಗಿತು. ಮೆರವಣಿಗೆ ನೂರಾರು ಮಂದಿ ಭಕ್ತರು ಭಾಗವಹಿಸಿ, ಮಾರ್ಗದುದ್ದಕ್ಕೂ ಜೈಕಾರ ಕೂಗಿ ಭಕ್ತಿ ತೋರಿದರು.

ಇದಕ್ಕೂ ಮುನ್ನ ಶಂಕರ ಮಠದ ಶ್ರೀ ಶಂಕರ ಸನ್ನಿದಿಯಲ್ಲಿ ನಡೆದ ರುದ್ರಾಭಿಷೇಕ, ವೇದಪಾರಾಯಣ, ವಿಷ್ಣು ಸಹಸ್ರನಾಮ ಪಾರಾಯಣ ಮತ್ತು ನವಗ್ರಹ ಜಪ ನಡೆಯಿತು. ನಂತರ ನಂತರ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಶಂಕರ ಮಠದ ಧರ್ಮಾಧಿಕಾರಿ ರಾಮಚಂದ್ರ, ಶಂಕರ್ ಮಠದ ವ್ಯವಸ್ಥಾಪಕ ಶೇಷಾದ್ರಿ ಭಟ್, ಸಪ್ತ ಮಾತ್ರಿಕ ದೇವಸ್ಥಾನದ ಧರ್ಮ ಅಧಿಕಾರಿ ಭಾಸ್ಕರ್, ಮೈಸೂರ್ ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ ಪ್ರಕಾಶ್, ನಗರಪಾಲಿಕೆ ಮಾಜಿ ಸದಸ್ಯರಾದ ಬಿ.ವಿ.ಮಂಜುನಾಥ್, ಅಚ್ಯುತ, ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಕೆ.ಎಂ.ನಿಶಾಂತ್, ರಂಗನಾಥ್, ಪ್ರಶಾಂತ್, ಎಂ.ಆರ್.ಬಾಲಕೃಷ್ಣ, ಜ್ಯೋತಿ, ಶ್ರೀಕಾಂತ್ ಕಶ್ಯಪ್, ಮೀನಾ, ಹರೀಶ್, ಸುಚೆಂದ್ರ, ಸುಧೀಂದ್ರ ಮತ್ತಿತರರಿದ್ದರು.

ಪಾಕ್‌ನಲ್ಲಿ ಪ್ರತಿಭಟನೆ: 100ಕ್ಕೂ ಹೆಚ್ಚು ಮಂದಿಗೆ ಗಾಯ, ಪೊಲೀಸ್ ಅಧಿಕಾರಿ ಹತ್ಯೆ

ಇಸ್ಲಾಮಾಬಾದ್: ಗೋಧಿ ಹಿಟ್ಟು ಮತ್ತು ವಿದ್ಯುತ್ ದರ ಏರಿಕೆ ಖಂಡಿಸಿ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಶನಿವಾರ ನಡೆದ ಪ್ರತಿಭಟನೆ ವೇಳೆ ಪ್ರತಿಭಟನಕಾರರು ಮತ್ತು ಪೊಲೀಸರ ಮಧ್ಯೆ ಸಂಘರ್ಷ ಏರ್ಪಟ್ಟಿದೆ.

ಈ ಹಿಂಸಾಚಾರದಲ್ಲಿ ಒಬ್ಬ ಪೊಲೀಸ್ ಅಧಿಕಾರಿಯ ಹತ್ಯೆಯಾಗಿದೆ. ಅಲ್ಲದೆ, 78 ಪೊಲೀಸರು ಸೇರಿದಂತೆ ನೂರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ.

ವಿವಾದಿತ ಪಾಕಿಸ್ತಾನ ಆಕ್ರಮಿತ ಕಾಶ್ಮೀರ ಪ್ರಾಂತ್ಯದಲ್ಲಿ ಶನಿವಾರ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿಸಿ, ರಸ್ತೆ ತಡೆ ಮಾಡಿ ಪ್ರತಿಭಟನೆ ಕೈಗೊಳ್ಳಲಾಗಿತ್ತು. ಈ ವೇಳೆ ಪೊಲೀಸರು ಮತ್ತು ಹೋರಾಟಗಾರರ ಮಧ್ಯೆ ಗಲಾಟೆ ಆರಂಭವಾಯಿತು ಎಂದು 'ಡಾನ್' ಪತ್ರಿಕೆ ವರದಿ ಮಾಡಿದೆ.

ಈ ಕುರಿತು ಪ್ರತಿಕ್ರಿಯಿಸಿದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಕಾಮ್ರಾನ್ ಅಲಿ, 'ಜಮ್ಮು–ಕಾಶ್ಮೀರ ಜಾಯಿಂಟ್ ಆವಾಮಿ ಆಕ್ಷನ್ ಕಮಿಟಿ (ಜೆಎಎಸಿ) ಅಡಿ ಕೈಗೊಳ್ಳಲಾಗಿದ್ದ ಪ್ರತಿಭಟನಾ ಮೆರವಣಿಗೆ ಕೊಟ್ಲಿ ಮತ್ತು ಪೂಂಛ್ ಜಿಲ್ಲೆಗಳ ಮೂಲಕ ಮುಜಾಫ್ಫರಾಬಾದ್ ಪ್ರವೇಶಿಸದಂತೆ ತಡೆಯಲು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಆದರೆ, ಇಸ್ಲಾಂಗಢದಲ್ಲಿ ನಡೆದ ಗಲಾಟೆಯಲ್ಲಿ ಸಬ್ ಇನ್‌ಸ್ಪೆಕ್ಟರ್ ಅದ್ನಾನ್ ಖುರೇಷಿ ಮೃತಪಟ್ಟಿದ್ದಾರೆ' ಎಂದರು.

ಜೆಎಎಸಿ ಪ್ರತಿಭಟನೆಗೆ ಮುಂದಾಗಿದ್ದರಿಂದಾಗಿ ಬುಧವಾರ ಮತ್ತು ಗುರುವಾರ ಜೆಎಎಸಿಯ ಸುಮಾರು 70 ಕಾರ್ಯಕರ್ತರನ್ನು ಬಂಧಿಸಲಾಗಿತ್ತು. ಇದರಿಂದಾಗಿ ಗುರುವಾರ ಗಂಭೀರ ಸ್ವರೂಪದ ಗಲಾಟೆಯಾಗಿತ್ತು. ಅಲ್ಲದೆ, ಮುಜಾಫ್ಫರಾಬಾದ್‌ನತ್ತ ಮೆರವಣಿಗೆ ಜಾಥಾ ಕೈಗೊಳ್ಳುವ ಮುನ್ನ ದಿನವಾದ ಶುಕ್ರವಾರ ಪ್ರತಿಭಟನೆ ನಡೆಸುವುದಾಗಿ ಜೆಎಎಸಿ ಘೋಷಿಸಿತ್ತು. ಇದರ ಪರಿಣಾಮ ಮುಜಾಫ್ಫರಬಾದ್ ಸೇರಿದಂತೆ ಇನ್ನಿತರ ಸ್ಥಳಗಳಲ್ಲಿ ಪ್ರತಿಭಟನಕಾರರು ಮತ್ತು ಪೊಲೀಸರ ಮಧ್ಯೆ ಗಲಾಟೆಗಳು ನಡೆದಿದ್ದವು.

ಶನಿವಾರ ಮತ್ತಷ್ಟು ಬಿಗಿ ಭದ್ರತೆ ಕೈಗೊಂಡಿದ್ದ ಪೊಲೀಸರು, ಪ್ರತಿಭಟನಕಾರರು ಮುಜಾಫ್ಫರಬಾದ್‌ನತ್ತ ತೆರಳದಂತೆ ಮುಂಜಾಗ್ರತಾ ವಹಿಸಿದ್ದರು. ಜೊತೆಗೆ ಪ್ರತಿಭಟನಕಾರರನ್ನು ಚದುರಿಸಲು ಅಶ್ರುವಾಯು ಶೆಲ್ ಮತ್ತು ಗಾಳಿಯಲ್ಲಿ ಗುಂಡುಗಳನ್ನು ಹಾರಿಸಿದರು. ಆಗ ಪ್ರತಿಭಟನಕಾರರು ಪೊಲೀಸರ ಮೇಲೆ ಕಲ್ಲು ತೂರಾಟ ಮತ್ತು ಬಾಟಲಿಗಳಿಂದ ದಾಳಿ ನಡೆಸಿದರು ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಡೆಲ್ಲಿ ವಿರುದ್ಧ ಬೆಂಗಳೂರಿಗೆ 47 ರನ್ ಜಯ

ಬೆಂಗಳೂರು, ಮೇ 12–ರಜತ್ ಪಾಟೀದಾರ್ ಅವರ ಅರ್ಧಶತಕದ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 47 ರನ್‌ಗಳ ಜಯ ಸಾಧಿಸಿದೆ.

ಇಲ್ಲಿನ ಎಂ.ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ 9 ವಿಕೆಟ್ ನಷ್ಟಕ್ಕೆ 187 ರನ್ ಗಳಿಸಿತ್ತು. ಹೊಸ ನಾಯಕನ ನೇತೃತ್ವದಲ್ಲಿ ಸ್ಪರ್ಧಾತ್ಮಕ ರನ್‌ಗಳ ಗುರಿ ಬೆನ್ನತ್ತಿದ್ದ ಡೆಲ್ಲಿ ಕ್ಯಾಪಿಟಲ್ಸ್ 19.1 ಓವರ್‌ಗಳಲ್ಲಿ 140 ರನ್‌ಗಳಿಗೆ ಸರ್ವಪತನ ಕಂಡಿತು.



188 ರನ್‌ಗಳ ಬೃಹತ್ ಮೊತ್ತದ ಚೇಸಿಂಗ್ ಆರಂಭಿಸಿದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಆರಂಭದಲ್ಲೇ ಆಘಾತ ಎದುರಿಸಿತು. ಸ್ಫೋಟಕ ಪ್ರದರ್ಶನ ನೀಡಲು ಮುಂದಾದ ಆರಂಭಿಕ ಆಟಗಾರ ಡೇವಿಡ್ ವಾರ್ನರ್ 1 ರನ್‌ಗಳಿಗೆ ಔಟಾದರು. ಈ ಬೆನ್ನಲ್ಲೇ ಅಭಿಷೇಕ್ ಪೋರೆಲ್ 2 ರನ್‌ಗಳಿಗೆ ವಿಕೆಟ್ ಒಪ್ಪಿಸಿ ಹೊರನಡೆದರು. ಇನ್ನೂ 8 ಎಸೆತಗಳಲ್ಲಿ 21 ರನ್ (2 ಸಿಕ್ಸರ್, 2 ಬೌಂಡರಿ) ಬಾರಿಸಿದ್ದ ಫ್ರೇಸರ್ ಮೆಕ್‌ಗಾರ್ಕ್ ಸಹ ವಿಕೆಟ್ ಒಪ್ಪಿಸಿದರು. ಮೊದಲ 6 ಓವರ್‌ಗಳಲ್ಲಿ 54 ರನ್ ಗಳಿಸಿದ್ದ ಡೆಲ್ಲಿ ಕ್ಯಾಪಿಟಲ್ಸ್ ಪ್ರಮುಖ 4 ವಿಕೆಟ್‌ಗಳನ್ನು ಕಳೆದುಕೊಂಡಿತ್ತು.

ಇನ್ನೂ ಏಕಾಂಗಿ ಹೋರಾಟ ನಡೆಸಿದ ನಾಯಕ ಅಕ್ಷರ್ ಪಟೇಲ್ 39 ಎಸೆತಗಳಲ್ಲಿ 57 ರನ್ (3 ಸಿಕ್ಸರ್, 5 ಬೌಂಡರಿ) ಗಳಿಸಿದ್ದು ಬಿಟ್ಟರೆ ಉಳಿದ ಯಾರೊಬ್ಬರು ಕ್ರೀಸ್‌ನಲ್ಲಿ ಉಳಿಯದ ಕಾರಣ ಆರ್‌ಸಿಬಿ ಸುಲಭ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಯಿತು. ಇನ್ನುಳಿದಂತೆ ಶಾಯ್ ಹೋಪ್ 29 ರನ್, ಕುಮಾರ್ ಕುಮಾರ್ ಕುಶಾರ್ಗ 2 ರನ್, ಸ್ಟಬ್ಸ್ 3 ರನ್, ರಸಿಕ್ ಸಲಾಮ್ 10 ರನ್, ಮುಕೇಶ್ ಕುಮಾರ್ 3 ರನ್, ಕುಲ್ದೀಪ್ ಯಾದವ್ 3 ರನ್ ಗಳಿಸಿ ಔಟಾದರು.

ಇದಕ್ಕೂ ಮುನ್ನ ಸಂಘಟಿತ ಬ್ಯಾಟಿಂಗ್ ಪ್ರದರ್ಶನ ನೀಡಿದ ಆರ್‌ಸಿಬಿ ಆಟಗಾರರು 200 ರನ್‌ಗಳನ್ನು ತಲುಪುವಲ್ಲಿ ವಿಫಲರಾದರು. ರಜತ್ ಪಾಟೀದಾರ್ ಸ್ಫೋಟಕ ಅರ್ಧಶತಕ, ವಿಲ್ ಜ್ಯಾಕ್ಸ್, ವಿರಾಟ್ ಕೊಹ್ಲಿ ಸ್ಫೋಟಕ ಪ್ರದರ್ಶನದಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು 9 ವಿಕೆಟ್ ಕಳೆದುಕೊಂಡು 187 ರನ್ ಬಾರಿಸಿತ್ತು ಈ ಮೂಲಕ ಡೆಲ್ಲಿ ತಂಡಕ್ಕೆ ಸ್ಪರ್ಧಾತ್ಮಕ ಗುರಿ ನೀಡಿತ್ತು.

ಮೊದಲಿಗೆ ಆರ್‌ಸಿಬಿ ಉತ್ತಮ ಆರಂಭ ಪಡೆಯಲು ವಿಫಲವಾಯಿತು. ನಾಯಕ ಫಾಫ್‌ಡು ಪ್ಲೆಸಿಸ್ ಕೇವಲ 6 ರನ್ ಗಳಿಸಿ ಮುಕೇಶ್ ಕುಮಾರ್‌ಗೆ ವಿಕೆಟ್ ಒಪ್ಪಿಸಿದರು. ಇನ್ನು ಮತ್ತೊಂದು ತುದಿಯಲ್ಲಿ ಕೇವಲ 13 ಎಸೆತಗಳಲ್ಲಿ ಒಂದು ಬೌಂಡರಿ ಹಾಗೂ 3 ಸಿಕ್ಸರ್ ಸಹಿತ 27 ರನ್ ಸಿಡಿಸಿದ ವಿರಾಟ್ ಕೊಹ್ಲಿ, ಇಶಾಂತ್ ಶರ್ಮಾಗೆ ವಿಕೆಟ್ ಒಪ್ಪಿಸಿ ಪೆವಿಲಿಯನ್‌ಗೆ ಮರಳಿದರು.

ಕೇವಲ 36 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡು ಕಂಗಾಲಾಗಿದ್ದ ಆರ್‌ಸಿಬಿ ತಂಡಕ್ಕೆ 3ನೇ ವಿಕೆಟ್‌ಗೆ ರಜತ್ ಪಾಟೀದಾರ್ ಹಾಗೂ ವಿಲ್ ಜ್ಯಾಕ್ಸ್ ಕೇವಲ 53 ಎಸೆತಗಳಲ್ಲಿ 88 ರನ್‌ಗಳ ಜೊತೆಯಾಟ ನೀಡುವ ಮೂಲಕ ಬಲ ತುಂಬಿದರು. ಮೈಚಳಿ ಬಿಟ್ಟು ಬ್ಯಾಟ್ ಬೀಸಿದ ಪಾಟೀದಾರ್ ಕೇವಲ 29 ಎಸೆತಗಳಲ್ಲೇ 5ನೇ ಅರ್ಧಶತಕ ಸಿಡಿಸಿದರು. ಅಂತಿಮವಾಗಿ ಪಾಟೀದಾರ್ 32 ಎಸೆತಗಳಲ್ಲಿ 52 ರನ್ (3 ಸಿಕ್ಸರ್, 3 ಬೌಂಡರಿ) ಚಚ್ಚಿ ಔಟಾದರು. ಈ ಬೆನ್ನಲ್ಲೇ ವಿಲ್ ಜ್ಯಾಕ್ಸ್ 41 ರನ್ (29 ಎಸೆತ, 3 ಬೌಂಡರಿ, 2 ಸಿಕ್ಸರ್) ಬಾರಿಸಿ ಪೆವಿಲಿಯನ್ ಹಾದಿ ಹಿಡಿದರು. ಬಳಿಕ ಕ್ರೀಸ್‌ಗಿಳಿದ ಕ್ಯಾಮರೂನ್ ಗ್ರೀನ್ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶನ ನೀಡಿದರು. 24 ಎಸೆತ ಎದುರಿಸಿದ ಗ್ರೀನ್ ಅಜೇಯ 32 ರನ್ (1 ಬೌಂಡರಿ, 2 ಸಿಕ್ಸರ್) ಬಾರಿಸಿದರು.

ಇನ್ನು ಮಧ್ಯಮ ಕ್ರಮಾಂಕದಲ್ಲಿ ಆರ್‌ಸಿಬಿ ಭರ್ಜರಿಯಾಗಿ ರನ್ ಗಳಿಸಿತಾದರೂ ಉತ್ತಮವಾಗಿ ಫಿನೀಶ್ ಮಾಡಲು ಸಾಧ್ಯವಾಗಲಿಲ್ಲ. ಮಹಿಪಾಲ್ ಲೋಮ್ರಾರ್ ಕೇವಲ 13 ರನ್ ಬಾರಿಸಿ ವಿಕೆಟ್ ಒಪ್ಪಿಸಿದರೆ, ನಿರ್ಣಾಯಕ ಘಟ್ಟದಲ್ಲಿ ದಿನೇಶ್ ಕಾರ್ತಿಕ್ ಶೂನ್ಯ ಸುತ್ತಿ ಪೆವಿಲಿಯನ್ ಸೇರಿದರು. ಇದು ಆರ್‌ಸಿಬಿ ರನ್ ವೇಗಕ್ಕೆ ಕಡಿವಾಣ ಬೀಳುವಂತೆ ಮಾಡಿತು.

ಡೆಲ್ಲಿ ಕ್ಯಾಪಿಟಲ್ಸ್ ಪರ ಖಲೀಲ್ ಅಹ್ಮದ್, ರಸಿಕ್ ಸಲಾಮ್ ತಲಾ 2 ವಿಕೆಟ್ ಕಿತ್ತರೆ, ಇಶಾಂತ್ ಶರ್ಮಾ, ಮುಕೇಶ್ ಕುಮಾರ್, ಕುಲ್ದೀಪ್ ಯಾದವ್ ತಲಾ ಒಂದೊಂದು ವಿಕೆಟ್ ಪಡೆದರು. ಕ್ಯಾಮರೂನ್ ಗ್ರೀನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ರಾಜಸ್ಥಾನ್ ವಿರುದ್ಧ ಸಿಎಸ್‌ಕೆಗೆ ಜಯ



ಚೆನ್ನೈ, ಮೇ 12– ತಂಡದ ಸಾಂಘಿಕ ಪ್ರದರ್ಶನದ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ರಾಜಸ್ಥಾನ್ ರಾಯಲ್ಸ್ ವಿರುದ್ಧ 5ವಿಕೆಟ್‌ಗಳ ಜಯ ಸಾಧಿಸಿದೆ.

ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 141 ರನ್ ಗಳಿಸಿತು. ತಂಡದ ಪರ ಯಶಸ್ವಿ ಜೈಸ್ವಾಲ್ 24, ಜೋಸ್ ಬಟ್ಲರ್ 21, ಸಂಜು ಸ್ಯಾಮ್ಸನ್ 15, ರಿಯಾನ್ ಪರಾಗ್ 47, ಧ್ರುವ ಜುರೇಲ್ 28 ರನ್ ಗಳಿಸಿದರು. ಚೆನ್ನೈ ಪರ ಸಿಮರ್ಜೀತ್ ಸಿಂಗ್ 3, ತುಷಾರ್ ದೇಶಪಾಂಡೆ 2 ವಿಕೆಟ್ ಪಡೆದರು. ರಾಜಸ್ಥಾನ್ ನೀಡಿದ ಗುರಿ ಬೆನ್ನತ್ತಿದ ಚೆನ್ನೈ 18.2 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 145ರನ್ ಗಳಿಸಿ ಜಯ ಗಳಿಸಿತು. ತಂಡದ ಪರ ರಚಿನ್ ರವೀಂದ್ರ 27, ಋತುರಾಜ್ ಗಾಯಕ್ವಾಡ್ 42, ಡ್ಯಾರಿಲ್ ಮಿಚೆಲ್ 22, ಮೋಯಿನ್ ಅಲಿ 10, ಶಿವಂ ದುಬೆ 18, ಸಮೀರ್ ರಿಜ್ವಿ 15 ರನ್ ಗಳಿಸಿದರು. ರವಿಚಂದ್ರನ್ ಅಶ್ವಿನ್ 2, ನಂದ್ರೆ ಬರ್ಗರ್, ಚಹಲ್ ತಲಾ ಒಂದೊಂದು ವಿಕೆಟ್ ಪಡೆದರು. ಸಿಮರ್ಜೀತ್ ಸಿಂಗ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಮೈಸೂರು ಮಿತ್ರ ಸೋಮವಾರ 13 ಮೇ 2024

ತಡೆಗೋಡೆ ರಕ್ಷಣೆಗೆ ಪ್ಲಾಸ್ಟಿಕ್ ಹೊದಿಕೆ

ಮಳೆಗಾಲದ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಭವನ ಸುರಕ್ಷತೆಗೆ ಮೊರೆ

ಮಡಿಕೇರಿ, ಮೇ 12–ಕೊಡಗು ಜಿಲ್ಲಾಡಳಿತ ಭವನದ ಮುಂಭಾಗ ಮರು ನಿರ್ಮಾಣ ಹಂತದಲ್ಲಿರುವ ಜಪಾನ್ ತಂತ್ರಜ್ಞಾನದ ತಡೆಗೋಡೆಗೆ ಇದೀಗ ಮಳೆಗಾಲದ ಭೀತಿ ಕಾಡುತ್ತಿದ್ದು, ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಭವನದ ಸುರಕ್ಷತೆಗೆ ಪ್ಲಾಸ್ಟಿಕ್ ಹೊದಿಕೆಯ ಮೊರೆ ಹೋಗಲಾಗಿದೆ.

ಕೆಲವೇ ದಿನಗಳಲ್ಲಿ ಜಿಲ್ಲೆಯಲ್ಲಿ ಮುಂಗಾರು ಮಳೆ ಆರಂಭವಾಗುವ ಲಕ್ಷಣಗಳು ಕಂಡು ಬರುತ್ತಿದ್ದು, ಈಗಾಗಲೇ ಜಿಲ್ಲೆಯ ವಿವಿಧ ಭಾಗಗಳಲ್ಲಿ ಉತ್ತಮ ಮಳೆಯಾಗುತ್ತಿದೆ. ಮಡಿಕೇರಿ ನಗರಕ್ಕೂ ಮಳೆ ಸುರಿಯುತ್ತಿದ್ದು, ನೀರು ಹರಿದು ತಡೆಗೋಡೆ ಮತ್ತೆ ಕುಸಿಯದಂತೆ ಟಾರ್ಪಲ್‌ಗಳನ್ನು ಮುಚ್ಚುವ ಪ್ರಯತ್ನ ಮಾಡಲಾಗುತ್ತಿದೆ. ಮಳೆ ನೀರು ಸರಾಗವಾಗಿ ಹರಿದು ಹೋಗಲು ನೂತನ ಕಾಂಕ್ರಿಟ್ ಚರಂಡಿ ಕಾಮಗಾರಿ ನಡೆಸಿ ಮುಕ್ತಾಯದ ಹಂತ ಕಂಡಿದ್ದರೂ, ಈ ಬಾರಿಯ ಮಳೆಯ ಆತಂಕ ತಡೆಗೋಡೆಗೆ ತಟ್ಟಿದೆ.



ಮಡಿಕೇರಿ ಜಿಲ್ಲಾಡಳಿತ ಭವನ ಮುಂಭಾಗದ ತಡೆಗೋಡೆಗೆ ಮಳೆಗಾಲದ ಹಿನ್ನೆಲೆಯಲ್ಲಿ ಪ್ಲಾಸ್ಟಿಕ್‌ಗಳನ್ನು ಹೊದಿಸಲಾಗುತ್ತಿದೆ.

ಕೋಟಿ ರೂ. ಲೆಕ್ಕಾಚಾರದ ವೆಚ್ಚ : ಜಿಲ್ಲಾಡಳಿತ ಭವನದ ಕಾಮಗಾರಿಗೆ ರಾಜ್ಯ ಸರ್ಕಾರ 5 ಕೋಟಿ ರೂ. ವೆಚ್ಚದಲ್ಲಿ 2013–15ನೇ ಸಾಲಿನಲ್ಲಿ ನಿರ್ಮಾಣ ಮಾಡಿತ್ತು. ಈ ವೇಳೆ ತಡೆಗೋಡೆಗಾಗಿ ಯಾವುದೇ ಹಣ ಮೀಸಲಿಟ್ಟಿರಲಿಲ್ಲ. ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿದ ಬಳಿಕ 7 ಕೋಟಿ ರೂ. ವೆಚ್ಚದಲ್ಲಿ ಜಿಲ್ಲಾಡಳಿ ಭವನಕ್ಕೆ ಜಪಾನ್ ತಂತ್ರಜ್ಞಾನದ ಸ್ಲ್ಯಾಬ್ ಅಳವಡಿಕೆಯ ಮೂಲಕ ತಡೆಗೋಡೆಯನ್ನು 2020ರಲ್ಲಿ ನಿರ್ಮಿಸಲಾಗಿತ್ತು. ಜಿಲ್ಲೆಯ ಭೌಗೋಳಿಕ ಲಕ್ಷಣ, ಮಳೆಯ ಪ್ರಮಾಣ ತಿಳಿಯದೇ ತಡೆಗೋಡೆಯನ್ನು ನಿರ್ಮಿಸಲಾಗುತ್ತಿದೆ ಎಂಬ ಆರೋಪಗಳ ನಡುವೆಯೇ ಕಾಮಗಾರಿ ಮುಕ್ತಾಯ ಕಂಡಿತ್ತು.

ಬರೆ ಕುಸಿದು ಹಾನಿ: 2019ರಲ್ಲಿ ಸುರಿದ ಅತಿಯಾದ ಮಳೆಗೆ ನೂತನ ಜಿಲ್ಲಾಡಳಿತ ಭವನದ ಮುಂಭಾಗ ಭೂ ಕುಸಿತ ಉಂಟಾಗಿತ್ತು. ಈ ವೇಳೆ ಜಿಲ್ಲಾಡಳಿತ ಭವನಕ್ಕೆ ತಡೆಗೋಡೆಯ ಅಗತ್ಯ ಮನಗಂಡು 60ಕ್ಕೂ ಹೆಚ್ಚು ಅಡಿ ಎತ್ತರದ ಬರೆಗೆ ಅಡ್ಡಲಾಗಿ ಅಂದಾಜು 100 ಮೀಟರ್‌ವರೆಗೆ ಕಾಂಕ್ರಿಟ್ ಸ್ಲ್ಯಾಬ್‌ಗಳನ್ನು ಅಳವಡಿಸಿ, ನಡುವಿನ ಖಾಲಿ ಜಾಗಕ್ಕೆ ಸಾವಿರಾರು ಲೋಡ್ ಮಣ್ಣು ತುಂಬಿಸಿ ತಡೆಗೋಡೆ ನಿರ್ಮಿಸಲಾಗಿತ್ತು. 2022ರಲ್ಲಿ ತಡೆಗೋಡೆಯ ಸ್ಲ್ಯಾಬ್‌ಗಳಲ್ಲಿ ಉಬ್ಬುಗಳು ಕಾಣಿಸಿಕೊಂಡು ತಡೆಗೋಡೆ ಕಾಮಗಾರಿ ಸಂಪೂರ್ಣ ಕಳೆಪೆ ಆರೋಪ ಎದುರಿಸುವಂತಾಯಿತು. ಇದು ಚುನಾವಣೆ ಸಂದರ್ಭ ರಾಜಕೀಯ ಪರಸ್ಪರ ದೂಷಣೆಗಳಿಗೂ ವಸ್ತು ವಿಷಯವಾಗಿ ಪರಿವರ್ತನೆಯಾಗಿತ್ತು.

ಹಾನಿ ದುರಸ್ತಿ ಕಾಮಗಾರಿ: 2023ರ ಮಳೆಗಾಲವೂ ಪ್ಲಾಸ್ಟಿಕ್ ಹೊದಿಕೆಯನ್ನೇ ಆಸರೆಯನ್ನಾಗಿರಿಸಿಕೊಂಡಿದ್ದ ತಡೆಗೋಡೆಯ ದುರಸ್ತಿ ಕಾಮಗಾರಿ ಕೆಲವೇ ತಿಂಗಳುಗಳ ಹಿಂದೆ ಕೈಗೊಳ್ಳಲಾಗಿದೆ. ಹಾನಿಗೊಳಗಾದ ಕಾಂಕ್ರಿಟ್ ಸ್ಲ್ಯಾಬ್‌ಗಳನ್ನು ಬದಲಿಸಿ, ಹೊಸ ಸ್ಲ್ಯಾಬ್‌ಗಳನ್ನು ಅಳವಡಿಸುವ ಕಾಮಗಾರಿ ಆಮೆಗತಿಯಲ್ಲಿ ನಡೆದಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಮಳೆಗಾಲ ಪ್ರಾರಂಭವಾಗುತ್ತಾ ಬಂದರೂ ನಿರೀಕ್ಷಿತ ಪ್ರಮಾಣದ ಗುರಿ ತಲುಪಲು ಸಾಧ್ಯವಾಗಿಲ್ಲ. ಇದು ಸಾರ್ವಜನಿಕರು, ಮಡಿಕೇರಿ–ಮಂಗಳೂರು ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ಹಾಗೂ ಅಲ್ಲಿನ ನಿವಾಸಿಗಳ ಆತಂಕಕ್ಕೆ ಕಾರಣವಾಗುತ್ತಿದೆ.

ಸದನ ಸಮಿತಿ ಪರಿಶೀಲನೆ

ಕಳಪೆ ತಡೆಗೋಡೆ ನಿರ್ಮಾಣವಾಗಿದೆ ಎನ್ನುವ ಆರೋಪಗಳು ಕೇಳಿ ಬಂದ ಹಿನ್ನೆಲೆಯಲ್ಲಿ ವಿಧಾನಸಭೆಯ ಅರ್ಜಿಗಳ ಸಮಿತಿ ಸದಸ್ಯರು ತಡೆಗೋಡೆಯನ್ನು ಕೂಲಂಕಷವಾಗಿ ಪರಿಶೀಲಿಸಿದ್ದರು. ವಿಧಾನಸಭೆಯ ಅರ್ಜಿ ಸಮಿತಿ ಅಧ್ಯಕ್ಷ ರುದ್ರಪ್ಪ ಮಾನಪ್ಪ ಲಮಾಣಿ ಅನುಪಸ್ಥಿತಿಯಲ್ಲಿ ಸದಸ್ಯರಾದ ಎಸ್.ಸುರೇಶ್ ಕುಮಾರ್, ಎ.ಮಂಜು, ಸಿ.ಬಿ.ಸುರೇಶ್ ಬಾಬು, ಮಹೇಂದ್ರ ಕಲ್ಲಪ್ಪ ತಮ್ಮಣ್ಣನವರ, ಮಡಿಕೇರಿ ಶಾಸಕ ಡಾ. ಮಂತರ್‌ಗೌಡ, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಹಾಜರಿದ್ದು, ಸದನ ಸಮಿತಿಗೆ ಮಾಹಿತಿ ನೀಡಿದ್ದರು. ಮಡಿಕೇರಿಯಲ್ಲಿ ಅಧಿಕಾರಿಗಳ ಸಭೆಯನ್ನೂ ನಡೆಸಿದ್ದ ಸದನ ಸಮಿತಿ, ಈ ಕುರಿತು ವರದಿ ತಯಾರಿಸಿ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದು ತಿಳಿಸಿತ್ತು.

ವಿರಾಜಪೇಟೆಯಲ್ಲಿ ಕರಗ ಮಹೋತ್ಸವ



ವಿರಾಜಪೇಟೆಯಲ್ಲಿ ದಕ್ಷಿಣ ಮಾರಿಯಮ್ಮ ದೇವಿಯ ಕರಗ ಮಹೋತ್ಸವ ನಡೆಯಿತು.

ವಿರಾಜಪೇಟೆ, ಮೇ 12–ನಗರದ ತೆಲುಗರ ಬೀದಿಯ ಶ್ರೀ ದಕ್ಷಿಣ ಮಾರಿಯಮ್ಮ ದೇವಿಯ ವಾರ್ಷಿಕ ಕರಗ ಮಹೋತ್ಸವ ಐದು ದಿನ ಭಕ್ತಿಯಿಂದ ಜರುಗಿತು.

ಮೇ 7ರಂದು ಉತ್ಸವಕ್ಕೆ ಚಾಲನೆ ನೀಡಿದ ಬಳಿಕ ಮೇ 11ರವರೆಗೆ ದೇವಾಲಯದಲ್ಲಿ ಧಾರ್ಮಿಕ ಪೂಜಾ ಕಾರ್ಯಗಳನ್ನು ನಡೆಸಲಾಯಿತು. ಮೊದಲ ದಿನ ದೇವಿಯನ್ನು ಆರಾಧಿಸಿ, ನಗರದ ಗೌರಿಕೇರೆಯಲ್ಲಿ ಅಲಂಕರಿಸಿದ ಕರಗವನ್ನು ಪಂಚ ವಾದ್ಯಗಳೊಂದಿಗೆ ದೇವಾಲಯಕ್ಕೆ ಬರಮಾಡಿಕೊಳ್ಳಲಾಯಿತು.

ನಂತರ ದೇವಿಗೆ ನಂದಾ ದೀಪಾರತಿ, ವಿಶೇಷ ಅಲಂಕಾರ ಸೇವೆ, ಮಹಾಪೂಜೆ, ಭಕ್ತರಿಂದ ವಿವಿಧ ಹರಕೆ ಸೇವೆಗಳು ಜರುಗಿದವು. 7 ಬಗೆಯ ವಿಶೇಷ ಪ್ರಸಾದ ವಿನಿಯೋಗಿಸಲಾಯಿತು. ಇದೇ ವೇಳೆ ಅನ್ನಸಂತರ್ಪಣೆ ನಡೆಯಿತು.

ತೆಲುಗರ ಬೀದಿ, ಜೈನರ ಬೀದಿ, ದೇವಾಂಗ ಬೀದಿ, ದಖ್ಖನಿ ಮೊಹಲ್ಲಾದ ಮುಖ್ಯ ರಸ್ತೆಗಳಲ್ಲಿ ಕರಗ ಮೆರವಣಿಗೆ ನಡೆಸಲಾಯಿತು. ಈ ವೇಳೆ ಭಕ್ತರು ಈಡುಗಾಯಿ ಸೇವೆ ನೆರವೇರಿಸಿದರು. ನಂತರ ದೇವಾಲಯಕ್ಕೆ ಆಗಮಿಸಿದ ಕರಗಕ್ಕೆ ಪೂಜೆ ಸಲ್ಲಿಸಲಾಯಿತು. ಇದೇ ವೇಳೆ ದಕ್ಷಿಣ ಮಾರಿಯಮ್ಮ ಮತ್ತು ಅಂಗಾಳ ಪರಮೇಶ್ವರಿ ದೇವಾಲಯದ ಆಡಳಿತ ಮಂಡಳಿಯ ಪದಾಧಿಕಾರಿಗಳು ಹಾಜರಿದ್ದರು.

ಕಡೋಡಿ ವಿಷ್ಣು ದೇವಾಲಯದ ರಸ್ತೆ ಅಭಿವೃದ್ಧಿ



ಸಣ್ಣಪುಲಿಕೋಟು ಗ್ರಾಮದ ಕಡೋಡಿ ಮಹಾವಿಷ್ಣು ದೇವಾಲಯದ ರಸ್ತೆಗೆ ಡಾಂಬರೀಕರಣ ಮಾಡಲಾಯಿತು.

ಮಡಿಕೇರಿ: ಸಣ್ಣಪುಲಿಕೋಟು ಗ್ರಾಮದ ಕಡೋಡಿ ಶ್ರೀ ಮಹಾವಿಷ್ಣು ದೇವಾಲಯದ ರಸ್ತೆಯನ್ನು ಸುಮಾರು 10 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗಿದೆ.

ಹಲವು ವರ್ಷಗಳ ರಸ್ತೆ ಅಭಿವೃದ್ಧಿ ಬೇಡಿಕೆಯನ್ನು ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಈಡೇರಿಸಿದ್ದಾರೆ ಎಂದು ಭಕ್ತರು ಹಾಗೂ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದರು. ಕಡೋಡಿ ಶ್ರೀ ಮಹಾವಿಷ್ಣು ದೇವಾಲಯದಲ್ಲಿ ಪ್ರತಿ 2 ವರ್ಷಕ್ಕೊಮ್ಮೆ ದೇವರ ಉತ್ಸವ ನಡೆಯುತ್ತದೆ. ಈ ವೇಳೆ ಸಾವಿರಾರು ಭಕ್ತರು ಆಗಮಿಸಿ ಹರಕೆ ತೀರಿಸಿ, ವಿಶೇಷ ಪ್ರಾರ್ಥನೆ ಸಲ್ಲಿಸುತ್ತಾರೆ. ದೇವಾಲಯದ ಉತ್ಸವಕ್ಕೂ ಮೊದಲೇ ರಸ್ತೆ ಅಭಿವೃದ್ಧಿಯಾಗಿದೆ ಎಂದು ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದರು.

ಈ ರಸ್ತೆ ಸಂಪೂರ್ಣವಾಗಿ ಹದಗೆಟ್ಟು ಭಕ್ತರಿಗೆ ಅನಾನುಕೂಲವಾಗಿತ್ತು. ಇದನ್ನು ಮನಗಂಡ ಕುಯ್ಯಮುಡಿ ಹಾಗೂ ಕಡೋಡಿ ಕುಟುಂಬಸ್ಥರು, ಪ್ರಮುಖರಾದ ಹಾರಿಸ್ ಚೆಟ್ಟಿಮಾನಿ, ವಿಶು ಪ್ರವೀಣ್ ಕುಮಾರ್, ಲವ ಕುಯ್ಯಮುಡಿ, ಎಂ.ಬಿ.ಪ್ರೇಮ್ ಕುಮಾರ್, ಮಂಗೇರಿರ ಜಗದೀಶ್, ಕೊಟ್ಟುಕಂಡ ದೀಪಕ್, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಕೆ.ಇಸ್ಮಾಯಿಲ್ ಅವರು ಶಾಸಕ ಎ.ಎಸ್.ಪೊನ್ನಣ್ಣ ಅವರ ಗಮನ ಸೆಳೆದು ರಸ್ತೆ ಅಭಿವೃದ್ಧಿ ಪಡಿಸುವಂತೆ ಮನವಿ ಮಾಡಿಕೊಂಡಿದ್ದರು. ಇದೀಗ ದೇವಾಲಯದ ಮುಂಭಾಗ ಹಾಗೂ ಭಾಗಮಂಡಲ ಮುಖ್ಯ ರಸ್ತೆಯಿಂದ ಕಡೋಡಿ ದೇವಾಲಯಕ್ಕಾಗಿ ಅಯ್ಯಂಗೇರಿಗೆ ತೆರಳುವ ಸಂಪರ್ಕ ರಸ್ತೆಯನ್ನು ಶಾಸಕರ ಅನುದಾನದಿಂದ ಅಭಿವೃದ್ಧಿ ಪಡಿಸಲಾಗಿದೆ.

ವಿಧಾನಸಭೆ ಚುನಾವಣೆ ಸಂದರ್ಭ ಎ.ಎಸ್. ಪೊನ್ನಣ್ಣ ಅವರ ಗೆಲುವಿಗಾಗಿ ಸಹೋದರ ನರೇಶ್ ಕಾರ್ಯಪ್ಪ ಹಾಗೂ ಚೆಟ್ಟಿಮಾನಿ, ಭಾಗಮಂಡಲದ ಕಾಂಗ್ರೆಸ್ ಮುಖಂಡರು ದೇವಾಲಯದಲ್ಲಿ ಪೂಜೆ ಸಲ್ಲಿಸಿದ್ದರು. ಈ ಬಾರಿ ಶಾಸಕ ಪೊನ್ನಣ್ಣ ಉತ್ಸವದಲ್ಲಿ ಪಾಲ್ಗೊಂಡಿದ್ದರು. ಅವರ ಸಮ್ಮುಖದಲ್ಲಿ ಹರಕೆ ತೀರಿಸಲಾಯಿತು ಎಂದು ಸ್ಥಳೀಯರು ತಿಳಿಸಿದ್ದಾರೆ.

ಗುಡುಗು, ಮಳೆಗೆ ಮನೆ ಹಾನಿ



ಕಾಲೂರು ಗ್ರಾಮದ ಬಾರಿಕೆ ಮೊಟ್ಟೆಯಲ್ಲಿ ಸಿಡಿಲಿಗೆ ಮನೆ ಸಂಪೂರ್ಣ ಹಾನಿಯಾಗಿರುವುದು.

ಮಡಿಕೇರಿ, ಮೇ 12–ಗುಡುಗು ಸಹಿತ ಸುರಿದ ಮಳೆಗೆ ಮಡಿಕೇರಿ ತಾಲೂಕಿನ ಗಾಳಿಬೀಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಲೂರು ಗ್ರಾಮದ ಬಾರಿಕೆ ಮೊಟ್ಟೆಯಲ್ಲಿ ಮನೆಯೊಂದು ಸಂಪೂರ್ಣ ಹಾನಿಗೊಂಡಿದೆ.

ಸಿಡಿಲಿನ ಅಬ್ಬರಕ್ಕೆ ಮನೆ ಧರಾಶಾಹಿಯಾಗಿದ್ದು, ಮನೆಯಲ್ಲಿದ್ದ ಲಿಂಗಮ್ಮ ಹಾಗೂ ಅವರ ಪುತ್ರ ಕಿರಣ್ ಅವರು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮನೆ ಸಹಿತ ಗೃಹೋಪಯೋಗಿ ವಸ್ತುಗಳು ಸಂಪೂರ್ಣವಾಗಿ ಹಾನಿಯಾಗಿದ್ದು, ಸುಮಾರು 10 ಲಕ್ಷ ರೂ. ನಷ್ಟ ಸಂಭವಿಸಿದೆ. ಗಾಳಿಬೀಡು ಗ್ರಾಮ ಪಂಚಾಯಿತಿ ಪಿಡಿಓ ಭೇಟಿ ನೀಡಿ, ಸ್ಥಳ ಪರಿಶೀಲಿಸಿದರು.

ಬೈಕ್, ಟಿಪ್ಪರ್ ನಡುವೆ ಡಿಕ್ಕಿ: ಇಬ್ಬರಿಗೆ ಗಾಯ

ನಾಪೋಕ್ಲು, ಮೇ 12–ಬೈಕ್ ಮತ್ತು ಟಿಪ್ಪರ್ ನಡುವೆ ಡಿಕ್ಕಿ ಸಂಭವಿಸಿ, ಬೈಕ್ ಸವಾರರಿಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಸಮೀಪದ ಬಲ್ಲಮಾವಟಿ ಗ್ರಾಮದ ಪಡಿಯಾಣಿ ಜಂಕ್ಷನ್ ಬಳಿಯ ತಿರುವಿನಲ್ಲಿ ಭಾನುವಾರ ಸಂಜೆ ನಡೆದಿದೆ.

ಅಯ್ಯಂಗೇರಿಯ ತೊತ್ತಿಯಂಡ ಸೋಮಯ್ಯ ಅವರ ಮಗ ಮುಕೇಶ್(27) ಹಾಗೂ ಈತನ ಚಿಕ್ಕಪ್ಪ ತೊತ್ತಿಯಂಡ ರಾಕೇಶ್ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ಇಬ್ಬರು ನಾಪೋಕ್ಲುವಿನ ಹಳೇ ತಾಲೂಕಿನ ಭಗವತಿ ಕಲ್ಯಾಣ ಮಂಟಪದಲ್ಲಿ ವಿವಾಹ ಸಮಾರಂಭ ಮುಗಿಸಿ ಅಯ್ಯಂಗೇರಿಯತ್ತ ಬೈಕ್‌ನಲ್ಲಿ ತೆರಳುತ್ತಿದ್ದರು. ಈ ವೇಳೆ ಅಯ್ಯಂಗೇರಿ ಕಡೆಯಿಂದ ನಾಪೋಕ್ಲುಗೆ ಬರುತ್ತಿದ್ದ ಟಿಪ್ಪರ್ ನಡುವೆ ಡಿಕ್ಕಿ ಸಂಭವಿಸಿದೆ. ಪರಿಣಾಮ ಇಬ್ಬರಿಗೂ ಕಾಲು ಹಾಗೂ ತಲೆಗೆ ಗಂಭೀರ ಗಾಯಗಳಾಗಿದೆ.

ಗಾಯಾಳುಗಳನ್ನು ನಾಪೋಕ್ಲು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಮಡಿಕೇರಿಯ ಆಸ್ಪತ್ರೆಗೆ ದಾಖಲಿಸಲಾಗಿದೆ. ನಾಪೋಕ್ಲು ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಲಕ್ಷ್ಮಿವೆಂಕಟೇಶ್ವರ ದೇವಾಲಯಕ್ಕೆ ಶ್ರೀನಿವಾಸ ನೂತನ ಅಧ್ಯಕ್ಷ





ಶ್ರೀನಿವಾಸ (ಸೀನ) ಟಿ.ಎ.ಸುಜಿಕುಮಾರ್

ನಾಪೋಕ್ಲು, ಮೇ 12–ಇಲ್ಲಿನ ಕಕ್ಕುಂದ ಕಾಡು ಶ್ರೀ ಲಕ್ಷ್ಮಿ ವೆಂಕಟೇಶ್ವರ ದೇವಾಲಯದ ನೂತನ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಟಿ.ಆರ್.ಶ್ರೀನಿವಾಸ (ಸೀನ) ಆಯ್ಕೆಯಾಗಿದ್ದಾರೆ.

ಕಾರ್ಯಾಧ್ಯಕ್ಷರಾಗಿ ಟಿ.ಎನ್.ರಮೇಶ್, ಉಪಾಧ್ಯಕ್ಷರಾಗಿ ಟಿ.ಕೆ.ಸೂರ್ಯಕುಮಾರ್, ಕಾರ್ಯದರ್ಶಿಯಾಗಿ ಟಿ.ಎ. ಸುಜಿಕುಮಾರ್, ಖಜಾಂಚಿಯಾಗಿ ಎಂ.ವಿ.ಗೋಪಾಲ, ಗೌರವಾಧ್ಯಕ್ಷರಾಗಿ ಟಿ.ಎಸ್.ಮಂಜಯ್ಯ ಹಾಗೂ ಸದಸ್ಯರಾಗಿ ಟಿ.ಎಸ್.ನವೀನ, ರಾಧಾಕೃಷ್ಣ ರೈ, ಎಂ.ಕೆ.ಸೀನಾ ಮಾಧವನ್, ತಂಗ, ಬಿ.ಎಸ್.ಮಂದಪ್ಪ, ಟಿ.ವಿ.ಭವಾನಿ, ಟಿ.ಕೆ.ಪ್ರಕಾಶ್, ಬಿ.ಸಿ. ಲೀಲಾವತಿ, ಟಿ.ಎಂ.ವಸಂತ, ಟಿ.ಎಸ್.ವೀಣಾ ಆಯ್ಕೆಯಾಗಿದ್ದಾರೆ. ವಿಶೇಷ ಸಲಹೆಗಾರರಾಗಿ ಟಿ.ವಿ.ಶ್ರೀನಿವಾಸ್, ಟಿ.ಎ.ಆನಂದ ಸ್ವಾಮಿ, ಟಿ.ಆರ್.ಅಪ್ಪುಸ್ವಾಮಿ ಅವರನ್ನು ನೇಮಿಸಲಾಗಿದೆ.

ಗಾಳಿ–ಮಳೆಗೆ ಬಾಳೆ ಫಸಲು ನಾಶ



ಗಾಳಿ ಮಳೆಗೆ ದೇವರಾಜಪುರ ಗ್ರಾಮದಲ್ಲಿ ಬಾಳೆ ಫಸಲು ನೆಲಕಚ್ಚಿರುವುದು.

ಚಾಮರಾಜನಗರ, ಮೇ 12– ಭಾರಿ ಗಾಳಿ ಮಳೆಗೆ ತಾಲೂಕಿನ ಚಂದಕವಾಡಿ ಹೋಬಳಿ ವ್ಯಾಪ್ತಿಯ ದೇವರಾಜಪುರ ಗ್ರಾಮದಲ್ಲಿ ಬಾಳೆ ಫಸಲು ನೆಲಕಚ್ಚಿದೆ.

ಶನಿವಾರ ಮಧ್ಯಾಹ್ನ ಸುರಿದ ಮಳೆ, ಗಾಳಿಗೆ ಗ್ರಾಮದ ರೈತ ಬಸವರಾಜು ಅವರು ತಮ್ಮ ಜಮೀನಿನಲ್ಲಿ ಬೆಳೆದಿದ್ದ ಬಾಳೆ ಫಸಲಿನ ಗಿಡಗಳು ಮುರಿದು ಬಿದ್ದಿವೆ.

ರೈತ ಬಸವರಾಜು ಒಂದು ಬಾಳೆ ಬಿತ್ತನೆ ಗಿಡಕ್ಕೆ 15 ರೂ.ನಂತೆ ಒಟ್ಟು 2350 ಗಿಡ ಖರೀದಿಸಿ, 2 ಎಕರೆಯಲ್ಲಿ ನಾಟಿ ಮಾಡಿದ್ದರು. ಇಲ್ಲಿಯವರೆಗೆ ಎಕರೆಗೆ ಒಂದು ಲಕ್ಷ ರೂ. ಖರ್ಚು ಮಾಡಿದ್ದಾರೆ. ಆದರೆ, ಗಾಳಿ ಮಳೆಗೆ ಬಾಳೆ ಫಸಲು ನಾಶವಾಗಿದೆ.

ಇದರಿಂದ ಬಡ್ಡಿ ಸಾಲ ಮಾಡಿ ಬಾಳೆ ಬೆಳೆಯಲಾಗಿತ್ತು. ನಾನು ಕೃಷಿಯನ್ನೇ ನಂಬಿ ಬದುಕುತ್ತಿದ್ದೇನೆ. ಬಾಳೆ ನಾಶದಿಂದ ವಿಷ ಕುಡಿಯುವಂತಾಗಿದೆ. ಆದ್ದರಿಂದ ಜಿಲ್ಲಾಡಳಿತ ಸೂಕ್ತ ಪರಿಹಾರ ನೀಡಬೇಕು ಎಂದು ರೈತ ಬಸವರಾಜು ಮನವಿ ಮಾಡಿದ್ದಾರೆ. ಹತ್ತಾರು ಸಾವಿರ ಬಾಳೆ ಗಿಡಗಳು ಒಂದೇ ಮಳೆಗೆ ಗಡಿ ಜಿಲ್ಲೆಯ ವಿವಿಧೆಡೆ ನೆಲಕಚ್ಚಿದ್ದು, ಪರಿಹಾರದ ನಿರೀಕ್ಷೆಯಲ್ಲಿ ರೈತರು ಕಾಯುತ್ತಿದ್ದಾರೆ. ಸರ್ಕಾರ ಈ ಬಗ್ಗೆ ಗಮನಹರಿಸಬೇಕು ಎಂದು ಬೆಳೆಗಾರರು ಒತ್ತಾಯಿಸಿದ್ದಾರೆ.

ಜಿಲ್ಲೆಯಲ್ಲಿ ಕೃಷಿ ಚಟುವಟಿಕೆ ಬಿರುಸು

● ಮುಂಗಾರು ಪೂರ್ವ ಮಳೆಯಿಂದ ಹರ್ಷ ● ಭೂಮಿ ಹದಗೊಳಿಸುತ್ತಿರುವ ಕೃಷಿಕರು

ಚಾಮರಾಜನಗರ, ಮೇ 12–ತೀವ್ರ ಬರಗಾಲದಿಂದ ಕಂಗೆಟ್ಟಿದ್ದ ಅನ್ನದಾತನ ಮೊಗದಲ್ಲಿ ಮುಂಗಾರು ಪೂರ್ವ ಮಳೆಯ ಆಗಮನ ಹರ್ಷ ತಂದಿದ್ದು, ಕಳೆದೊಂದು ವಾರದಿಂದ ಜಿಲ್ಲೆಯ ಹಲವೆಡೆ ಸುರಿಯುತ್ತಿರುವ ಮಳೆಯಿಂದ ಕೃಷಿ ಚಟುವಟಿಕೆ ಬಿರುಸುಗೊಂಡಿದೆ.

ಮುಂದಿನ ದಿನಗಳಲ್ಲಿ ಮತ್ತಷ್ಟು ಉತ್ತಮ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿರುವುದರಿಂದ ರೈತರು ಜಮೀನುಗಳಿಗೆ ತೆರಳಿ ಜಮೀನು ಹದಗೊಳಿಸುವ ಕೃಷಿ ಕಾರ್ಯಕ್ಕೆ ಮುಂದಾಗಿದ್ದಾರೆ.



ಬಿತ್ತನೆ ವಿತರಣೆಗೆ ಸಜ್ಜು: ಯಳಂದೂರು, ಕೊಳ್ಳೇಗಾಲ, ಹನೂರು, ಗುಂಡ್ಲುಪೇಟೆ ಹಾಗೂ ಚಾಮರಾಜನಗರ ತಾಲೂಕು ಕೇಂದ್ರ ಸೇರಿದಂತೆ ಜಿಲ್ಲೆಯ ಹಲವೆಡೆಯ ರೈತ ಸಂಪರ್ಕ ಕೇಂದ್ರಗಳಲ್ಲಿ ರೈತರಿಗೆ ಅಗತ್ಯವಾದ ಬಿತ್ತನೆ ಬೀಜಗಳ ವಿತರಣೆಗೆ ಕೃಷಿ ಇಲಾಖೆ ಸಿದ್ಧತೆ ಮಾಡಿಕೊಂಡಿದ್ದು, ಈಗಾಗಲೇ ಹಲವೆಡೆ ಬಿತ್ತನೆ ಬೀಜ ವಿತರಿಸಲಾಗುತ್ತಿದೆ.

ಜಿಲ್ಲಾ ಕೃಷಿ ಇಲಾಖೆಗೆ 921.80 ಕ್ವಿಂಟಾಲ್‌ಗಳಷ್ಟು ಬಿತ್ತನೆ ಬೀಜ ಪೂರೈಕೆಯಾಗಿದ್ದು, ಈಗಾಗಲೇ ಜಿಲ್ಲಾದ್ಯಂತ 57.77 ಕ್ವಿಂಟಾಲ್‌ಗಳಷ್ಟು ಬಿತ್ತನೆ ಬೀಜವನ್ನು ವಿತರಿಸಲಾಗಿದೆ. 864.03 ಕ್ವಿಂಟಾಲ್‌ಗಳಷ್ಟು ದಾಸ್ತಾನು ಮಾಡಲಾಗಿದೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

1.09 ಲಕ್ಷ ಹೆಕ್ಟೇರ್ ಬಿತ್ತನೆಗುರಿ: ಜಿಲ್ಲೆಯಲ್ಲಿ ಪೂರ್ವ ಮುಂಗಾರು ಹಾಗೂ ಮುಂಗಾರು ಹಂಗಾಮಿನ ಅವಧಿಯಲ್ಲಿ ಒಟ್ಟು 1.09 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡುವ ಗುರಿಯನ್ನು ಈ ಬಾರಿ ಕೃಷಿ ಇಲಾಖೆ ಹಾಕಿಕೊಂಡಿದೆ.

ಇದರಲ್ಲಿ ಗುಂಡ್ಲುಪೇಟೆ ತಾಲೂಕು ವ್ಯಾಪ್ತಿಯಲ್ಲಿ ಅತಿ ಹೆಚ್ಚು 33,447 ಹೆಕ್ಟೇರ್‌ನಲ್ಲಿ ವಿವಿಧ ಬೆಳೆಗಳು ಬಿತ್ತನೆಯಾಗುವ ನಿರೀಕ್ಷೆ ಇದೆ. ಹನೂರಿನಲ್ಲಿ 27,120 ಹೆಕ್ಟೇರ್‌ನಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ. ಪ್ರತಿವರ್ಷ ಜಿಲ್ಲೆಯಲ್ಲಿ ಮಾರ್ಚ್, ಏಪ್ರಿಲ್ ಆರಂಭದಲ್ಲಿ ಹತ್ತಿ ಬಿತ್ತನೆಯಾಗುತ್ತದೆ. ಆದರೆ, ಈ ಬಾರಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಬಾರದಿರುವ ಕಾರಣದಿಂದ ಅಂದುಕೊಂಡಷ್ಟು ಹತ್ತಿ ಬಿತ್ತನೆಯಾಗಿಲ್ಲ. ಹಾಗಾಗಿ, ರೈತರು ಅದರ ಬದಲಾಗಿ ಸೂರ್ಯಕಾಂತಿ, ಮುಸುಕಿನ ಜೋಳ ಬಿತ್ತನೆ ಮಾಡುವ ಸಾಧ್ಯತೆ ಇದೆ.

ಮುಂಗಾರು ಪೂರ್ವ ಅವಧಿಯಲ್ಲಿ ಉದ್ದು, ಹೆಸರು, ಅಲಸಂದೆ ಸೂರ್ಯ ಕಾಂತಿಯನ್ನು ಹೆಚ್ಚಾಗಿ ಬಿತ್ತನೆ ಮಾಡಲಾಗುತ್ತಿದೆ. ಬಿತ್ತನೆ ಬೀಜ ವಿತರಣೆ ನಡೆಯುತ್ತಿದೆ.

> “ಮಳೆಗಾಲ ಆರಂಭವಾಗುವ ನಿರೀಕ್ಷೆ ಮೂಡಿಸಿದ್ದು, ಕೃಷಿಗೆ ಭೂಮಿ ಸಿದ್ಧತೆ ನಡೆಸಲಾಗಿದೆ. ಉಳುಮೆ, ಕಳೆ, ಗಿಡಗಂಟಿ ನಿರ್ವಹಣೆ, ಕಾಲುವೆ ಸೋಸುವುದು, ನೀರಿನ ಮೂಲಗಳ ಸಂರಕ್ಷಣೆ ಹಾಗೂ ಭೂಮಿ ಹದ ಮಾಡಲಾಗುತ್ತಿದೆ.
> –ಸಿದ್ದರಾಜು, ರೈತ, ಚಾಮರಾಜನಗರ

ನಮ್ಮಲ್ಲಿ ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಇದೆ. ರಸಗೊಬ್ಬರವೂ ಸಾಕಷ್ಟಿದೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಒಟ್ಟಾರೆ ಜಿಲ್ಲೆಯಲ್ಲಿ ರೈತರು ಮುಂಗಾರು ಹಂಗಾಮಿನ ನಿರೀಕ್ಷೆಯಲ್ಲಿ ಭೂಮಿ ಸಿದ್ಧತೆಯಲ್ಲಿ ತೊಡಗಿದ್ದಾರೆ. ಆದರೆ, ಮಣ್ಣು ತಂಪಾಗಿಸುವಷ್ಟು ಮಳೆ ಸುರಿದಿಲ್ಲ. ಒಣ ಭೂಮಿಯ ಕಾವು ಇನ್ನೂ ಆರಿಲ್ಲ. ಈ ನಡುವೆ ಬಿತ್ತುವ ಪ್ರಕ್ರಿಯಿಗೆ ಬೇಸಾಯಗಾರರು ಮುಂದಾಗಿದ್ದಾರೆ. ನೀರಿನ ಮೂಲ ಹೊಂದಿರುವ ರೈತರು ಬೇಸಿಗೆ ಬೆಳೆಯಾಗಿ ಕಬ್ಬು, ಭತ್ತ, ರಾಗಿ, ಉದ್ದು, ಮುಸುಕಿನ ಜೋಳ ಮತ್ತು ಬಿಳಿಜೋಳ ಬಿತ್ತಿದ್ದು, ವರುಣನ ಕೃಪೆಗಾಗಿ ಕಾಯುತ್ತಿದ್ದಾರೆ.

ಅರೇಪಾಳ್ಯದಲ್ಲಿ ಚಿರತೆ ದಾಳಿಗೆ ಹಸು ಸಾವು



ಅರೇಪಾಳ್ಯದದಲ್ಲಿ ಚಿರತೆ ದಾಳಿಗೆ ಹಸು ಮೃತಪಟ್ಟಿರುವುದು.

ಕೊಳ್ಳೇಗಾಲ, ಮೇ 12–ತಾಲೂಕಿನ ಕಾಡಂಚಿನ ಗ್ರಾಮವಾದ ಅರೇಪಾಳ್ಯದಲ್ಲಿ ಚಿರತೆ ದಾಳಿಗೆ ಹಸು ಮೃತಪಟ್ಟಿದೆ.

ಗ್ರಾಮದ ರೈತ ಮುತ್ತು ಅವರಿಗೆ ಸೇರಿದ ಹಸು ಸಾವಿಗೀಡಾಗಿದ್ದು, ಶನಿವಾರ ಎಂದಿನಂತೆ ಮೇವು ತಿಂದು ದೊಡ್ಡಿಗೆ ಆಗಮಿಸಿದ ಹಸುವನ್ನು ಕಟ್ಟಲಾಗಿತ್ತು. ಆದರೆ, ರಾತ್ರಿ ಚಿರತೆ ದೊಡ್ಡಿಗೆ ನುಗ್ಗಿ ದಾಳಿ ನಡೆಸಿ, ಹಸುವನ್ನು ಕೊಂದು ಹಾಕಿದೆ. ಭಾನುವಾರ ಬೆಳಗ್ಗೆ ಮುತ್ತು ಕೊಟ್ಟಿಗೆಗೆ ಬಂದಾಗ ಹಸು ಮೃತಪಟ್ಟಿರುವುದು ಪತ್ತೆಯಾಗಿದೆ.

ಈ ಭಾಗದಲ್ಲಿ ಚಿರತೆ ಸೇರಿದಂತೆ ಕಾಡುಪ್ರಾಣಿಗಳು ನಿರಂತರವಾಗಿ ಸಂಚರಿಸುತ್ತಿವೆ. ಚಿರತೆ ಆಹಾರ ಅರಸಿ ಗ್ರಾಮದ ಕಡೆಗೆ ಬಂದು ಹಸುವನ್ನು ಕೊಂದುಹಾಕಿದೆ ಎನ್ನಲಾಗಿದೆ.

ಅಪ್ರಾಪ್ತೆಗೆ ಹೆರಿಗೆ: ಪತಿ ವಿರುದ್ಧ ಪೋಸ್ಕೊ ಪ್ರಕರಣ

ಕೊಳ್ಳೇಗಾಲ, ಮೇ 12–ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಹೆರಿಗೆಗೆ ಆಗಮಿಸಿದ ಗರ್ಭಿಣಿ ಅಪ್ರಾಪ್ತೆ ಎಂದು ದೃಢಪಟ್ಟ ಹಿನ್ನೆಲೆಯಲ್ಲಿ ಆಕೆಯ ಪತಿ ವಿರುದ್ಧ ಪೋಸ್ಕೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಇತ್ತಿಚೇಗೆ ಸರ್ಕಾರಿ ಆಸ್ಪತ್ರೆಗೆ ಹೆರಿಗೆಗೆ ಬಂದಿದ್ದ ಅಪ್ರಾಪ್ತೆ 18 ವರ್ಷ ತುಂಬುವ ಮುನ್ನ ಮದುವೆಯಾಗಿರುವುದು ಬೆಳಕಿಗೆ ಬಂದಿದೆ. ಸದ್ಯ ಈಕೆ ಗಂಡು ಮಗುವಿಗೆ ಜನ್ಮ ನೀಡಿದ್ದು, ತಾಯಿ–ಮಗು ಆರೋಗ್ಯವಾಗಿದ್ದಾರೆ. ಪತಿ ಅಬ್ದುಲ್ ಕಲಾಂ ವಿರುದ್ಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಅಬ್ದುಲ್ ಕಲಾಂ 2023ರ ಜು.7ರಂದು ಈಕೆಯೊಂದಿಗೆ ವಿವಾಹವಾಗಿದ್ದ. ನಂತರ ಪಟ್ಟಣದಲ್ಲಿ ಬಾಡಿಗೆ ಮನೆಯೊಂದರಲ್ಲಿ ವಾಸವಿದ್ದರು. ಆದರೆ, ಈಕೆ ಮೇ 8ರಂದು ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಗೆ ಹೆರಿಗೆಗೆ ಬಂದಿದ್ದಳು. ಈ ವೇಳೆ 18 ವರ್ಷ ತುಂಬುವ ಮೊದಲೇ ಈಕೆ ಮದುವೆಯಾಗಿರುವುದು ಪತ್ತೆಯಾಗಿದೆ. ಬಳಿಕ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಈಕೆ ಹಾಗೂ ಈಕೆಯ ಕಡೆಯವರಿಂದ ಮಾಹಿತಿ ಪಡೆದು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪತಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.



ಚಾಮರಾಜನಗರದ ಕನ್ನಡ ಸಾಹಿತ್ಯ ಪರಿಷತ್ ಕಚೇರಿಯಲ್ಲಿ ಡಾ.ಎಸ್.ಪಿ. ಬಾಲಸುಬ್ರಹ್ಮಣ್ಯಂ ಗಾನ ಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಂಗಭೂಮಿ ಕಲಾವಿದರಾದ ಹರದನಹಳ್ಳಿ ನಟರಾಜು, ನಂಜೇದೇವನಪುರ ಪುರುಷೋತ್ತಮ, ವಿ.ಮಹದೇವಯ್ಯ, ವೆಂಕಟರಮಣಸ್ವಾಮಿ, ಗೋವಿಂದರಾಜು, ಮಲ್ಲಯ್ಯನಪುರ ಎಂ.ಎನ್.ಮಹದೇವ, ಗೋವಿಂದರಾಜು ಅಮ್ಮನಪುರ, ನಾಗರಾಜು ನಂಜನಗೂಡು ಅವರಿಗೆ ಡಾ.ರಾಜ್‌ಕುಮಾರ್, ಎಸ್.ಜಾನಕಮ್ಮ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕಸಾಪ ತಾಲೂಕು ಅಧ್ಯಕ್ಷ ಸುರೇಶ್ ಋಗ್ವೇದಿ, ಉದ್ಯಮಿ ಎ.ಜಯಸಿಂಹ, ಪರಿಸರ ಪ್ರೇಮಿ ಸಿ.ಎ.ವೆಂಕಟೇಶ್, ಬರಹಗಾರ ಲಕ್ಷ್ಮೀನರಸಿಂಹ, ರೋಟರಿ ಮಾಜಿ ಅಧ್ಯಕ್ಷ ಕೆ.ಎಂ.ಮಹದೇವಸ್ವಾಮಿ, ಆರ್.ಮೂರ್ತಿ, ಕಲಾವಿದ ಘಟಂ ಕೃಷ್ಣ, ದೊರೆಸ್ವಾಮಿ, ವೇದಿಕೆ ಅಧ್ಯಕ್ಷ ಶಿವು ಜೋಸೆಫ್, ಕಾರ್ಯದರ್ಶಿ ರಾಜಣ್ಣ, ಮಹೇಶ್ ಕುಮಾರ್ ಬಂಗಾರು ಇದ್ದರು.

ನಾಳೆ ಶ್ರೀನಿವಾಸಪ್ರಸಾದ್ ನಮನ ಕಾರ್ಯಕ್ರಮ



ಸುದ್ದಿಗೋಷ್ಠಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸಂಘಗಳ ಒಕ್ಕೂಟದ ಅಧ್ಯಕ್ಷ ಸಿ.ಕೆ. ಮಂಜುನಾಥ್ ಮಾತನಾಡಿದರು.

ಚಾಮರಾಜನಗರ, ಮೇ 12–ಡಾ.ಬಿ.ಆರ್.ಅಂಬೇಡ್ಕರ್ ಸಂಘಗಳ ಒಕ್ಕೂಟ, ವಿ.ಶ್ರೀನಿವಾಸ ಪ್ರಸಾದ್ ಅಭಿಮಾನಿಗಳ ಬಳಗದ ವತಿಯಿಂದ ಮೇ 14ರಂದು ಸ್ವಾಭಿಮಾನಿ ಚಕ್ರವರ್ತಿ ವಿ. ಶ್ರೀನಿವಾಸಪ್ರಸಾದ್ ನಿಮಗಿದೋ ನಮ್ಮ ನಮನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಡಾ.ಬಿ.ಆರ್. ಅಂಬೇಡ್ಕರ್ ಸಂಘಗಳ ಒಕ್ಕೂಟದ ಅಧ್ಯಕ್ಷ ಸಿ.ಕೆ. ಮಂಜುನಾಥ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಅಂದು ಬೆಳಗ್ಗೆ 11 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಂಗಮಂದಿರದಲ್ಲಿ ಕೊಳ್ಳೇಗಾಲದ ಜೇತವನ ಬೌದ್ಧ ವಿಹಾರದ ಮನೋರಖ್ಖಿತ ಭಂತೇಜಿ ಸಾನಿಧ್ಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಹಿರಿಯ ಸಾಹಿತಿ ಡಾ.ಮೂಡ್ನಾಕೂಡು ಚಿನ್ನಸ್ವಾಮಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಶ್ರೀನಿವಾಸ ಪ್ರಸಾದ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದು, ಮೈಸೂರು ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಪರಿಷತ್ ನಿರ್ದೇಶಕ ಪ್ರೊ.ಡಿ.ಆನಂದ್ ಹಾಗೂ ನಿವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಡಾ.ಆರ್.ರಾಜು ನುಡಿ ನಮನ ಸಲ್ಲಿಸಲಿದ್ದಾರೆ. ಶ್ರೀನಿವಾಸ ಪ್ರಸಾದ್ ಅವರ ಪುತ್ರಿ ಪ್ರತಿಮಾ ಪ್ರಸಾದ್, ಅವರ ಆಪ್ತ ಎಂ.ವೆಂಕಟಪತಿ ತಿರುಪ್ಪೂರ್ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಯೋಜಕ ಕೆ.ಎಂ. ನಾಗರಾಜು, ರಂಗವಾಹಿನಿ ಸಂಸ್ಥೆ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ, ನಗರಸಭಾ ಮಾಜಿ ಸದಸ್ಯ ಬಸವರಾಜು, ಪ್ರಸನ್ನ ಕುಮಾರ್, ಮಹದೇವಸ್ವಾಮಿ, ಎಸ್ಸಿ ಎಸ್ಟಿ ಪದವೀಧರ ಒಕ್ಕೂಟದ ಅಧ್ಯಕ್ಷ ನಾಗಸುಂದರ್ ಹಾಜರಿದ್ದರು.

ಜವಹರ್ ಶಾಲೆಗೆ ಶೇ.91ರಷ್ಟು ಫಲಿತಾಂಶ

ಗುಂಡ್ಲುಪೇಟೆ, ಮೇ 12–ಪಟ್ಟಣದ ಜವಹರ್ ಆಂಗ್ಲ ಮಾಧ್ಯಮ ಶಾಲೆಗೆ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.91ರಷ್ಟು ಫಲಿತಾಂಶ ಲಭಿಸಿದೆ.

ಮೂವರು ಅತ್ಯುನ್ನತ ಶ್ರೇಣಿ, 36 ವಿದ್ಯಾರ್ಥಿಗಳು ಪ್ರಥಮ ದರ್ಜೆ, 17 ದ್ವಿತೀಯ ದರ್ಜೆ ಹಾಗೂ 14 ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ ಪ್ರೌಢ ಶಾಲೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.91ರಷ್ಟು ಫಲಿತಾಂಶ ಬಂದಿದೆ. ಅತ್ಯುನ್ನತ ಶ್ರೇಣಿ 1, ಪ್ರಥಮ ದರ್ಜೆ 31, ದ್ವಿತೀಯ ದರ್ಜೆ 23 ಹಾಗೂ ತೃತೀಯ ದರ್ಜೆಯಲ್ಲಿ 18 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಶಾಲೆಯ ಗೌರವ ಕಾರ್ಯದರ್ಶಿ ಎಂ.ಪಿ.ಸುನಿಲ್, ಆಡಳಿತ ಮಂಡಳಿ, ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರು ಅಭಿನಂದಿಸಿದ್ದಾರೆ.

ಹರವೆ ಚನ್ನಬಸವೇಶ್ವರ ಶಾಲೆಗೆ ಶೇ.96 ರಷ್ಟು ಫಲಿತಾಂಶ

ಚಾಮರಾಜನಗರ, ಮೇ 12– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲೂಕಿನ ಹರವೆ ಗ್ರಾಮದ ಚನ್ನಬಸವೇಶ್ವರ ಆಂಗ್ಲ ಮಾಧ್ಯಮ ಶಾಲೆಗೆ ಶೇ.96ರಷ್ಟು ಫಲಿತಾಂಶ ಬಂದಿದೆ.

ಮುಸ್ಲಿಂ ಧರ್ಮಗುರು ಮನೆಯಲ್ಲಿ 25 ಲಕ್ಷ ನಗದು, ಚಿನ್ನಾಭರಣ ಕಳವು

ಮೈಸೂರು, ಮೇ 12(ಎಸ್‌ಬಿಡಿ)– ಬುರ್ಕಾ ಧರಿಸಿ ಕೆ.ಆರ್.ನಗರದಲ್ಲಿ ಮುಸ್ಲಿಂ ಧರ್ಮಗುರುವಿನ ಮನೆಯಲ್ಲಿದ್ದ ಲಕ್ಷಾಂತರ ನಗದು ಹಾಗೂ ಚಿನ್ನಾಭರಣ ದೋಚಿರುವ ವಿಡಿಯೋ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಘಟನೆ ಸಂಬಂಧ ನಗರದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆ.ಆರ್.ನಗರ ಮುಸ್ಲಿಂ ಬ್ಲಾಕ್‌ನಲ್ಲಿರುವ ಧರ್ಮಗುರು ಅಪ್ಸರ್ ಪಾಷ ಅವರ ಮನೆಯಲ್ಲಿ ಈ ಘಟನೆ ನಡೆದಿದೆ. ಬುರ್ಕಾ ಧರಿಸಿದ್ದ ಖದೀಮ ಮೇ 8ರ ಮುಂಜಾನೆ ನಕಲಿ ಕೀ ಬಳಸಿ ಮನೆ ಹಿಂಭಾಗದ ದೇವರ ಮನೆಯೊಳಗೆ ನುಗ್ಗಿ ನಗದು ಹಾಗೂ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾನೆ.

ಯಾವುದೋ ಮನೆಯ ವ್ಯವಹಾರಕ್ಕೆಂದು ಬೆಂಗಳೂರಿನ ಪರಿಚಿತರಿಂದ ಏ.28ರಂದು 25 ಲಕ್ಷ ರೂ. ಸಾಲ ಪಡೆದು, ಅದನ್ನು ಮನೆ ಹಿಂಭಾಗದ ದೇವರ ಮನೆ ಕೋಣೆಯಲ್ಲಿನ ಬೀರುವಿನಲ್ಲಿಟ್ಟಿದ್ದೆ. ಮೇ 6ರಂದು ಕಾರ್ಯ ನಿಮಿತ್ತ ಬೆಂಗಳೂರಿಗೆ ಹೋಗಿದ್ದು, ಮೇ 8ರಂದು ಪತ್ನಿ ಕರೆ ಮಾಡಿ ದೇವರ ಮನೆಯಲ್ಲಿ ಕಳ್ಳತನವಾಗಿರುವುದಾಗಿ ತಿಳಿಸಿದರು. ಅಂದು ಮಧ್ಯಾಹ್ನ ಮನೆಗೆ ಬಂದು ಪರಿಶೀಲಿಸಿದಾಗ ಬೀರುವಿನಲ್ಲಿಟ್ಟಿದ್ದ 25 ಲಕ್ಷ ರೂ. ಹಣ, 24 ಲಕ್ಷ ಮೌಲ್ಯದ ಚಿನ್ನಾಭರಣ, ಮೂರು ಬೆಲೆಬಾಳುವ ವಾಚ್‌ಗಳು ಕಳ್ಳತನವಾಗಿರುವುದು ತಿಳಿಯಿತು. ಧರ್ಮ ಗುರುವಾಗಿರುವುದರಿಂದ ಚಿನ್ನವನ್ನು ಜನ ಕೊಟ್ಟಿದ್ದರು. ನಕಲಿ ಕೀ ಬಳಸಿ ಬಾಗಿಲು ತೆಗೆದು, ಕಳ್ಳತನ ಮಾಡಿ ನಂತರ ಡೋರ್ ಲಾಕ್ ಮಾಡಿಕೊಂಡು ಹೋಗಿದ್ದಾರೆ ಎಂದು ಅಪ್ಸರ್ ಪಾಷ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಈ ಸಂಬಂಧ ಕೆ.ಆರ್.ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕಳ್ಳನ ಪತ್ತೆಗೆ ಶೋಧ ನಡೆಸಿದ್ದಾರೆ.

ನಕಲಿ ಟ್ರೇಡಿಂಗ್ ಆಪ್ ಮೂಲಕ ಇಂಜಿನಿಯರ್‌ಗೆ 90 ಲಕ್ಷ ವಂಚನೆ

ಮೈಸೂರು, ಮೇ 12(ಎಸ್‌ಬಿಡಿ)– ನಕಲಿ ಟ್ರೇಡಿಂಗ್ ಆಪ್ ಮೂಲಕ ಇಂಜಿನಿಯರ್‌ಗೆ ಸುಮಾರು 90 ಲಕ್ಷ ರೂ. ವಂಚನೆಯಾಗಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಶ್ರೀರಾಂಪುರದಲ್ಲಿರುವ ಇಂಜಿನಿಯರ್‌ವೊಬ್ಬರ ಮೊಬೈಲ್‌ಗೆ cocoa209 ವಾಟ್ಸಾಪ್ ಗ್ರೂಪ್‌ಗೆ ಸೇರುವಂತೆ ಏ.25ರಂದು ಸಂದೇಶ ಬಂದಿತ್ತು. ಸ್ಟಾಕ್ಸ್ ಮಾರ್ಕೆಟಿಂಗ್‌ನಲ್ಲಿ ಹೂಡಿಕೆ ಮಾಡುವ ಬಗ್ಗೆ ಬುನಾದಿ ತರಬೇತಿ ನೀಡಲಿದ್ದಾರೆ ಎಂಬ ಕಾರಣಕ್ಕೆ ಅವರು ವಾಟ್ಸಾಪ್ ಗ್ರೂಪ್‌ಗೆ ಸೇರಿದ್ದರು.

ಈ ಮಧ್ಯೆ ಇಂಜಿನಿಯರ್, ಟ್ರೇಡಿಂಗ್‌ನಲ್ಲಿ ಹೂಡಿಕೆ ಮಾಡಿ ಲಾಭ ಪಡೆಯುವ ಬಗ್ಗೆ ಗ್ರೂಪ್‌ನಲ್ಲಿ ಮಾಹಿತಿ ಕೇಳಿದ್ದಾರೆ. ತಕ್ಷಣ ಟ್ರೇಡಿಂಗ್ ಅಸಿಸ್ಟೆಂಟ್ ಎಂದು ಹೇಳಿಕೊಂಡ ವ್ಯಕ್ತಿಯೊಬ್ಬ ಒಂದು ಲಿಂಕ್ ಕಳುಹಿಸಿ, ಅದರ ಮೂಲಕ ಯಾವುದೋ ಒಂದು ಟ್ರೇಡಿಂಗ್ ಆಪ್ ಡೌನ್‌ಲೋಡ್ ಮಾಡಲು ತಿಳಿಸಿ, ಅದಕ್ಕೆ ಖಾಸಗಿ ಬ್ಯಾಂಕ್ ಖಾತೆಗೆ ಹಣ ಹಾಕುವ ಮೂಲಕ ಹೂಡಿಕೆ ಮಾಡುವಂತೆ ಮಾಹಿತಿ ನೀಡಿದ್ದ.

ಅದರಂತೆ ಇಂಜಿನಿಯರ್ ಮೊದಲು 10, ನಂತರ 40 ಸಾವಿರ ಹೂಡಿಕೆ ಮಾಡಿದ್ದರಿಂದ 9 ಸಾವಿರ ರೂ. ಲಾಭ ನೀಡಿದ್ದರು. ಆ ಹಣವನ್ನು ಇಂಜಿನಿಯರ್ ತಮ್ಮ ಬೇರೊಂದು ಖಾತೆಗೆ ವರ್ಗಾವಣೆ ಮಾಡಿಕೊಂಡಿದ್ದರು. ಇದರಿಂದ ಹೆಚ್ಚು ಲಾಭ ಗಳಿಸಬಹುದು ಎಂದು ಭಾವಿಸಿ, ಹಲವು ಹಂತಗಳಲ್ಲಿ ತಮ್ಮ ಖಾತೆಯಿಂದ 79.50 ಲಕ್ಷ ರೂ. ಹಾಗೂ ತಮ್ಮ ಪುತ್ರನ ಖಾತೆಯಿಂದ 10 ಲಕ್ಷ ರೂ. ಸೇರಿ ಒಟ್ಟು 89.50 ಲಕ್ಷ ರೂ. ಹೂಡಿಕೆ ಮಾಡಿ, ಮೋಸ ಹೋಗಿದ್ದಾರೆ.

ಪ್ರಜ್ವಲ್ ರೇವಣ್ಣ ಪ್ರಕರಣ: ಎಸ್‌ಐಟಿ ತನಿಖೆ ದಿಕ್ಕು ತಪ್ಪಿದೆ

ಬೆಂಗಳೂರು, ಮೇ 12– ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣವನ್ನು ಸಮರ್ಥನೆ ಮಾಡುವ ಪ್ರಶ್ನೆಯೇ ಇಲ್ಲ. ಆದರೆ, ಪ್ರಕರಣದ ತನಿಖೆ ರೀತಿಯೇ ಸರಿ ಇಲ್ಲ. ಮಾಹಿತಿ



ಕೊಟ್ಟವರನ್ನೇ ಬಂಧನ ಮಾಡುತ್ತಿದ್ದಾರೆ. ತನಿಖೆ ದಿಕ್ಕು ತಪ್ಪುತ್ತಿದೆ ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಎಸ್‌ಐಟಿಯವರು ಅಪರಾಧಿಗಳನ್ನು ಬಂಧಿಸುತ್ತಿಲ್ಲ. ಪ್ರಕರಣದ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದರೆ, ಸಿಬಿಐಗೆ ವಹಿಸಬೇಕು' ಎಂದು ಅವರು ಭಾನುವಾರ ಸುದ್ದಿಗಾರರ ಜತೆ ಮಾತನಾಡಿ ಒತ್ತಾಯಿಸಿದರು. ಪ್ರಕರಣ ಸಂಬಂಧ ಡಿ.ಕೆ.ಶಿವಕುಮಾರ್ ಅವರ ವಿಚಾರಣೆಯೂ ಆಗಬೇಕು ಎಂಬ ಆಗ್ರಹದ ಕುರಿತ ಪ್ರಶ್ನೆಗೆ, 'ಯಾರ್‍ಯಾರ ಹೆಸರು ಕೇಳಿ ಬರುತ್ತಿದೆಯೋ ಅವರ ವಿಚಾರಣೆಯನ್ನೂ ಮಾಡಲಿ. ಆದ್ದರಿಂದಲೇ ನಾವು ಪ್ರಕರಣ ಸಿಬಿಐಗೆ ಕೊಡಲಿ ಎಂದು ಕೇಳುತ್ತಿದ್ದೇವೆ' ಎಂದರು.

ಒಂದನೇ ಪುಟದಿಂದ

ನಾನು ಕಿಡ್ನ್ಯಾಪ್ ಆಗಿಲ್ಲ

ಆಗಿರುವ ವೀಡಿಯೋ ಆಕೆಯನ್ನು ಎಸ್‌ಐಟಿ ರಕ್ಷಿಸುವ ಮುನ್ನ ರೆಕಾರ್ಡ್ ಮಾಡಿದ್ದು ಎಂದು ಹೇಳಲಾಗಿದೆ. ಹಾಗಾದರೆ ಮೊಬೈಲ್ ಫೋನ್ ಕೂಡ ಹೊಂದಿರದ ಈ ಮಹಿಳೆಯ ವೀಡಿಯೋ ರೆಕಾರ್ಡ್ ಮಾಡಿದ್ದು ಯಾರು? ಅದನ್ನು ಯಾರಿಗೆ ರವಾನಿಸಿದ್ದಾರೆ ಎಂಬುದು ಯಕ್ಷಪ್ರಶ್ನೆಯಾಗಿದೆ. ಈ ವೀಡಿಯೋ ಬಗ್ಗೆಯೂ ಕೂಡ ಎಸ್‌ಐಟಿ ತನಿಖೆ ಮಾಡುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.

ಈ ಮಧ್ಯೆ ಹುಣಸೂರಿನಲ್ಲಿರುವ ಮಹಿಳೆಯ ಸಂಬಂಧಿಕರಾದ ದಂಪತಿ ಮಾಧ್ಯಮದೊಂದಿಗೆ ಮಾತನಾಡಿ, ಸಂತ್ರಸ್ತೆಯನ್ನು ರಾಜಶೇಖರ ಅವರ ತೋಟದಲ್ಲಿ ಪೊಲೀಸರು ವಶಕ್ಕೆ ಪಡೆದಿಲ್ಲ. ನಮ್ಮ ಮನೆಯಲ್ಲಿ ವಶಕ್ಕೆ ಪಡೆದಿದ್ದಾರೆ ಎಂದು ತಿಳಿಸಿದ್ದಾರೆ. ತಮ್ಮ ಸಂಬಂಧಿಯಾದ ಸಂತ್ರಸ್ತೆ ಮೇ 4ರ ಶನಿವಾರ ಮಧ್ಯಾಹ್ನ ನಮ್ಮ ಮನೆಗೆ ಬಂದಿದ್ದಳು. ಆಕೆ ತನ್ನ ಮಗಳಿಗೆ ಕರೆ ಮಾಡಬೇಕೆಂದು ನಮ್ಮ ಮೊಬೈಲ್‌ನಿಂದಲೇ ಕರೆ ಮಾಡಿದ್ದಳು. ಸ್ವಲ್ಪ ಸಮಯದ ನಂತರ ಆಕೆಯ ಅಳಿಯಂದಿರು ನಮ್ಮ ಮನೆಗೆ ಬಂದು ಯಾರಿಗೋ ಫೋನ್ ಮಾಡಿದರು. ಕೆಲವೇ ನಿಮಿಷಗಳಲ್ಲಿ ಪೊಲೀಸರು ಬಂದು ಆಕೆಯನ್ನು ಕರೆದೊಯ್ದರು ಎಂದು ಹೇಳಿದ್ದಾರೆ. ಸಂತ್ರಸ್ತೆಯನ್ನು ಅಪಹರಣ ಮಾಡಿರುವ ಆರೋಪದಡಿ ಹೆಚ್.ಡಿ.ರೇವಣ್ಣ ಬಂಧಿಸಲ್ಪಟ್ಟಿದ್ದು, ಇದೀಗ ಆಕೆಯೇ ತನ್ನ ಅಪಹರಣವಾಗಿಲ್ಲ ಎಂದು ಹೇಳಿರುವ ವೀಡಿಯೋ ವೈರಲ್ ಆಗಿರುವುದು ಪ್ರಕರಣಕ್ಕೆ ತೀವ್ರ ತಿರುವು ನೀಡಿದೆ.

ರೇವಣ್ಣ ಜಾಮೀನು ಅರ್ಜಿ ವಿಚಾರಣೆ

ಕೆಲವೇ ನಿಮಿಷಗಳಲ್ಲಿ ಎಸ್‌ಐಟಿ ಅವರನ್ನು ಮಾಜಿ ಪ್ರಧಾನಿ ದೇವೇಗೌಡರ ಪದ್ಮನಾಭನಗರ ನಿವಾಸದಲ್ಲಿ ಬಂಧಿಸಿತ್ತು. ಇದೀಗ ರೇವಣ್ಣ ಅವರ ಜಾಮೀನು ಅರ್ಜಿ ವಿಚಾರಣೆ ಹಂತದಲ್ಲಿದ್ದು, ಸರ್ಕಾರಿ ವಿಶೇಷ ಅಭಿಯೋಜಕರು ತಾವು ಮತ್ತಷ್ಟು ವಾದ ಮಂಡಿಸಲು ಕಾಲಾವಕಾಶ ಕೇಳಿದ ಹಿನ್ನೆಲೆಯಲ್ಲಿ ನ್ಯಾಯಾಧೀಶರು ಸೋಮವಾರಕ್ಕೆ ವಿಚಾರಣೆಯನ್ನು ಮುಂದೂಡಿದ್ದರು. ನಾಳೆ ಎಸ್‌ಐಟಿ ಪರ ವಕೀಲರು ವಾದ ಮಂಡಿಸಿದ ನಂತರ ನ್ಯಾಯಾಧೀಶರು ಜಾಮೀನು ಅರ್ಜಿ ಮೇಲಿನ ಆದೇಶ ಹೊರಡಿಸಬಹುದು ಅಥವಾ ಆದೇಶವನ್ನು ಕಾಯ್ದಿರಿಸಿ ದಿನಾಂಕ ಮುಂದೂಡಬಹುದು.

ಎಸ್‌ಐಟಿ ವಿದೇಶಕ್ಕೆ ಹೋಗುವುದಿಲ್ಲ

ಅವರ ಮೂಲಕ ನಮಗೆ ತಿಳಿಯುತ್ತದೆ ಎಂದು ಹೇಳಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮುಖಂಡರ ವಿರುದ್ಧ ಆರೋಪ ಮಾಡಿರುವ ಬಿಜೆಪಿ ಮುಖಂಡ ದೇವರಾಜೇಗೌಡ ಬಂಧನದ ಹಿಂದೆ ಷಡ್ಯಂತ್ರವಿದೆ ಎಂಬ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿಕೆಗೆ ಪ್ರತಿಕ್ರಿಯಿಸಿದ ಪರಮೇಶ್ವರ್, ಯಾರಾದರೂ ಏನಾದರೂ ಹೇಳಿದರೆ ಅದಕ್ಕೆ ಪ್ರತಿಕ್ರಿಯಿಸಲಾರೆವು. ಇದು ಗಂಭೀರ ಪ್ರಕರಣವಾಗಿರುವುದರಿಂದ ತನಿಖೆ ಪೂರ್ಣಗೊಳ್ಳುವವರೆಗೆ ನಾವು ಮಾಹಿತಿಯನ್ನು ಹಂಚಿಕೊಳ್ಳಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಹೇಳಿಕೆ ನೀಡುವಾಗ ಎಚ್ಚರಿಕೆಯಿಂದಿರುವಂತೆ ಸಾರ್ವಜನಿಕರು ಮತ್ತು ನಾಯಕರಿಗೆ ನಾನು ಮನವಿ ಮಾಡುತ್ತೇನೆ. ಇಲ್ಲದಿದ್ದರೆ, ಅವರು ನೀಡಿದ ಹೇಳಿಕೆಗಳ ಆಧಾರದ ಮೇಲೆ, ನಾವು ಅವರನ್ನು ತನಿಖೆಗೆ ಕರೆದು ಸಿಆರ್‌ಪಿಸಿಯ 41ಎ ಅಡಿಯಲ್ಲಿ ಅವರ ಹೇಳಿಕೆಯನ್ನು ದಾಖಲಿಸಬೇಕಾಗಬಹುದು ಎಂದು ಅವರು ಹೇಳಿದರು. ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಅವರಿಗೂ ನೋಟಿಸ್ ನೀಡಲಾಗುವುದೇ ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವರು, ಅವರು ಮಾಜಿ ಸಿಎಂ ಆಗಿದ್ದು, ಈ ಪ್ರಕರಣವನ್ನು ಮಾಜಿ ಮುಖ್ಯಮಂತ್ರಿಗಳು ಗಂಭೀರವಾಗಿ ಪರಿಗಣಿಸಿದ್ದಾರೆ ಎಂದು ನಂಬಿದ್ದೇನೆ. ಈ ಪ್ರಕರಣದ ಕುರಿತು ಯಾವುದೇ ಹೇಳಿಕೆಗಳನ್ನು ನೀಡುವ ಮೊದಲು ಅಥವಾ ಸಾರ್ವಜನಿಕ ಡೊಮೇನ್‌ನಲ್ಲಿ ಯಾವುದೇ ಮಾಹಿತಿಯನ್ನು ಹಂಚಿಕೊಳ್ಳುವ ಮೊದಲು, ಎಲ್ಲರೂ ಜಾಗರೂಕರಾಗಿರಬೇಕು ಮತ್ತು ಇದು ಎಲ್ಲರಿಗೂ ಅನ್ವಯಿಸುತ್ತದೆ ಎಂದು ಹೇಳಿದರು.

ಶಿಕ್ಷಕರ ಕ್ಷೇತ್ರದಲ್ಲೂ ಜೆಡಿಎಸ್ ಸ್ಪರ್ಧೆ

ಹೆಚ್.ಡಿ. ಕುಮಾರಸ್ವಾಮಿಯವರು, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರೊಂದಿಗೆ ಮಾತುಕತೆ ನಡೆಸಿದ ಫಲವಾಗಿ ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಘೋಷಿಸಿದ್ದ ಅಭ್ಯರ್ಥಿ ಈ.ಸಿ. ನಿಂಗರಾಜುಗೌಡ ಅವರನ್ನು ಹಿಂಪಡೆದು ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡಲಾಗಿದೆ. ಈ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಲು ವಿಧಾನಪರಿಷತ್ ಮಾಜಿ ಸದಸ್ಯರಾದ ಎಸ್.ಎಲ್. ಬೋಜೇಗೌಡ, ಕೆ.ಟಿ. ಶ್ರೀಕಂಠೇಗೌಡ ಮತ್ತು ವಿವೇಕಾನಂದ ನಡುವೆ ತೀವ್ರ ಪೈಪೋಟಿ ಎದುರಾಗಿದೆ. ನಾಮಪತ್ರ ಸಲ್ಲಿಸಲು ಮೇ 16 ಕೊನೆ ದಿನವಾಗಿದೆ.

ಮೈಸೂರು ವೀಳ್ಯದೆಲೆ ಬಲು ದುಬಾರಿ



● ದಿಢೀರ್ ಏರಿಕೆ ಕಂಡ ವೀಳ್ಯದೆಲೆ ಬೆಲೆ ● ಅತಿಯಾದ ಉಷ್ಣಾಂಶದಿಂದ ಬೆಳೆ ಇಳುವರಿ ಕುಸಿತ ● ಕಾಂಕ್ರಿಟ್ ಕಾಡಾಗುತ್ತಿರುವ ವೀಳ್ಯದೆಲೆ ತೋಟಗಳು ● ವೀಳ್ಯದೆಲೆಗೆ ಪೌರಾಣಿಕ ಹಿನ್ನೆಲೆ ಕೂಡ ಇದೆ ● ಪೂಜೆ, ಶುಭ ಸಮಾರಂಭಗಳಿಗೆ ವೀಳ್ಯದೆಲೆ ಅತ್ಯವಶ್ಯ

ಬಾಪುಲಿಂಗರಾಜ್ ಅರಸ್

ಮೈಸೂರು, ಮೇ 12– ವೀಳ್ಯದೆಲೆ ಇಲ್ಲವೆಂದರೆ ಶುಭ ಸಮಾರಂಭಗಳು ನಡೆಯುವುದೇ ಇಲ್ಲ. ಊಟ ಮುಗಿದ ನಂತರ ವೀಳ್ಯದೆಲೆ ಅಂತು ಕೆಲವರಿಗೆ ಬೇಕೆ ಬೇಕು. ಕೆಲವರಂತೂ ಬೆಳಗ್ಗಿನಿಂದ ರಾತ್ರಿ ತನಕ ವೀಳ್ಯದೆಲೆ ಜಗಿಯುತ್ತಲೆ ಇರುತ್ತಾರೆ. ಕಡ್ಲೆಕಾಯಿ ಬಡವರ ಬಾದಾಮಿಯಂತೆ, ವೀಳ್ಯದೆಲೆ ಕೂಡ ಬಡವರ ರುಚಿದಾಯಕ ಎಲೆ. ಆದರೆ ಬಡವರು ಇಷ್ಟಪಡುವ ವೀಳ್ಯದೆಲೆ ಈಗ ದುಬಾರಿಯಾಗಿದೆ.

ಮೈಸೂರು ವೀಳ್ಯದೆಲೆಗೆ ವಿಶ್ವಮನ್ನಣೆ ಇದೆ. ಮೈಸೂರಿನ ಹೆಸರಾಂತ ವಸ್ತುಗಳ ಪೈಕಿ ವೀಳ್ಯದೆಲೆಗೆ ಅಗ್ರಸ್ಥಾನವಿದೆ. ದೇಶದಲ್ಲಿ ಸುಮಾರು 50 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ವೀಳ್ಯದೆಲೆ ಬೆಳೆಯಲಾಗುತ್ತದೆ.

ಮಧ್ಯಪ್ರದೇಶ, ಮಹಾರಾಷ್ಟ್ರ, ಆಂಧ್ರಪ್ರದೇಶ, ಒಡಿಶಾ, ಬಿಹಾರ, ಹಾಗೂ ಪಶ್ಚಿಮ ಬಂಗಾಳದಲ್ಲೂ ವೀಳ್ಯದೆಲೆ ಬೆಳೆದರೂ ಅಷ್ಟಾಗಿ ಇಳುವರಿ ಇರುವುದಿಲ್ಲ. ಆದರೆ ಕರ್ನಾಟಕದ ಒಟ್ಟಾರೆ ವೀಳ್ಯದೆಲೆ ಬೆಳೆಯಲ್ಲಿ ಶೇಕಡ 75 ರಷ್ಟು ವೀಳ್ಯದೆಲೆ ಮೈಸೂರು ಪಾಲು ಇದೆ.

ಆದರೆ ಇತ್ತೀಚೆಗೆ ವೀಳ್ಯದೆಲೆ ಬೆಲೆ ದುಬಾರಿಯಾಗಿದೆ. ಅದರಲ್ಲೂ ಮೈಸೂರು ವೀಳ್ಯದೆಲೆ ಬೆಲೆಯಂತೂ ಏರಿಕೆಯಾಗಿದೆ. ಮೈಸೂರಿನಲ್ಲಿ ತಾಂಬೂಲದ ಎಲೆ, ಬಿಳಿ ಎಲೆ ಹಾಗೂ ಚಿಗುರೆಲೆಯನ್ನು ಬೆಳೆಯಲಾಗುತ್ತದೆ.

ಒಂದು ಕಟ್ಟಲ್ಲಿ 200 ಎಲೆಗಳಿರುತ್ತವೆ. ಈ ಮೊದಲು ಒಂದು ಕಟ್ಟಿಗೆ 100ರಿಂದ 120 ರೂಪಾಯಿ ಇದ್ದ ಮೈಸೂರಿನ ತಾಂಬೂಲದ ಎಲೆ ಈಗ 150 ರಿಂದ 200 ರೂಪಾಯಿಗೆ ಏರಿಕೆಯಾಗಿದೆ.

ಮೈಸೂರು ಬಿಳಿ ಎಲೆ ಈ ಮೊದಲು ಒಂದು ಕಟ್ಟಿಗೆ 150ರಿಂದ 200 ರೂಪಾಯಿಗೆ ಸಿಗುತ್ತಿತ್ತು. ಆದರೆ ಈಗ 300 ರಿಂದ 350 ರೂಪಾಯಿಗೆ ಹೆಚ್ಚಳವಾಗಿದೆ.

ಇನ್ನು ಮೈಸೂರು ಚಿಗುರೆಲೆ ಬೆಲೆ ಕೂಡ ದುಬಾರಿಯಾಗಿದೆ. 200ರಿಂದ 250 ರೂಪಾಯಿಗೆ ಸಿಗುತ್ತಿದ್ದ ಚಿಗುರೆಲೆ ಈಗ 350ರಿಂದ 400 ರೂಪಾಯಿ ತನಕ ಮಾರಾಟವಾಗುತ್ತಿದೆ.

ಮೈಸೂರು ನಗರ, ನಂಜನಗೂಡು ಹಾಗೂ ಉದ್ಬೂರಿನಲ್ಲಿ ಹೆಚ್ಚಾಗಿ ವೀಳ್ಯದೆಲೆ ಬೆಳೆಯಲಾಗುತ್ತದೆ. ಇದರಲ್ಲಿ ಉದ್ಬೂರಿನಲ್ಲಿ ತಾಂಬೂಲದ ಎಲೆ ಮಾತ್ರ ಬೆಳೆಯಲಾಗುತ್ತಿದೆ.

ವೀಳ್ಯದೆಲೆ ಬೆಲೆ ದುಬಾರಿಯಾಗಲು ಹಲವು ಕಾರಣಗಳಿವೆ. ಮೈಸೂರಿನ ಹಳೆ ಅಗ್ರಹಾರದ



ಪೂರ್ಣಯ್ಯ ಛತ್ರದಿಂದ ಜೆ.ಪಿ.ನಗರ ಮುಂದಿನ ನಂಜನಗೂಡು ರಸ್ತೆ ಸಂಪರ್ಕಿಸುವ ತನಕ ನೂರಾರು ಎಕರೆಯಲ್ಲಿ ವೀಳ್ಯದೆಲೆ ಬೆಳೆಯಲಾಗುತ್ತಿತ್ತು. ಆದರೆ ಈಗ ವೀಳ್ಯದೆಲೆ ಬೆಳೆಯುತ್ತಿದ್ದ ಶೇಕಡ 25 ರಷ್ಟು ತೋಟಗಳು ಬಡಾವಣೆಗಳಾಗಿ ಮಾರ್ಪಟ್ಟಿವೆ.

ಅಡಿಕೆ ಹಾಗೂ ವೀಳ್ಯದೆಲೆ ಬೆಳೆಯಿಂದ ಹಸಿರಾಗಿ ಕಂಗೊಳಿಸುತ್ತಿದ್ದ ಭೂಮಿಯಲ್ಲಿ ಈಗ ಸಾವಿರಾರು ಮನೆಗಳು ತಲೆಎತ್ತಿವೆ. ಹಸಿರು ತೋಟಗಳು ಈಗ ಕಾಂಕ್ರಿಟ್ ಕಾಡಾಗಿದೆ. ಇದರಿಂದ ವೀಳ್ಯದೆಲೆ ಬೆಳೆಯ ಇಳುವರಿಯಲ್ಲಿ ಖೋತಾ ಆಗಿದೆ.


ಬೂಷ್ಟು ರೋಗ, ಎಲೆಚುಕ್ಕೆ ರೋಗ ಸೇರಿದಂತೆ ಇತರೆ ರೋಗಗಳಿಂದ ವೀಳ್ಯದೆಲೆ ಬೆಳೆಯ ಇಳುವರಿ ಕಡಿಮೆಯಾಗಿದೆ. ಹವಾಮಾನ ವೈಪರೀತ್ಯ, ಬರಗಾಲ ವೀಳ್ಯದೆಲೆ ಬೆಲೆ ಇಳವರಿ ಕಡಿಮೆಯಾಗಲು ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. ವೀಳ್ಯದೆಲೆ ಬೆಳೆಗೆ 30ರಿಂದ 36 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವಿರಬೇಕು. ಆದರೆ ಕಳೆದ ವರ್ಷದ ಬರಗಾಲ ಹಾಗೂ ಈ ಬಾರಿಯ ಮಿತಿ ಮೀರಿದ ಬೇಸಿಗೆ ಬಿಸಿಲಿನ 40 ಡಿಗ್ರಿ ಸೆಲ್ಸಿಯಸ್ ಮೀರಿದ ತಾಪಮಾನದಿಂದ ವೀಳ್ಯದೆಲೆ ಬೆಳೆ ಇಳುವರಿ ಕಡಿಮೆಯಾಗಿದೆ.

ಕಾರ್ಮಿಕರ ಸಮಸ್ಯೆ ಕೂಡ ವೀಳ್ಯದೆಲೆ ಬೆಳೆ ಇಳುವರಿ ಕಡಿಮೆಯಾಗಲು ಮತ್ತೊಂದು ಕಾರಣವಾಗಿದೆ. ವೀಳ್ಯದೆಲೆ ಬೆಳೆ ಬೆಳೆಯಲು ನುರಿತ ಕೆಲಸಗಾರರು ಅತ್ಯವಶ್ಯ. ಯಾವುದೇ ಯಂತ್ರಗಳ ಬಳಕೆ ಸಾಧ್ಯವಾಗದ ಕಾರಣ ಮರಕ್ಕೆ ಹತ್ತಿ ವೀಳ್ಯದೆಲೆ ಕೀಳಬೇಕು. ಆದರೆ ಇತ್ತೀಚೆಗೆ ನುರಿತ ಕೆಲಸಗಾರರ ಕೊರತೆಯ ಕಾರಣ ವೀಳ್ಯದೆಲೆ ಬೆಳೆ ಹೆಚ್ಚಾಗಿ ಬೆಳೆಯಲು ಸಾಧ್ಯವಾಗುತ್ತಿಲ್ಲ.

ಹೃದಯ ಆಕಾರದ ವೀಳ್ಯದೆಲೆ ನೋಡಲು ಸುಂದರವಾಗಿರುತ್ತದೆ. ಊಟದ ನಂತರ ಅಡಿಕೆಯೊಂದಿಗೆ ಜಗಿದರೆ ಜೀರ್ಣಶಕ್ತಿ ಹೆಚ್ಚಿಸುತ್ತದೆ. ಜೊತೆಗೆ ರೋಗ ನಿರೋಧಕ ಶಕ್ತಿ ಇದೆ. ವೀಳ್ಯದೆಲೆಯಲ್ಲಿ ಬಹಳಷ್ಟು ಪೋಷಕಾಂಶ ಕೂಡ ಇದೆ. ಸಾಂಪ್ರದಾಯಿಕವಾಗಿ ಗೌರವ ಮತ್ತು ಮಂಗಳಕರ ಸಂಕೇತವಾಗಿ ವೀಳ್ಯದೆಲೆ ನೀಡಲಾಗುತ್ತದೆ.

ಅದರಲ್ಲೂ ಹಿಂದೂಗಳ ಹಬ್ಬ, ಧಾರ್ಮಿಕ ಕಾರ್ಯಗಳಲ್ಲಿ ವೀಳ್ಯದೆಲೆ ಬೇಕೆ ಬೇಕು. ಪೂಜೆಯ ಸಮಯದಲ್ಲಿ ದೇವರಿಗೆ ಮಂಗಳಕರ ವಸ್ತುವಾಗಿ ವೀಳ್ಯದೆಲೆ ಬಳಸಲಾಗುತ್ತದೆ. ಅನಾದಿ ಕಾಲದಿಂದಲೂ ವೀಳ್ಯದೆಲೆ ಭಾರತೀಯರ ಸಂಸ್ಕೃತಿಯ ಸಂಕೇತವಾಗಿದೆ.

ವೀಳ್ಯದೆಲೆಗೆ ಪೌರಾಣಿಕ ಹಿನ್ನೆಲೆ ಕೂಡ ಇದೆ.



ವೀಳ್ಯದೆಲೆ ತೋಟಗಳನ್ನು ಕಡಿದು ಹೊಸ ಬಡಾವಣೆ ಮಾಡದಂತೆ ಸರ್ಕಾರವೇ ವೀಳ್ಯದೆಲೆ ಬೆಳೆಗಾರರನ್ನು ಮನವೊಲಿಸಬೇಕು. ಜೊತೆಗೆ ವೀಳ್ಯದೆಲೆ ಬೆಳೆಗಾರರಿಗೆ ಎದುರಾಗಿರುವ ಕೆಲವು ಸಮಸ್ಯೆಗಳನ್ನು ಪರಿಹಾರ ಮಾಡಬೇಕು. ವೀಳ್ಯದೆಲೆ ಬೆಳೆಗಾರರ ಬೇಡಿಕೆ ಈಡೇರಿಸಿ ವೀಳ್ಯದೆಲೆ ಬೆಳೆಯನ್ನು ಉತ್ತೇಜಿಸಬೇಕು.

ಇಲ್ಲದಿದ್ದರೆ ವರ್ಷಗಳು ಕಳೆದಂತೆ ವೀಳ್ಯದೆಲೆ ತೋಟಗಳು ಮಾಯವಾಗಿ ಬಡಾವಣೆಗಳಾಗಿ ನಿರ್ಮಾಣವಾಗುತ್ತದೆ. ಇದರಿಂದ ಮುಂದೊಂದು ದಿನ ಮಕ್ಕಳಿಗೆ ವೀಳ್ಯದೆಲೆ ಹೇಗಿರುತ್ತದೆ ಎಂಬುವುದನ್ನು ಚಿತ್ರದಲ್ಲಿ ತೋರಿಸಬೇಕಾದ ಪರಿಸ್ಥಿತಿ ಬರುತ್ತದೆ.

ಸ್ಕಂದ ಪುರಾಣದಲ್ಲಿ ಉಲ್ಲೇಖಿಸಿರುವಂತೆ ದೇವತೆಗಳು ಹಾಗೂ ಅಸುರರ ನಡುವೆ ಸಮುದ್ರ ಮಂಥನವಾಗುವ ಸಮಯದಲ್ಲಿ ವೀಳ್ಯದೆಲೆ ಸಮುದ್ರದ ಆಳದಿಂದ ಬಂದಿತು ಎಂಬ ವಿವರವಿದೆ. ಇದರಿಂದ ಹಿಂದೂ ಧರ್ಮೀಯರು ವೀಳ್ಯದೆಲೆಯನ್ನು ಪವಿತ್ರವೆಂದು ಪರಿಗಣಿಸುತ್ತಾರೆ.

ಈ ಮೊದಲು ವೀಳ್ಯದೆಲೆ ಬೆಲೆ ಬಹಳ ಕಡಿಮೆ ಇತ್ತು. ಪೈಸೆ ಲೆಕ್ಕದಲ್ಲಿ ವೀಳ್ಯದೆಲೆ ಸಿಗುತ್ತಿತ್ತು. ಆದರೆ ಇಂದು ಒಂದು ವೀಳ್ಯದೆಲೆ 2 ರೂಪಾಯಿಗೆ ಏರಿಕೆಯಾಗಿದೆ. ಬಡವರು ಅದರಲ್ಲೂ ವೃದ್ಧರೂ ಇಷ್ಟಪಟ್ಟು ಜಗಿಯುತ್ತಿದ್ದ ವೀಳ್ಯದೆಲೆ ಈಗ ಕೈಗೆಟಕದಂತಾಗಿದೆ. ಮೈಸೂರು ವೀಳ್ಯದೆಲೆ ರುಚಿ ಬೇರೆ ರಾಜ್ಯದ ವೀಳ್ಯದೆಲೆಯಲ್ಲಿ ಇರುವುದಿಲ್ಲ. ಆದ ಕಾರಣ ಮೈಸೂರು ವೀಳ್ಯದೆಲೆಗೆ ಭಾರೀ ಬೇಡಿಕೆ. ಕಪ್ಪು ಜೇಡಿ ಮಣ್ಣಿನಲ್ಲಿ ಬೆಳೆಯುವ ಮೈಸೂರು ವೀಳ್ಯದೆಲೆಗೆ ವಿಶೇಷ ಗುಣಲಕ್ಷಣಗಳಿವೆ.

ಈ ಹಿನ್ನೆಲೆ ವಿಶ್ವ ಪ್ರಸಿದ್ಧಿ ಪಡೆದಿರುವ ಮೈಸೂರು ವೀಳ್ಯದೆಲೆಗೆ ಕರ್ನಾಟಕ ಸರ್ಕಾರದ ತೋಟಗಾರಿಕೆ ಇಲಾಖೆಯ ಪೇಟೆಂಟ್ ಕೂಡ ಪಡೆದಿದೆ. ಇಂತಹ ವಿಶಿಷ್ಟ ಗುಣಲಕ್ಷಣ ಹೊಂದಿರುವ ಮೈಸೂರು ವೀಳ್ಯದೆಲೆ ಬೆಳೆಯನ್ನು ಸಂರಕ್ಷಿಸಬೇಕು.

ಜಿಲ್ಲಾ ಬ್ರಾಹ್ಮಣ ಸಂಘದಿಂದ ಶಂಕರಾಚಾರ್ಯರು, ರಾಮಾನುಜಾಚಾರ್ಯರ ಜಯಂತಿ ಆಚರಣೆ



ಮೈಸೂರು ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ಶಂಕರಾಚಾರ್ಯರು ಹಾಗೂ ರಾಮಾನುಜಾಚಾರ್ಯರ ಜಯಂತಿ ಆಚರಿಸಲಾಯಿತು.

ಮೈಸೂರು, ಮೇ 12(ಎಂಕೆ)– ಮೈಸೂರು ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ಶಂಕರಾಚಾರ್ಯರು ಹಾಗೂ ರಾಮಾನುಜಾಚಾರ್ಯರ ಜಯಂತಿ ಆಚರಿಸಲಾಯಿತು.

ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀ ರಾಮಮಂದಿರದಲ್ಲಿ ಮೈಸೂರು ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಆಚಾರ್ಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಭಾರತೀಯ ಪ್ರಜ್ಞಾ ಪರಂಪರೆಯಲ್ಲಿ ಶಿಖರಪ್ರಾಯವಾಗಿ ಕಾಣಿಸಿಕೊಂಡ ಆಚಾರ್ಯ ಶಂಕರರು, ಭಾರತೀಯ ಚಿಂತನೆಯ ಮೂಲವೆನಿಸಿರುವ ವೇದಗಳ ಸಾರವನ್ನು ಪ್ರತಿಪಾದಿಸಿದ್ದಾರೆ. ಜ್ಞಾನವೇ ಆತ್ಮಜ್ಞಾನ, ಬ್ರಹ್ಮಜ್ಞಾನ ಎಂಬುದರ ಸಾರವನ್ನು ತಿಳಿಸಿದ್ದಾರೆ. ಜಾತಿ, ಮತ, ವರ್ಗ, ಲಿಂಗಭೇದವಿಲ್ಲದೆ ಎಲ್ಲರೂ ಮುಕ್ತಿ ಮಾರ್ಗದಲ್ಲಿ ಸಾಗಬೇಕೆಂಬುದನ್ನು ಸಾರಿದವರು. ಕರ್ನಾಟಕಕ್ಕೂ ಆಗಮಿಸಿ ಸುಮಾರು 32 ವರ್ಷ ಈ ನಾಡಿನಾದ್ಯಂತ ಸಂಚರಿಸಿ ಭಕ್ತಿಯನ್ನು ಎಲ್ಲಾ ವರ್ಗದವರಿಗೂ ಪರಿಚಯಿಸಿದ ಸಂತರು ಎಂದು ತಿಳಿಸಿದರು.

ಬ್ರಾಹ್ಮಣ ಸಮುದಾಯ ಸದಾ ಒಗ್ಗಟ್ಟಿನಿಂದ ಆಚಾರ್ಯರ ಜಯಂತಿ ಆಚರಣೆ ಮಾಡಬೇಕು. ಜಯಂತಿ ಆಚರಣೆಗಳ ಮೂಲಕ ಎಲ್ಲರನ್ನೂ ಒಂದುಗೂಡಿಸುವ ಜವಾಬ್ದಾರಿ ಸಮುದಾಯದ ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದರು. ಅರ್ಚಕರ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ, ಗ್ರಾಮಾಂತರ ಅಧ್ಯಕ್ಷ ಗೋಪಾಲ್ ರಾವ್, ಓಂ ಶ್ರೀನಿವಾಸ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ಕಡಕೊಳ ಜಗದೀಶ್, ಕರ್ನಾಟಕ ಬ್ರಾಹ್ಮಣ ಸಂಘದ ಕಾರ್ಯದರ್ಶಿ ಮಹೇಶ್ ಕುಮಾರ್, ಮುಖಂಡರಾದ ಸಚಿಂದ್ರ, ನಾಗಶ್ರೀ, ಮಂಜುನಾಥ್ ಮತ್ತಿತರರಿದ್ದರು.



ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ವಿಧಾನ ಪರಿಷತ್ತಿನ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಅವರಿಗೆ ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬಿ ಫಾರಂ ನೀಡಿದರು. ಈ ವೇಳೆ ಶಿಕ್ಷಣ ಸಚಿವ ಮಧು ಬಂಗಾರಪ್ಪ, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮತ್ತಿತರರು ಹಾಜರಿದ್ದರು.

ಆರ್.ನಂದಿತಾಗೆ ಉತ್ತಮ ಫಲಿತಾಂಶ



ಮೈಸೂರು: ಮೈಸೂರಿನ ಗಂಗೋತ್ರಿ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಆರ್.ನಂದಿತಾ ಎಸ್ಸೆಸ್ಸೆಲ್ಸಿ ಪರೀಕ್ಷೆ ಯಲ್ಲಿ 557 (ಶೇ.90) ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಇಂಗ್ಲಿಷ್‌ನಲ್ಲಿ 117, ಕನ್ನಡದಲ್ಲಿ 96, ಹಿಂದಿ 86, ಗಣಿತ 71, ವಿಜ್ಞಾನ 92 ಹಾಗೂ ಸಮಾಜ ವಿಜ್ಞಾನದಲ್ಲಿ 95 ಅಂಕಗಳನ್ನು ಗಳಿಸಿದ್ದಾಳೆ. ಈಕೆ ಜನತಾನಗರ ನಿವಾಸಿ ಆರ್.ರಘು, ಲಕ್ಷ್ಮೀ ದಂಪತಿ ಪುತ್ರಿ.

ಭೀಕರ ರಸ್ತೆ ಅಪಘಾತದಲ್ಲಿ ಮಂಡ್ಯ ನಟಿ ಪವಿತ್ರಾ ಜಯರಾಮ್ ದುರ್ಮರಣ

ಬೆಂಗಳೂರು, ಮೇ 12– ಕಿರುತೆರೆ ಕ್ಷೇತ್ರದಲ್ಲಿ ಹೆಸರು ಮಾಡಿದ್ದ ನಟಿ ಪವಿತ್ರಾ ಜಯರಾಮ್ (35) ರಸ್ತೆ ಅಪಘಾತದಲ್ಲಿ ನಿಧನರಾಗಿದ್ದಾರೆ.



ತೆಲುಗಿನ ತ್ರಿನಯಿನಿ ಸೀರಿಯಲ್‌ನಿಂದಲೇ ಹೆಚ್ಚು ಜನಪ್ರಿಯತೆ ಪಡೆದಿದ್ದ ಪವಿತ್ರಾ, ಮೂಲತಃ ಮಂಡ್ಯ ತಾಲೂಕಿನ ಹನಕೆರೆಯವರು.

ಆಂಧ್ರದ ಮಹೆಬೂಬ್‌ನಗರ ಜಿಲ್ಲೆಯ ಭೂತ್‌ಪುರ ಪುರಸಭೆ ವ್ಯಾಪ್ತಿಯ ಶೇರಿಪಲ್ಲಿ (ಬಿ) ಗ್ರಾಮದ ಬಳಿ, ಪವಿತ್ರಾ ಚಲಿಸುತ್ತಿದ್ದ ಕಾರು ನಿಯಂತ್ರಣ ತಪ್ಪಿ ಡಿವೈಡರ್‌ಗೆ ಡಿಕ್ಕಿ ಹೊಡೆದಿದೆ. ಬಳಿಕ ಹೈದರಾಬಾದ್‌ನಿಂದ ವನಪರ್ತಿಗೆ ಬರುತ್ತಿದ್ದ ಬಸ್ ಕಾರಿನ ಬಲಭಾಗಕ್ಕೆ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಪವಿತ್ರಾ ಜಯರಾಮ್ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮಂಡ್ಯದ ಹನಕೆರೆಗೆ ಹಿಂದಿರುಗುತ್ತಿದ್ದಾಗ ಈ ಅಪಘಾತ ಸಂಭವಿಸಿದೆ ಎಂದು ವರದಿಗಳು ತಿಳಿಸಿವೆ. ಪವಿತ್ರಾ ಜಯರಾಮ್ ತೆಲುಗಿನ ತ್ರಿನಯನಿ ಸೀರಿಯಲ್‌ನಲ್ಲಿ ನಟಿಸುತ್ತಿದ್ದರು. ಈ ಧಾರಾವಾಹಿ ಕನ್ನಡಕ್ಕೆ ಡಬ್ ಆಗಿ ಜೀ ಕನ್ನಡದಲ್ಲೂ ಪ್ರಸಾರವಾಗುತ್ತಿದೆ. ಧಾರಾವಾಹಿಗೂ ಮುನ್ನ ಕನ್ನಡದ ಕೆಲವು ಧಾರಾವಾಹಿಗಳಲ್ಲೂ ಪವಿತ್ರ ಬಣ್ಣ ಹಚ್ಚಿದ್ದರು. ಜೋಕಾಲಿ, ರೋಬೋ ಫ್ಯಾಮಿಲಿ, ರಾಧಾ ರಮಣ, ನೀಲಿ ಸೀರಿಯಲ್‌ನಲ್ಲೂ ನಟಿಸಿದ್ದರು. ಇದೀಗ ಅಪಘಾತದಲ್ಲಿ ನಟಿ ಕಣ್ಮುಚ್ಚಿದ್ದಾರೆ.

ನೇಹಾ ಹತ್ಯೆ : ಚಾರ್ಜ್‌ಶೀಟ್ ಸಲ್ಲಿಸಲು ಸಿಐಡಿ ತಯಾರಿ

ಹುಬ್ಬಳ್ಳಿ, ಮೇ 12– ಇಲ್ಲಿನ ಬಿವಿಬಿ ಕಾಲೇಜಿನಲ್ಲಿ ನಡೆದಿದ್ದ ವಿದ್ಯಾರ್ಥಿನಿ ನೇಹಾ ಹತ್ಯೆ ಪ್ರಕರಣದ ಚಾರ್ಜ್‌ಶೀಟ್ ಸಲ್ಲಿಸಲು ಸಿಐಡಿ ತಂಡ ತಯಾರಿ ನಡೆಸಿದೆ. ಇನ್ನು ಒಂದು ವಾರದಲ್ಲಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ಕಳೆದ ಏಪ್ರಿಲ್ 18 ರಂದು ಹುಬ್ಬಳ್ಳಿ ನಗರ ಪಾಲಿಕೆ ಕಾಂಗ್ರೆಸ್ ಸದಸ್ಯ ನಿರಂಜನ್ ಹಿರೇಮಠ ಅವರ ಪುತ್ರಿ ನೇಹಾಳ ಭೀಕರ ಕೊಲೆಯಾಗಿತ್ತು. ಬಳಿಕ ನಿರಂಜನ್ ಅವರು ಈ ಪ್ರಕರಣದಲ್ಲಿ ಹಂತಕ ಫಯಾಜ್ ಅಷ್ಟೇ ಅಲ್ಲ ಇನ್ನೂ ಕೆಲವರು ಶಾಮೀಲಾಗಿದ್ದಾರೆ ಎಂದು ಆರೋಪ ಮಾಡಿದ್ದರು. ಅಲ್ಲದೇ ಲವ್ ಜಿಹಾದ್ ಇರಬಹುದು ಎಂದು ಸಂಶಯ ವ್ಯಕ್ತಪಡಿಸಿದ್ದರು.

ಭಗವದ್ಗೀತೆಯ ಅಂತರಾರ್ಥ ತಿಳಿಸಿದ ಮಹಾನುಭಾವ ಶಂಕರಾಚಾರ್ಯರು

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ

ಮೈಸೂರು,ಮೇ 12(ಪಿಎಂ)– ಸನಾತನ ಧರ್ಮದ ರಕ್ಷಣೆಗಾಗಿ ನಾಲ್ಕು ಬಾರಿ ಭಾರತದಲ್ಲಿ ಯಾತ್ರೆ ಕೈಗೊಂಡ ಶ್ರೀ ಶಂಕರಾಚಾರ್ಯರು, ಭಗವದ್ಗೀತೆಯ ಅಂತರಾರ್ಥ ತಿಳಿಸಿಕೊಡುವಲ್ಲಿ ಮಹತ್ವದ ಪಾತ್ರ ವಹಿಸಿದ ಮಹಾನುಭಾವರು ಎಂದು ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀದತ್ತ ವಿಜಯಾನಂದತೀರ್ಥ ಸ್ವಾಮೀಜಿ ಸ್ಮರಿಸಿದರು.

ರಾಮಕೃಷ್ಣ–ಶಾರದಾದೇವಿ ವಿಪ್ರ ವೃಂದದ ವತಿಯಿಂದ ಶಂಕರಾಚಾರ್ಯರ ಜಯಂತಿ ಪ್ರಯುಕ್ತ ಭಾನುವಾರ ಹಮ್ಮಿಕೊಂಡಿದ್ದ ಶಂಕರಾಚಾರ್ಯರ ಫೋಟೋ ಹಾಗೂ ವಿಗ್ರಹ ಮೆರವಣಿಗೆಗೆ ಮೈಸೂರಿನ ಶ್ರೀರಾಮಕೃಷ್ಣ ಪರಮಹಂಸ ವೃತ್ತದಲ್ಲಿ ಶಂಕರಾಚಾರ್ಯರ ವಿಗ್ರಹಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಶಂಕರಾಚಾರ್ಯರು ಅವತರಿಸಿ ಬಂದು ಭಾರತ ದೇಶದಲ್ಲಿ ಸನಾತನ ಧರ್ಮದ ರಕ್ಷಣೆ ಮಾಡಿದರು. ನಾವು ಊಹಿಸಲು ಸಾಧ್ಯವಿಲ್ಲದಂತಹ ಆಕ್ರಮಣಗಳು ಆಗುತ್ತಿದ್ದಾಗ ನಮ್ಮ ಸನಾತನ ಧರ್ಮದ ಉಳಿವಿಗೆ 4 ಬಾರಿ ಇಡೀ ಭಾರತದಲ್ಲಿ ಯಾತ್ರೆ ಕೈಗೊಂಡ ಮಹಾತ್ಮರು ಶಂಕರಾಚಾರ್ಯರು. ನಮಗಾಗಿ ಭಾರತದಲ್ಲಿ ಪಾದಯಾತ್ರೆ ಮಾಡಿದ ಶಂಕರಾಚಾರ್ಯರ ಸ್ಮರಣೆಯಲ್ಲಿ ಒಂದಿಷ್ಟು ದೂರ ಮೆರವಣಿಗೆಯಲ್ಲಿ ನಡೆಯುವುದೇನು ದೊಡ್ಡದಲ್ಲ ಎಂದು ಹೇಳಿದರು.

ಸನಾತನ ಧರ್ಮಕ್ಕಾಗಿ ಅವತರಿಸಿದ ಶಂಕರಾಚಾರ್ಯರು,



ಮೈಸೂರಿನ ಶ್ರೀರಾಮಕೃಷ್ಣ ಪರಮಹಂಸ ವೃತ್ತದಲ್ಲಿ ಶ್ರೀದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರು ಶಂಕರಾಚಾರ್ಯರ ವಿಗ್ರಹಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಎಲ್ಲಾ ಪಾಷಂಡರನ್ನು (ನಾಸ್ತಿಕರು) ತಮ್ಮ ಮಾತುಗಳು ಹಾಗೂ ನಡೆ ನುಡಿಯಿಂದ ಮಣಿಸಿದರು. ಓಡಿ ಹೋಗಿ ಎಂದು ಹೇಳದೇ ಅವರನ್ನು ಓಡಿಸಿದ ಮಹಾನುಭಾವರು. ಶಾಂತಿಯನ್ನೇ ತಮ್ಮ ಆಯುಧ ಮಾಡಿಕೊಂಡು ಧರ್ಮದ ರಕ್ಷಣೆ ಮಾಡಿದರು ಎಂದರು.

ಶಂಕರಾಚಾರ್ಯರಿಂದಲೇ ನಮಗೆ ಇಂದು ಭಗವದ್ಗೀತೆ ಸಿಕ್ಕಿದೆ ಎಂದು ಹೇಳಬಹುದು. ಅಲ್ಲಿಯವರೆಗೂ ಬೇರೆ ಬೇರೆ ತರದ ವ್ಯಾಖ್ಯಾನಗಳ ಮೂಲಕ ಭಗವದ್ಗೀತೆಗೆ ಅಪಾರ್ಥ ಕೊಡುವುದೂ ನಡೆಯುತ್ತಿತ್ತು. ಇಂತಹ ಸನ್ನಿವೇಶದಲ್ಲಿ ಸರಿಯಾದ ಅದರ ಅಂತರಾರ್ಥ ಮತ್ತು ರಹಸ್ಯಾರ್ಥವನ್ನು ಹೇಳಿಕೊಟ್ಟರು. ಹಾಗಾಗಿ ಅವರನ್ನು ಎಂದಿಗೂ ಮರೆಯಬಾರದು ಎಂದು ತಿಳಿಸಿದರು.

ಇಂದು ರಾಮಾನುಜಾಚಾರ್ಯರು ಜಯಂತಿಯನ್ನೂ ಆಚರಿಸುತ್ತಿರುವುದು ಬಹಳ ವಿಶೇಷ. ಅವರಿಬ್ಬರು ಯಾವತ್ತೂ ಒಂದೇ. ಶಿವ ಮತ್ತು ವಿಷ್ಣು ಅವರ ಸ್ವರೂಪಗಳೇ ಶಂಕರಾಚಾರ್ಯ ಹಾಗೂ ರಾಮಾನುಜಾಚಾರ್ಯರು. ಎಲ್ಲರೂ ಒಟ್ಟಾಗಿ ಎಲ್ಲಾ ಹಿಂದೂ ಬಂಧುಗಳನ್ನು ಒಂದಾಗಿಸಿ ಸನಾತನ ಧರ್ಮದ ರಕ್ಷಣೆ ಮಾಡಬೇಕಿದೆ. ಅದೇ ನಿಟ್ಟಿನಲ್ಲಿ ಶಂಕರ ಜಯಂತಿ ಮೆರವಣಿಗೆ ಹಮ್ಮಿಕೊಂಡಿರುವುದು ಸಂತಸ ಉಂಟು ಮಾಡಿದೆ. ಇದೇ ಮೊದಲ ಬಾರಿಗೆ ಹಮ್ಮಿಕೊಂಡಿರುವ ಈ ಮೆರವಣಿಗೆ ಪ್ರತಿವರ್ಷ ನಿಲ್ಲದೇ ನಡೆಯುವಂತಾಗಬೇಕು. ಮೆರವಣಿಗೆ ವೇಳೆ ಮಳೆಯಾಗಿದ್ದು, ಇದು ಮಳೆಯಲ್ಲ, ದೇವತೆಗಳು ಸುರಿಸಿದ ಪುಷ್ಪವೃಷ್ಟಿಯೇ ಸರಿ ಎಂದು ಬಣ್ಣಿಸಿದರು.

ರಾಮಕೃಷ್ಣನಗರದ ಐ ಬ್ಲಾಕ್‌ನ ಗಣಪತಿ ದೇವಸ್ಥಾನದ ರಸ್ತೆ ಸೇರಿದಂತೆ ವಿವಿಧ ರಸ್ತೆಗಳಲ್ಲಿ ಸಾಗಿದ ಮೆರವಣಿಗೆಯು ಶಾರದಾದೇವಿನಗರದ ನವೋವನದ ಬಳಿ ಮುಕ್ತಾಯಗೊಂಡಿತು. ಎಂಐಟಿ ಕಾಲೇಜು ಮುಖ್ಯಸ್ಥ ಮುರಳಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ವಿಜಯನಗರದ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಕಾರ್ಯದರ್ಶಿ ಎನ್.ಶ್ರೀನಿವಾಸನ್, ಸಮಾಜ ಸೇವಕ ಡಾ.ಕೆರಘುರಾಂ ವಾಜಪೇಯಿ, ಸುಯೋಗ್ ಆಸ್ಪತ್ರೆಯ ಮುಖ್ಯಸ್ಥ ಡಾ.ಎಸ್.ಪಿ.ಯೋಗಣ್ಣ, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಶ್ರೀರಾಮಚಂದ್ರಾಪುರ ಮಠದ ಅಧ್ಯಕ್ಷ ಜಿ.ಆರ್.ಮೋಹನ್, ಮುಖಂಡರಾದ ಗೋಪಾಲ್ ರಾವ್, ಶ್ರೀಧರಶರ್ಮ, ರಾಕೇಶ್ ಭಟ್, ಎಂ.ವಿ.ನಾಗೇಂದ್ರ ಬಾಬು, ಹಿರಿಯಣ್ಣ, ಅಜಯ್‌ಶಾಸ್ತ್ರಿ, ವಿಕ್ರಂ ಅಯ್ಯಂಗಾರ್ ಮತ್ತಿತರರು ಹಾಜರಿದ್ದರು.

ಕೋಟೆಯಲ್ಲಿ ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ

ಜೀವ ರಕ್ಷಣೆ ಶುಶ್ರೂಷಕರಿಂದ ಮಾತ್ರ ಸಾಧ್ಯ: ಶುಶ್ರೂಷಕ ಸಂಘದ ಜಿಲ್ಲಾಧ್ಯಕ್ಷ ಪ್ರಶಾಂತ್ ಗಂಗೊಳ್ಳಿ

ಹೆಚ್.ಡಿ.ಕೋಟೆ, ಮೇ 12– ಒಬ್ಬ ರೋಗಿಯನ್ನು ಸಂಬಂಧಿಕರಂತೆ ನೋಡಿಕೊಂಡು ಅವರನ್ನು ಗುಣಮುಖರನ್ನಾಗಿ ಮಾಡುವವರು ಯಾರಾದರೂ ಇದ್ದರೆ ಶುಶ್ರೂಷಕರು ಮಾತ್ರ ಎಂದು ಶುಶ್ರೂಷಕ ಸಂಘದ ಜಿಲ್ಲಾಧ್ಯಕ್ಷ ಪ್ರಶಾಂತ್ ಗಂಗೊಳ್ಳಿ ತಿಳಿಸಿದರು.

ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ತಾಲೂಕು ಶುಶ್ರೂಷಾಧಿಕಾರಿಗಳ ಸಂಘದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆಯಲ್ಲಿ ಜಿಲ್ಲಾಧ್ಯಕ್ಷ ಪ್ರಶಾಂತ್ ಗಂಗೊಳ್ಳಿ ಮಾತನಾಡಿದರು.

ಸೇವಾ ಮನೋಭಾವ ಇರುವುದು ಶುಶ್ರೂಷಕರಿಗೆ ಮಾತ್ರ. 1820ರಲ್ಲಿ ಇಟಲಿಯಲ್ಲಿ ಜನಿಸಿದ ಫ್ಲಾರೆನ್ಸ್ ನೈಟಿಗೇಲ್ ಅವರು ಶ್ರೀಮಂತ ಮನೆತನದಲ್ಲಿ ಹುಟ್ಟಿದರೂ ಕೂಡ ಬಡವರ ಆರೋಗ್ಯ ಸೇವೆಗೆ ಮುಂದಾಗುತ್ತಾರೆ. ಹಾಗಾಗಿ ಇವರನ್ನು ಆಧುನಿಕ ಶುಶ್ರೂಷಕಿ ಎಂದು ಕರೆಯಲಾಗುತ್ತದೆ ಎಂದರು. ಚಿಕ್ಕವರಿದ್ದಾಗಲೇ ಬಡವರಿಗೆ ಶುಶ್ರೂಷಕ ಸೇವೆ ಪ್ರಾರಂಭಿಸುವ ಇವರನ್ನು, 1859ರಲ್ಲಿ ಇಂಗ್ಲೆಂಡ್‌ನ ಕ್ರಿಮಿಯನ್‌ನಲ್ಲಿ ಯುದ್ಧ ನಡೆಯುತ್ತಿದ್ದಾಗ ಅಲ್ಲಿಗೆ ಕರೆಸಿಕೊಳ್ಳಲಾಗುತ್ತದೆ. ಅಲ್ಲಿ ಉತ್ತಮ ಚಿಕಿತ್ಸೆ ನೀಡಿ ಜನರನ್ನು ಉಳಿಸುತ್ತಾರೆ. ಯುದ್ಧದ ವೇಳೆ ಸೂಕ್ತ ಚಿಕಿತ್ಸೆ ಸಿಗದೇ 100ಕ್ಕೆ 40 ಮಂದಿ ಸಾವನ್ನಪ್ಪುತ್ತಿದ್ದರು. ಈ ವೇಳೆ ಫ್ಲಾರೆನ್ಸ್ ನೈಟಿಗೇಲ್ ಯುದ್ಧ ಭೂಮಿಯಲ್ಲಿ ಸೇವೆ ನೀಡಿ ವಿಶ್ವಕ್ಕೆ ಮಾತೆಯಾಗಿದ್ದರು. ಹಾಗಾಗಿ ಅವರು ಹುಟ್ಟಿದ ದಿನವನ್ನು ಶುಶ್ರೂಷಕರ ದಿನವನ್ನಾಗಿ ಆಚರಿಸಲಾಗುತ್ತದೆ ಎಂದರು.

ದಿನದ 24 ಗಂಟೆ ಸೇವೆ ಮಾಡುವ ವರ್ಗವಿದ್ದರೇ ಅದು ಶುಶ್ರೂಷಕರು ಮಾತ್ರ ಶುಶ್ರೂಷೆ ಎಂಬುದು ಒಂದು ತಪಸ್ಸು. ಒಬ್ಬ ವ್ಯಕ್ತಿ, ರೋಗಿಯನ್ನು ಶುಶ್ರೂಷೆ ಮಾಡುವುದು ಸುಲಭದ ಕೆಲಸವಲ್ಲ. ಒಬ್ಬ ರೋಗಿಯ ಗುಣಮುಖದ ಮೇಲೆ ನಮ್ಮ ಸೇವೆ ಅವಲಂಬಿಸಿರುತ್ತದೆ. ಎಷ್ಟೋ ಮಂದಿ ತಮ್ಮ ತಂದೆ–ತಾಯಿಯನ್ನು ನೋಡಿಕೊಳ್ಳದೇ ಆಸ್ಪತ್ರೆಗಳಲ್ಲಿ ಬಿಟ್ಟು ಹೋಗುತ್ತಾರೆ. ನಮ್ಮ ಶುಶ್ರೂಷಕರು ಅಂತಹವರ ಸೇವಾ ಮಾಡುತ್ತಾ ಅವರ ಜೀವ ಉಳಿಸುವ ಕೆಲಸ ಮಾಡುತ್ತಿದ್ದು, ಅಂತಹ ಒಳ್ಳೆಯ ಕೆಲಸದಲ್ಲಿ ನಾವಿದ್ದೇವೆ ಎಂಬುದು ನಮಗೆ ಹೆಮ್ಮೆ. ಎಲ್ಲರೂ ಒಂದೇ ರೀತಿ ಇರುವುದಿಲ್ಲ. ಆದರೂ ಬಡವರಿಗೆ, ನಿರ್ಗತಿಕರಿಗೆ ಉತ್ತಮ ಸೇವೆ ನೀಡುತ್ತಿದ್ದೇವೆ. ಜೀವ ರಕ್ಷಣೆ ಶುಶ್ರೂಷ ವರ್ಗದಿಂದ ಮಾತ್ರ ಸಾಧ್ಯ. ಅದನ್ನು ಅರ್ಥ ಮಾಡಿಕೊಂಡು ಸೇವೆ ಮಾಡಬೇಕು ಎಂದರು.

ಒಳ್ಳೆಯ ಭಾವನೆಯಿಂದ ಸೇವೆ ಮಾಡೋಣ. ಜೀವ ರಕ್ಷಣೆ ಜೊತೆ ಪರಿಸರ ರಕ್ಷಣೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿ. ಪ್ರತಿಯೊಬ್ಬರೂ ತಮ್ಮ ಮನೆಗಳಲ್ಲಿ ಒಂದು ಗಿಡವನ್ನು ನೆಡಿ. ಪ್ರಸ್ತುತ ಪರಿಸರ ತುಂಬಾ ಹಾಳಾಗಿದೆ. ಹಾಗಾಗಿ ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ ಎಂದರು.

ಕಾರ್ಯಕ್ರಮದಲ್ಲಿ ಡಾ.ದಿನಕರ್, ಸಾರ್ವಜನಿಕ ಆಸ್ಪತ್ರೆ ಶುಶ್ರೂಷಕ ಅಧೀಕ್ಷಕಿ ಪರಿಮಳ ಗಾಳಂಕಿ, ಶುಶ್ರೂಷಕ ಸಂಘದ ಖಜಾಂಚಿ ಪದ್ಮ, ನಿರ್ದೇಶಕರಾದ ಪರಮೇಶ್, ಸುನೀತಾ, ಅಂಬಿಕಾ, ಸುನೀತಾ ಎಚ್, ಉಮೇಶ್, ಸಿರಾಜುದ್ದೀನ್, ಶೃತಿ, ಭವ್ಯ, ನಂದಿನಿ, ಶಿಲ್ಪ ಇದ್ದರು.

ಎನ್‌ಸಿಆರ್ ಇಂಟರ್‌ನ್ಯಾಷನಲ್ ಪ್ರೌಢಶಾಲೆ: 100ರಷ್ಟು ತೇರ್ಗಡೆ



ಪೂರ್ವಿಕ · ಚಂದನ · ಮೌನಶ್ರೀ · ತರುಣ್ · ಚೈತ್ರ · ಸುಹಾಸಿನಿ

ಬನ್ನೂರು, ಮೇ 12– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತುರಗನೂರು ಗ್ರಾಮದ ಎನ್‌ಸಿಆರ್ ಇಂಟರ್‌ನ್ಯಾಷನಲ್ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ ಶೇ.100 ರಷ್ಟು ಫಲಿತಾಂಶ ಬಂದಿದೆ.

ಶಾಲೆಯ ವೈ.ಎಲ್.ಪೂರ್ವಿಕ ಶೇ.91 ಅಂಕಗಳೊಂದಿಗೆ ಶಾಲೆಗೆ ಪ್ರಥಮ ಸ್ಥಾನ, ವೈ.ಎನ್.ಚಂದನ, ಎಚ್.ಪಿ.ಮೌನಶ್ರೀ ತಲಾ ಶೇ.89, ಎಂ.ಆರ್.ತರುಣ್ ಶೇ.87, ವೈ.ಡಿ.ಚೈತ್ರ, ಬಿ.ಸುಹಾಸಿನಿ ತಲಾ ಶೇ.86 ಅಂಕ ಪಡೆದು ಶಾಲೆ ಕೀರ್ತಿ ತಂದಿದ್ದಾರೆ. ಉತ್ತಮ ಫಲಿತಾಂಶಕ್ಕೆ ಕಾರಣರಾದ ವಿದ್ಯಾರ್ಥಿಗಳು ಹಾಗೂ ಶಿಕ್ಷಕ ವೃಂದದವರನ್ನು ಕಾರ್ಯದರ್ಶಿ ಟಿ.ಸಿ.ರಾಜೇಶ್ ಅಭಿನಂದಿಸಿದ್ದಾರೆ.

ಹರವೆ ಬಾಲಕಿಯರ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಶೇ.100 ಫಲಿತಾಂಶ



ಮೋನಿಕಾ/620 · ಶಂಕರಮ್ಮ/589 · ಧನಲಕ್ಷ್ಮೀ/563 · ಜಯಲಕ್ಷ್ಮಿ/560 · ಪೂವಿತಾ/541 · ವಿಜಯಕುಮಾರಿ/539 · ತೇಜಸ್ವಿನಿ/537 · ಸಾಂಘವಿ/533

ಹಿರೀಕ್ಯಾತನಹಳ್ಳಿ, ಮೇ 12– ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿ ಹರವೆ ಗ್ರಾಮದ ಬಾಲಕಿಯರ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಪ್ರಸಕ್ತ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಬಂದಿದೆ ಎಂದು ಪ್ರಾಂಶುಪಾಲ ರಾಮಶೆಟ್ಟಿ ತಿಳಿಸಿದ್ದಾರೆ. ಪರೀಕ್ಷೆ ತೆಗೆದುಕೊಂಡಿದ್ದ 35 ವಿದ್ಯಾರ್ಥಿನಿಯರು ತೇರ್ಗಡೆಯಾಗಿದ್ದು, 9 ಪ್ರಥಮ, 10 ದ್ವಿತೀಯ, 16 ವಿದ್ಯಾರ್ಥಿನಿಯರು ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ರಾಮಶೆಟ್ಟಿ ತಿಳಿಸಿದ್ದಾರೆ.

ಬಸವಣ್ಣನವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಪಾಲಿಸಲು ಸಲಹೆ




ಭೇರ್ಯ, ಮೇ 12– ಇವನಾರವ ಇವನಾರವ ಎನ್ನಿಸದೇ ಇವನಮ್ಮವ ಇವನಮ್ಮವ ಎಂದೆನಿಸಯ್ಯ ಎಂದು ಬಸವಣ್ಣನವರು ಹೇಳಿದಂತೆ ಎಲ್ಲರನ್ನೂ ಸಮಾನವಾಗಿ ಕಾಣಬೇಕು. ಮೇಲು ಕೀಳಿನ ವಿರುದ್ಧ ಹೋರಾಡಿದ ಅವರ ತತ್ವಾದರ್ಶಗಳನ್ನು ಪಾಲಿಸಬೇಕು ಎಂದು ಭೇರ್ಯ ಗ್ರಾಪಂ ಪಿಡಿಓ ಕೆ.ಎ.ಮಂಜುನಾಥ್ ತಿಳಿಸಿದರು.

ಇಲ್ಲಿನ ಗ್ರಾಪಂನಲ್ಲಿ ನಡೆದ ಬಸವ ಜಯಂತಿಯಲ್ಲಿ ಮಾತನಾಡಿದ ಅವರು, ಕಾಯಕದ ಮೂಲಕ ಸಮ ಸಮಾಜ ನಿರ್ಮಿಸಿದ ಮಹಾನ್ ಜ್ಞಾನಿ ಬಸವಣ್ಣನವರು 12ನೇ ಶತಮಾನದಲ್ಲಿ ವಚನಗಳ ಮೂಲಕ ಸಮಾಜವನ್ನು ತಿದ್ದಿ ಅನುಭವ ಮಂಟಪ ನಿರ್ಮಿಸಿ ವಿಶ್ವಕ್ಕೆ ಮಾದರಿಯಾದರು. ಅವರ ತತ್ವ, ವಚನಗಳು ಸಾರ್ವಕಾಲಿಕ. ಅವುಗಳನ್ನು ಪ್ರತಿಯೊಬ್ಬರೂ ಅನುಸರಿಸಬೇಕು ಎಂದರು.

ಕಾಯಕವೇ ಕೈಲಾಸ ಎಂದು ಮಾನವ ಕುಲಕ್ಕೆ ಸಂದೇಶ ನೀಡಿದ, ಸಮಾಜಕ್ಕೆ ತನ್ನದೇ ಆದ ತತ್ವಗಳ ಮೂಲಕ ಜಾಗೃತಿ ಮೂಡಿಸಿದ ಮಹಾ ಸಂತನ ಜನ್ಮದಿನವಾದ ಇಂದು ಬಹಳ ವಿಶಿಷ್ಟವಾಗಿ ಬಸವ ಜಯಂತಿ ಆಚರಿಸಲಾಗುತ್ತಿದೆ ಎಂದರು.

ಇದೇ ವೇಳೆ ಗಣ್ಯರು ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಗ್ರಾಪಂ ಅಧ್ಯಕ್ಷೆ ಜಯಲಕ್ಷ್ಮಿ, ಸದಸ್ಯ ಬಿ.ಪಿ.ಪ್ರಕಾಶ್, ಬಿಲ್ ಕಲೆಕ್ಟರ್ ಕುಮಾರ್, ಸಿಬ್ಬಂದಿಗಳಾದ ಯೋಗ, ಚೆನ್ನರಾಜು, ನಾಗರಾಜು, ಸಾಮಾಜಿಕ ಕಾರ್ಯಕರ್ತ ಡಿ.ಕೃಷ್ಣ ಇದ್ದರು.

ದ್ಯಾವಶೆಟ್ರು ನಿಧನ



ಹೆಚ್.ಡಿ.ಕೋಟೆ, ಮೇ 12– ತಾಲೂಕು ಮಡಿವಾಳ ಸಮಾಜದ ಉಪಾಧ್ಯಕ್ಷ ದ್ಯಾವಶೆಟ್ರು (85) ಭಾನುವಾರ ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 1 ಗಂಟೆಗೆ ಕೂಲ್ಯ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಲ್ಕುಂಡಿಯಲ್ಲಿ ಶ್ರೀನಿವಾಸ್‌ಪ್ರಸಾದ್‌ಗೆ ನುಡಿನಮನ



ಮಲ್ಕುಂಡಿ, ಮೇ 12– ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ಮೌಲ್ಯಗಳನ್ನು ಕಾಪಾಡಿಕೊಂಡು ಅಪರೂಪದ ರಾಜಕಾರಣಿ ಎನಿಸಿದ್ದ ಶ್ರೀನಿವಾಸ್ ಪ್ರಸಾದ್ ಅವರು ಕಂದಾಯ ಸಚಿವರಾಗಿ ಜಾರಿಗೆ ತಂದ ಭೂಮಿ, ಮೈತ್ರಿ ಹಾಗೂ ಮನಸ್ವಿನಿ ಯೋಜನೆಗಳು ಅನೇಕರಿಗೆ ವರದಾನವಾಗಿದೆ ಎಂದು ಬಿಜೆಪಿ ಯುವ ಮುಖಂಡ ಎಂ.ಜಿ.ಮಹದೇವಸ್ವಾಮಿ ತಿಳಿಸಿದರು.

ಗ್ರಾಮದಲ್ಲಿ ನಡೆದ ಸಂಸದ ವಿ.ಶ್ರೀನಿವಾಸ್‌ಪ್ರಸಾದ್ ಅವರ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶ್ರೀನಿವಾಸ್ ಪ್ರಸಾದ್ ಅವರು ಯಾವುದೇ ಪಕ್ಷದಲ್ಲಿದರೂ ತಮ್ಮ ತತ್ವ ಸಿದ್ಧಾಂತಗಳಲ್ಲಿ ರಾಜೀ ಮಾಡಿಕೊಳ್ಳುತ್ತಿರಲಿಲ್ಲ. ಅವರು ಅಪರೂಪದ ವ್ಯಕ್ತಿತ್ವವುಳ್ಳ ರಾಜಕಾರಣಿಯಾಗಿದ್ದರು. ಇಂತಹ ವ್ಯಕ್ತಿತ್ವ ಸಿಗುವುದು ಬಹಳ ಅಪರೂಪ. ಎಲ್ಲಾ ಸಮುದಾಯಗಳಿಗೂ ಗೌರವ ನೀಡುತ್ತಿದ್ದ ಅವರು ಎಲ್ಲಾ ಸಮುದಾಯಕ್ಕೆ ಸೇರಿದ ನಾಯಕರನ್ನು ಬೆಳೆಸಿದ್ದಾರೆ. ಪ್ರಸಾದ್ ಅವರ ನಿಧನದಿಂದ ತುಂಬಲಾರದ ನಷ್ಟ ಉಂಟಾಗಿದೆ ಎಂದು ತಿಳಿಸಿದರು.

ತಾಪಂ ಮಾಜಿ ಸದಸ್ಯ ಎಸ್ ಬಸವರಾಜ್, ಮುಖಂಡರಾದ ಕೆಂಡಪ್ಪ, ವೀರಭದ್ರಪ್ಪ, ಸಣ್ಣಮಾದಪ್ಪ, ಗುರುಮಲ್ಲಪ್ಪ, ರವಿ, ಶಕ್ಲೇಶ್, ಮಹದೇವಪ್ಪ, ಮಹದೇವಸ್ವಾಮಿ, ದಸಂಸ ಮುಖಂಡ ಕೃಷ್ಣ ಶ್ರೀಕಾಂತ್, ಶಂಕರಪ್ಪ ಸೇರಿದಂತೆ ಇತರರಿದ್ದರು.

ಯುಪಿಎಸ್‌ಸಿಯಲ್ಲಿ 777ನೇ ರ್‍ಯಾಂಕ್: ಲೇಖಿನ್‌ಗೆ ಸನ್ಮಾನ



ಹುಣಸೂರು, ಮೇ 12– ಯುಪಿಎಸ್‌ಸಿ ಪರೀಕ್ಷೆಯಲ್ಲಿ 777ನೇ ರ್‍ಯಾಂಕ್ ಪಡೆದ ತಾಲೂಕಿನ ತಿಪ್ಪಲಾಪುರ ಗ್ರಾಮದ ನಿವಾಸಿ ಮಹದೇವು ಮತ್ತು ಶೈಲಜಾ ದಂಪತಿ ಪುತ್ರ ಲೇಖಿನ್ ಸಾಧನೆ ಹುಣಸೂರು ತಾಲೂಕಿಗೆ ಹೆಮ್ಮೆ ಎಂದು ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ ತಿಳಿಸಿದರು.

ದಸಂಸ ವತಿಯಿಂದ ಲೇಖಿನ್ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ಯುಪಿಎಸ್‌ಸಿ ಪರೀಕ್ಷೆ ನಮ್ಮ ದೇಶದ ಅತ್ಯುನ್ನತ ಪರೀಕ್ಷೆಯಾಗಿದ್ದು, ಈ ಪರೀಕ್ಷೆ ಪಾಸ್ ಮಾಡಲು ಸತತ ಪರಿಶ್ರಮ, ಗುರಿಯೊಂದಿಗೆ ಸುದೀರ್ಘ ವಿದ್ಯಾಭ್ಯಾಸ ಅಗತ್ಯ. ಇಂತಹ ಪರೀಕ್ಷೆಯಲ್ಲಿ ಲೇಖಿನ್ ತೇರ್ಗಡೆಯಾಗಿರುವುದು ಹೆಮ್ಮೆಯ ವಿಷಯ. ಇವರ ಸಾಧನೆ ಇಂದಿನ ಯುವ ಪೀಳಿಗೆಗೆ ಸ್ಫೂರ್ತಿಯಾಗಿದೆ. ಹೀಗಾಗಿ ಯುವಕರು ಲೇಖಿನ್ ಅವರನ್ನು ಆದರ್ಶವಾಗಿಟ್ಟುಕೊಂಡು ಮುನ್ನಡೆಯಬೇಕು ಎಂದರು.

ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್ ಮಾತನಾಡಿ, ಲೇಖಿನ್ ತಂದೆ ಉಪನ್ಯಾಸಕ ಮಹದೇವು ನನಗೆ ತುಂಬಾ ಆತ್ಮೀಯರಾಗಿದ್ದರು. ತಂದೆ ಅಕಾಲಿಕ ಸಾವಿನ ನೋವಿನ ನಡುವೆಯೂ ಲೇಖಿನ್ ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವುದು ನಮ್ಮ ತಾಲೂಕು ಹೆಮ್ಮೆ ಪಡುವ ವಿಚಾರ ಎಂದರು.

ಟಿಎಪಿಸಿಎಂಎಸ್ ಅಧ್ಯಕ್ಷ ಬಸವಲಿಂಗಯ್ಯ, ಆದಿಜಾಂಬವ ಸಂಘದ ಡಿ.ಕುಮಾರ್ ಮಾತನಾಡಿದರು. ಈ ವೇಳೆ ದಸಂಸ ಮುಖಂಡ ಕೆಂಪರಾಜು, ಕೃಷ್ಣ ಪೌರಕಾರ್ಮಿಕ ಸಂಘದ ಅಧ್ಯಕ್ಷ ಮುರುಗೇಶ, ಅಲೆಮಾರಿ ಸಂಘದ ಶೇಖರ್, ಹರೀಶ, ದಾಸಪ್ಪ, ಶೋಭ, ರವಿ ಮಧು ಇತರರಿದ್ದರು.

ಎಸ್‌ಎಸ್‌ಎಲ್‌ಸಿಯಲ್ಲಿ ತಿ.ನರಸೀಪುರ ಜಿಲ್ಲೆಗೆ ಪ್ರಥಮ

ಶಿಕ್ಷಕರು, ವಿದ್ಯಾರ್ಥಿಗಳಿಗೆ ಅಭಿನಂದನೆ ತಿಳಿಸಿದ ಬಿಇಓ

ತಿ.ನರಸೀಪುರ, ಮೇ 12– ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಮೈಸೂರು ಜಿಲ್ಲೆಗೆ ತಿ.ನರಸೀಪುರ ತಾಲೂಕು ಪ್ರಥಮ ಸ್ಥಾನ ಪಡೆಯಲು ಶ್ರಮಿಸಿದ ಜಿಲ್ಲಾ ಹಾಗೂ ತಾಲೂಕಿನ ಶಿಕ್ಷಣ ಇಲಾಖೆ ಅಧಿಕಾರಿಗಳು, ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರಿಗೆ ಮತ್ತು ಉತ್ತಮ ಫಲಿತಾಂಶ ನೀಡಿದ ಎಲ್ಲಾ ವಿದ್ಯಾರ್ಥಿಗಳನ್ನು ಅಭಿನಂದಿಸುವುದಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಶೋಭ ತಿಳಿಸಿದರು.



ತಿ.ನರಸೀಪುರದ ಬಿಇಓ ಕಚೇರಿಯಲ್ಲಿ ಬಿಇಓ ಶೋಭಾ ಅವರನ್ನು ಸನ್ಮಾನಿಸಲಾಯಿತು

ಪಟ್ಟಣದ ತಮ್ಮ ಕಚೇರಿಯಲ್ಲಿ ಬಿಜೆಪಿ ಎಸ್‌ಟಿ ಮೋರ್ಚಾ ಜಿಲ್ಲಾಧ್ಯಕ್ಷ ಮುದ್ದುಕೃಷ್ಣ(ಕಿಟ್ಟಿ) ಅವರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಉತ್ತಮ ಫಲಿತಾಂಶಕ್ಕಾಗಿ ಶೈಕ್ಷಣಿಕ ವರ್ಷದ ಪ್ರಾರಂಭದಿಂದಲೇ ವಿವಿಧ ಹಂತದ ಯೋಜನೆಗಳನ್ನು ರೂಪಿಸಿ, ಶಿಕ್ಷಕರಿಗೆ ವಿಷಯವಾರು ಮೂರ್‍ನಾಲ್ಕು ತರಬೇತಿಗಳು, ಪ್ರತಿ ತಿಂಗಳು ಶಿಕ್ಷಕರ ಜೊತೆ ಸಮಾಲೋಚನೆ, ರಾತ್ರಿ ಪಾಳಯದ ತರಗತಿಗಳು, ಮಕ್ಕಳ ಮನೆಗಳಿಗೆ ಭೇಟಿ, ಜಿಲ್ಲಾ ಮಟ್ಟದ ರೇಡಿಯೋ ತರಬೇತಿ ಕಾರ್ಯಕ್ರಮಗಳು ಫಲಿತಾಂಶ ಹೆಚ್ಚಳಕ್ಕೆ ಸಹಕಾರಿಯಾಗಿವೆ ಎಂದರು. ಈ ವೇಳೆ ದೈಹಿಕ ಶಿಕ್ಷಕ ಜಯಪ್ಪ ಹಾಗೂ ಬಸವರಾಜು, ಶಿಕ್ಷಕ–ಶಿಕ್ಷಕಿಯರು ಹಾಜರಿದ್ದರು.

ಸರಗೂರಲ್ಲಿ ಶಂಕರಾಚಾರ್ಯ, ರಾಮಾನುಜಾಚಾರ್ಯ ಜಯಂತಿ



ಸರಗೂರು, ಮೇ 12– ಸನಾತನ ಧರ್ಮವನ್ನು ಎತ್ತಿ ಹಿಡಿದ ಅವತಾರ ಪುರುಷರಲ್ಲಿ ಭಗವತ್ಪಾದ ಶಂಕರಾಚಾರ್ಯರು ಅದ್ವೈತ ಸಿದ್ಧಾಂತ ಪ್ರತಿಪಾದಕರು ಎಂದು ವಿವೇಕಾನಂದ ಆಸ್ಪತ್ರೆ ಕೀಲು ಮೂಳೆ ತಜ್ಞ ವೈದ್ಯ ಡಾ.ಸೀತಾರಾಮ್ ತಿಳಿಸಿದರು.

ಪಟ್ಟಣದ ಶ್ರೀರಾಮ ಮಂದಿರದಲ್ಲಿ ತ್ರಿಮತಸ್ಥ ಬ್ರಾಹ್ಮಣ ಸಂಘದಿಂದ ಆಯೋಜಿಸಿದ್ದ ಶ್ರೀಶಂಕರಚಾರ್ಯ ಜಯಂತಿ ಹಾಗೂ ಶ್ರೀರಾಮಾನುಜಾಚಾರ್ಯರ ಜಯಂತಿಯಲ್ಲಿ ಮಾತನಾಡಿದ ಅವರು, ಶಂಕರಚಾರ್ಯರು 8ನೇ ಶತಮಾನದಲ್ಲಿ (ಕ್ರಿಶ 788) ಕೇರಳದ ಕಾಲಡಿಯಲ್ಲಿ ವೈಶಾಖ ಶುದ್ಧ ಪಂಚಮಿಯಂದು ಜನ್ಮ ತಾಳಿದರು. ತಂದೆ ಶಿವಗುರು, ತಾಯಿ ಆರ್ಯಾಂಬೆ. ಬಾಲ್ಯದಲ್ಲೇ ಪಿತೃ ವಿಯೋಗ. ತದನಂತರ ಅಮ್ಮನ ಒಡನಾಟದಲ್ಲೇ ಬೆಳೆದ ಬಾಲ ಶಂಕರರಿಗೆ ಚಿಕ್ಕಂದಿನಿಂದಲೇ ಸನ್ಯಾಸಾಶ್ರಮ ಸ್ವೀಕರಿಸುವತ್ತ ಒಲವು ಮೂಡಿತು. ಆದರೆ ಆರ್ಯಾಂಬೆಗೆ ಮಗ ಸನ್ಯಾಸಿಯಾಗುವುದು ಇಷ್ಟವಿರಲಿಲ್ಲ. ಕಡೆಗೂ ಆರ್ಯಾಂಬೆ ಶಂಕರರು ಸನ್ಯಾಸಾಶ್ರಮ ಸ್ವೀಕರಿಸಲು ಒಪ್ಪಿಗೆ ಕೊಡುತ್ತಾಳೆ. ಮುಂದೆ ಶಂಕರಾಚಾರ್ಯರು ಓಂಕಾರೇಶ್ವರದಲ್ಲಿ ಗೌಡಪಾದರ ಶಿಷ್ಯರಾದ ಗೋವಿಂದ ಭಗವತ್ಪಾದರಿಂದ 8ನೇ ವಯಸ್ಸಿಗೆ ಸನ್ಯಾಸಾಶ್ರಮ ಸ್ವೀಕರಿಸಿದರು. ಬಳಿಕ ಶಂಕರಾಚಾರ್ಯರು 'ಜಗತ್ ಮಿಥ್ಯಾ ಬ್ರಹ್ಮೈವ ಸತ್ಯಂ' ಎನ್ನುವ ಸಂದೇಶ ಸಾರಿದರು. ಆತ್ಮ ಮತ್ತು ಬ್ರಹ್ಮ ಬೇರೆಯಲ್ಲ. ಎಲ್ಲರೂ ಶಿವನ ಸ್ವರೂಪರೇ, ಎಲ್ಲರೂ ಸಾಕ್ಷಾತ್ ಪರಶಿವನೇ ಆಗಿದ್ದಾರೆ ಎಂದರು.

ಅದ್ವೈತ ಸಿದ್ಧಾಂತ ಪ್ರತಿಪಾದಿಸಿದ ಶ್ರೀಶಂಕರಚಾರ್ಯರು ಜ್ಞಾನ ಸಂಪಾದಿಸದ ಹೊರತು ಅವಿದ್ಯೆ ನಾಶವಾಗುವುದಿಲ್ಲ ಎಂದು ಬೋಧಿಸಿದರು. ಪ್ರಸ್ತುತ ಶ್ರೀಶಂಕರಾಚಾರ್ಯರ ಜಯಂತಿ ಆಚರಿಸುವ ಮೂಲಕ ಅವರ ಅದ್ವೈತ ಸಿದ್ಧಾಂತಗಳನ್ನು ಪ್ರತಿಯೊಬ್ಬರು ಅದರಲ್ಲೂ ಇಂದಿನ ಯುವ ಸಮೂಹ ಮುನ್ನಡೆಸುವ ದಿಕ್ಕಿನಲ್ಲಿ ಸಾಗಲಿ. ಈ ಮೂಲಕ ಶಂಕರ ಜಯಂತಿ ಆಚರಣೆ ನಡೆಯಲಿ ಎಂದರು.

ಲಕ್ಷ್ಮಿನರಸಿಂಹಸ್ವಾಮಿ ದೇವಾಲಯದ ಪ್ರಧಾನ ಅರ್ಚಕ ಶೇಷ ನಾರಾಯಣ್ ಮಾತನಾಡಿ, ಇಂದು ರಾಮಾನುಜಾಚಾರ್ಯರ ಜಯಂತಿ. ಭಾರತೀಯ ಚರಿತ್ರೆಯಲ್ಲಿ ವೇದಾಂತಿಗಳು, ಚಿಂತಕರು, ಯೋಗಿಗಳು, ಮಾನವತಾವಾದಿಗಳು ಮತ್ತು ಚತುರ ಸಂಘಟಕರು ಆಗಿದ್ದವರು ಶ್ರೀರಾಮಾನುಜಚಾರ್ಯರು. ರಾಮಾನುಜರಿಗೂ ಕರ್ನಾಟಕಕ್ಕೂ ಅವಿನಾಭಾವ ನಂಟು. ಆಚಾರ್ಯ ರಾಮಾನುಜರು 12 ವರ್ಷ ತಮ್ಮ ಶಿಷ್ಯ ಸಹಸ್ರ ಪರಿವೃತರಾಗಿ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ವಿಶಿಷ್ಟಾದ್ವೈತ ಸಿದ್ಧಾಂತದ ವಿಜಯಧ್ವಜವನ್ನು ಉಜ್ವಲಗೊಳಿಸಿ, ಕ್ಷೇತ್ರಮೂರ್ತಿ ತಿರುನಾರಾಯಣನ ಸೇವೆಗಾಗಿ ಸ್ಥಾಪಿಸಿದ ಪೀಠವೇ ಯದುಗಿರಿ ಯತಿರಾಜ ಮಠ. ಅನೇಕ ವಿದ್ವತ್ ವಿಭೂತಿಗಳು ಆ ದಿವ್ಯ ಪರಂಪರೆಯನ್ನು ಮುನ್ನಡೆಸಿ ಭಗವದ್ ರಾಮಾನುಜರ ಸತ್ ಸಂಪ್ರದಾಯ ರಕ್ಷಿಸಿರುತ್ತಾರೆ. ಇಂತಹ ಪುಣ್ಯ ಪುರುಷರ ಜಯಂತಿಯನ್ನು ನಾವೆಲ್ಲಾ ಆಚರಣೆ ಮಾಡುವ ಮೂಲಕ ದಿವ್ಯ ಪರಂಪರೆ ಉಳಿಸಿ ಬೆಳೆಸೋಣ ಎಂದರು.

ಈ ವೇಳೆ ತಾಲೂಕು ತ್ರಿಮತಸ್ಥ ಬ್ರಾಹ್ಮಣ ಸಂಘದ ಗೌರವಾಧ್ಯಕ್ಷ ಎಸ್.ಎ.ಸಾಂಬವಮೂರ್ತಿ, ಅಧ್ಯಕ್ಷ ಗುರುಪ್ರಸಾದ್, ಉಪಾಧ್ಯಕ್ಷ ಶಶಿಧರ್, ಗೋಪಿನಾಥ್, ಪ್ರಧಾನ ಕಾರ್ಯದರ್ಶಿ ಕಿತ್ತೂರು ಭಾಸ್ಕರ್, ಖಜಾಂಚಿ ಎಸ್.ನಾರಾಯಣ್, ಸಹ ಕಾರ್ಯದರ್ಶಿ ಅಶ್ವಿನ್ ಕೌಂಡಿನ್ಯ ಸಂಘಟನಾ ಕಾರ್ಯದರ್ಶಿ ರಮೇಶ್, ಪುರೋಹಿತ್ ಹರೀಶ್, ಶ್ರೀವತ್ಸ್, ನಿರ್ದೇಶಕರಾದ ರವಿದಾಸ್, ಕೆ.ವಿ.ಸೀತಾರಾಮ್, ಸಂಧ್ಯಾ, ಲತಾ, ಹೇಮಲತಾ, ಕಸ್ತೂರಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವಾಲ್ಟರ್ ವೀರಯ್ಯ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಸ್ಟಾರ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಅಂಜನೀಪುತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಅರಮನೆ 4 (ಕ)	4 ಪ್ರದರ್ಶನಗಳು
ಸಂಗಂ	
ಗ್ರೇ ಗೇಮ್ಸ್ (ಕ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅರಮನೈ 4 (ತ)	4 ಪ್ರದರ್ಶನಗಳು
ಪ್ರಭಾ	
ನೈಟ್‌ಕರ್ಫ್ಯೂ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿ ಬಾಯ್ ಅಂಡ್ ದಿ ಹೆರಾನ್ (ಜ): ಬೆ.11.20ಕ್ಕೆ, ಸಂ.4.20ಕ್ಕೆ, ಗ್ರೇ ಗೇಮ್ಸ್ (ಕ): ಮ.1.50ಕ್ಕೆ, ಆವೇಶಂ (ಮ): ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.40ಕ್ಕೆ, ಸ್ಟಾರ್ (ತ): ಮ.1ಕ್ಕೆ, ಸಂ.4.05ಕ್ಕೆ, ರಾಮನ ಅವತಾರ (ಕ): ರಾ.7.05ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10.05ಕ್ಕೆ.
ಸ್ಕ್ರೀನ್ 3	ಅಲೈಕ್ಯಾ (ಕ): ಬೆ.10.55ಕ್ಕೆ, ಪವರ್ (ಕ): ಮ.1.15ಕ್ಕೆ, ಶ್ರೀಕಾಂತ್ (ಹಿಂ): ಸಂ.4.30ಕ್ಕೆ, ರಾ.7.10ಕ್ಕೆ, ಕೃಷ್ಣಮ್ಮ (ತೆ): ರಾ.9.55ಕ್ಕೆ.
ಸ್ಕ್ರೀನ್ 4	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.35ಕ್ಕೆ, ಮ.1.25ಕ್ಕೆ, ಸಂ.4.15ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, O2 (ಕ): ರಾ.7.30ಕ್ಕೆ.
ಸ್ಕ್ರೀನ್ 2	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ.
ಸ್ಕ್ರೀನ್ 3	ಯುವ (ಕ): ಬೆ.10.10ಕ್ಕೆ, O2 (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷಂಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ.

MVC ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬಿಜೆಪಿ ಕಚೇರಿಯಲ್ಲಿ ಶ್ರೀ ಶಂಕರಾಚಾರ್ಯರ ಜಯಂತಿ ಆಚರಣೆ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ , ಶ್ರೀ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿದರು.

ಮೈಸೂರು, ಮೇ 12(ಬಿಎಲ್‌ಯು)– ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಭಾನುವಾರ ಆದಿ ಜಗದ್ಗುರು ಶ್ರೀ ಶಂಕರಾಚಾರ್ಯರ ಜಯಂತಿ ಅಂಗವಾಗಿ ತತ್ವಜ್ಞಾನಿ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಶ್ರೀ ಶಂಕರಾಚಾರ್ಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ, ಶಂಕರಾಚಾರ್ಯರು ಹಿಂದೂ ಧರ್ಮದ ಉಳಿವಿಗಾಗಿ ಕಾಲ್ನಡಿಗೆಯಲ್ಲಿ ಭಾರತವನ್ನು ಮೂರು ಬಾರಿ ಪರ್ಯಟನೆ ಮಾಡಿ ನಾಲ್ಕು ಪೀಠಗಳನ್ನು ಸ್ಥಾಪಿಸಿದ್ದರು ಎಂದರು.

ಹಿಂದೂ ಧರ್ಮವನ್ನು ಪುನರುತ್ಥಾನಗೊಳಿಸಿದ ಶಂಕರಾಚಾರ್ಯರು, ನೂರಾರು ವರ್ಷಗಳ ಹಿಂದೆಯೇ ಸಾಮಾಜಿಕ ಸಾಮರಸ್ಯದ ಸಂದೇಶ ಸಾರಿದರು. ರಾಮಾನುಜಾಚಾರ್ಯರು ಕೂಡ ಹಿಂದೂ ಧರ್ಮಕ್ಕೆ ಶಕ್ತಿ ತುಂಬಿದರು. ಇಬ್ಬರು ಮಹನೀಯರ ಧ್ಯೇಯ, ಸಿದ್ಧಾಂತಗಳು ಇಂದಿಗೂ ಮಾದರಿಯಾಗಿವೆ ಎಂದು ಹೇಳಿದರು.

ಧಾರ್ಮಿಕ ಮಾತ್ರವಲ್ಲದೆ ಸಾಂಸ್ಕೃತಿಕ ಮತ್ತು ವೈಜ್ಞಾನಿಕವಾಗಿ ಹಲವು ಕೊಡುಗೆಗಳನ್ನು ನೀಡಿದ್ದಾರೆ. ಈ ಹಿನ್ನೆಲೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಶಂಕರಾಚಾರ್ಯರ ಜಯಂತಿಯನ್ನು ವಿಶ್ವ ತತ್ವಜ್ಞಾನಿ ದಿನಾಚರಣೆ ಎಂದು ಘೋಷಣೆ ಮಾಡಿದ್ದಾರೆ ಎಂದು ಶ್ರೀವತ್ಸ ತಿಳಿಸಿದರು.

ಈ ವೇಳೆ ಮಾತನಾಡಿದ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಶಂಕರಾಚಾರ್ಯರು ಹಿಂದೂ ಧರ್ಮವನ್ನು ದೇಶದೆಲ್ಲೆಡೆ ಪ್ರಜ್ವಲಿಸುವಂತೆ ಮಾಡಿದರು. ಇಂದಿಗೂ ಸಹ ಶಂಕರಾಚಾರ್ಯರ ತತ್ವಗಳು ಯುವ ಮನಸುಗಳನ್ನು ಸನ್ಮಾರ್ಗದತ್ತ ಕೊಂಡೊಯ್ಯುತ್ತದೆ ಎಂದರು.

ಮಾಜಿ ಮೇಯರ್ ಶಿವಕುಮಾರ್, ಮೈಲ್ಯಾಕ್ ಮಾಜಿ ಅಧ್ಯಕ್ಷ ಎನ್.ವಿ.ಫಣೀಶ್, ಬಿಜೆಪಿ ನಗರ ಉಪಾಧ್ಯಕ್ಷ ಜೋಗಿ ಮಂಜು, ಪ್ರಧಾನ ಕಾರ್ಯದರ್ಶಿ ಹೆಚ್.ಜಿ. ಗಿರಿಧರ್, ಗೋಪಾಲರಾವ್ ಸೇರಿದಂತೆ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಜಿಲ್ಲಾಡಳಿತದಿಂದ ಶ್ರೀ ಶಂಕರಾಚಾರ್ಯರ ಜಯಂತಿ ಆಚರಣೆ



ಕಲಾಮಂದಿರದಲ್ಲಿ ಜಿಲ್ಲಾಡಳಿತದ ವತಿಯಿಂದ ನಡೆದ ಶ್ರೀ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಶಂಕರಾಚಾರ್ಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಮೈಸೂರು, ಮೇ 12(ಎಂಟಿವೈ)– ಮೈಸೂರಿನ ಕಲಾಮಂದಿರದ ಸುಚಿತ್ರಾ ಆರ್ಟ್ ಗ್ಯಾಲರಿಯಲ್ಲಿ ಭಾನುವಾರ ಜಿಲ್ಲಾಡಳಿತದ ವತಿಯಿಂದ ಶ್ರೀ ಶಂಕರಾಚಾರ್ಯರ ಜಯಂತಿಯನ್ನು ಆಚರಿಸಿ ಗೌರವ ಸಮರ್ಪಿಸಲಾಯಿತು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶ್ರೀ ಶಂಕರಾಚಾರ್ಯರ ಭಾವಚಿತ್ರಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಪುಷ್ಪಾರ್ಚನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಮುದಾಯದ ಮುಖಂಡರಾದ ಗೋಪಾಲರಾವ್, ಬಾಲಕೃಷ್ಣ, ಅಜಯ್ ಶಾಸ್ತ್ರಿ, ವಿಕ್ರಂ ಅಯ್ಯಂಗಾರ್, ರಾಕೇಶ್ ಭಟ್, ಅರವಿಂದ ಶರ್ಮ, ಮಂಜುನಾಥ್, ಹರೀಶ್, ಸುಚೀಂದ್ರ, ನಾಗಶ್ರೀ, ಪ್ರಶಾಂತ್, ರಂಗನಾಥ್, ನಾಗರಾಜ್ ಇನ್ನಿತರರು ಇದ್ದರು.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮೇ 12(ಎಂಟಿವೈ)– ಮೈಸೂರಿನ ಸರಸ್ವತಿಪುರಂನ ವಿಜಯ ವಿಠಲ ಶಾಲೆಯ ವಿದ್ಯಾರ್ಥಿ ಎಸ್.ಯಶವಂತ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 514 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ನಿವೇದಿತಾನಗರ ನಿವಾಸಿ ಎಸ್.ಯಶವಂತ್ ಅವರ ತಂದೆ ಎಂ.ಎಲ್. ಸುರೇಶ್ ಎಸ್‌ಎಸ್‌ಎಲ್‌ಸಿ ಪರೀಕ್ಷೆ ದಿನದಂದೆ ಅನಾರೋಗ್ಯದಿಂದ ನಿಧನರಾಗಿದ್ದರು. ದುಃಖದ ನಡುವೆ ಪರೀಕ್ಷೆ ಬರೆದು 514 ಅಂಕ ಪಡೆದಿರುವ ಯಶವಂತ್ ಅವರನ್ನು ಸ್ಥಳೀಯರು ಹಾಗೂ ಶಾಲೆಯ ಸಿಬ್ಬಂದಿಗಳು ಅಭಿನಂದಿಸಿದ್ದಾರೆ.



